ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಸೆಪ್ಟೆಂಬರ್ 27 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 162

ಪುಟಗಳು: 12 ₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23 ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695 ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com,
website: www.mysurumithra.com

ಕತ್ತು ಕತ್ತರಿಸಿ ಪತ್ನಿ ಹತ್ಯೆ: ಪತಿಗೆ ಜೀವಾವಧಿ ಶಿಕ್ಷೆ



ಮೈಸೂರು,ಸೆ.26(ಆರ್‌ಕೆ)– ಕತ್ತು ಕೊಯ್ದು ರುಂಡ–ಮುಂಡ ಬೇರ್ಪಡಿಸಿ ಬರ್ಬರವಾಗಿ ಪತ್ನಿ ಹತ್ಯೆಗೈದಿದ್ದ ಆರೋಪಿಗೆ ಮೈಸೂರು ನ್ಯಾಯಾಲಯವು ಜೀವಾವಧಿ ಶಿಕ್ಷೆ ಹಾಗೂ 15 ಸಾವಿರ ರೂ. ದಂಡ ವಿಧಿಸಿದೆ.

ಮೈಸೂರು ತಾಲೂಕು ಲಲಿತಾದ್ರಿಪುರ ಗ್ರಾಮದ ಜವರಾಜು ಅಲಿಯಾಸ್ ದೇವರಾಜು ಶಿಕ್ಷೆಗೊಳಗಾದ ಆರೋಪಿ. 1998ರ ನವೆಂಬರ್ 1ರಂದು ಚಟ್ನಹಳ್ಳಿ ಗ್ರಾಮದ ಪುಟ್ಟಮ್ಮಿ ಎಂಬುವರನ್ನು ಮದುವೆಯಾಗಿದ್ದ ಆತ, ಆರಂಭದಿಂದಲೂ ಸಣ್ಣಪುಟ್ಟ ವಿಚಾರಕ್ಕೆ ಪತ್ನಿಯೊಂದಿಗೆ ಜಗಳವಾಡುತ್ತಿದ್ದ. ಅಲ್ಲದೆ ಆಕೆಯ ವಿಚಾರದಲ್ಲಿ ಅನುಮಾನಗೊಂಡು, ದೈಹಿಕವಾಗಿಯೂ ಹಲ್ಲೆ ಮಾಡುತ್ತಿದ್ದ. ಪದೇ ಪದೆ ಮದ್ಯಪಾನ ಮಾಡಿಬಂದು ಹೊತ್ತಿಲ್ಲದ ಹೊತ್ತಿನಲ್ಲಿ ದೈಹಿಕ ಸಂಪರ್ಕಕ್ಕೆ ಒತ್ತಾಯಿಸುತ್ತಿದ್ದ. ಪುಟ್ಟಮ್ಮ, ಅದಕ್ಕೆಲ್ಲಾ ಒಪ್ಪದಿದ್ದಾಗ ನಿನ್ನನ್ನು ಕೊಲೆ ಮಾಡುತ್ತೇನೆಂದು ಆಗಾಗ ಬೆದರಿಕೆ ಹಾಕಿದ್ದ. 2022ರ ಜೂನ್ 27ರಂದು ಮಧ್ಯಾಹ್ನ 1.30ರ ವೇಳೆಗೆ ಮಲಗಿದ್ದ ಪುಟ್ಟಮ್ಮಳೊಂದಿಗೆ ದೈಹಿಕ ಸಂಪರ್ಕಕ್ಕೆ ಮುಂದಾಗಿದ್ದ. ಆದರೆ, ಅದಕ್ಕೆ ಪ್ರತಿರೋಧ ವ್ಯಕ್ತಪಡಿಸಿದ ಕಾರಣ ಮಚ್ಚಿನಿಂದ ಪುಟ್ಟಮ್ಮಳ ಕತ್ತು ಕತ್ತರಿಸಿ, ತಲೆಯನ್ನು ಬೇರ್ಪಡಿಸಿ ಮನೆಯ ಹಾಲ್‌ನಲ್ಲಿದ್ದ ದಿವಾನ್‌ಕಾಟ್ ಮೇಲಿಟ್ಟು, ಬಾಗಿಲು ಹಾಕಿಕೊಂಡು ಪರಾರಿಯಾಗಿದ್ದ. ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ವರುಣ ಠಾಣೆ ಸಬ್‌ಇನ್ಸ್‌ಪೆಕ್ಟರ್ ಜಿ.ಎಸ್.ಸ್ವರ್ಣ, ತನಿಖೆ ನಡೆಸಿ, ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ಮೈಸೂರಿನ 5ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶ ಗುರುರಾಜ್ ಸೋಮಕ್ಕಳವರ್ ವಾದ–ಪ್ರತಿವಾದಗಳನ್ನು ಆಲಿಸಿ, ಸಾಕ್ಷ್ಯಾಧಾರಗಳಿಂದ ಕೊಲೆಗೈದಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಆರೋಪಿ ದೇವರಾಜುಗೆ ಐಪಿಸಿ ಸೆಕ್ಷನ್ 498/ಎ ಅಪರಾಧಕ್ಕೆ 3 ವರ್ಷ ಕಠಿಣ ಶಿಕ್ಷೆ, 5 ಸಾವಿರ ರೂ. ದಂಡ ಹಾಗೂ ಕಲಂ 302 ಅಪರಾಧಕ್ಕೆ ಜೀವಾವಧಿ ಶಿಕ್ಷೆ ಹಾಗೂ 10 ಸಾವಿರ ರೂ ದಂಡ ವಿಧಿಸಿ, ಇಂದು ತೀರ್ಪು ನೀಡಿದ್ದಾರೆ. ಸರ್ಕಾರಿ ಅಭಿಯೋಜಕ ಬಿ.ಇ. ಯೋಗೇಶ್ವರ್ ಅವರು ಸರ್ಕಾರದ ಪರವಾಗಿ ವಾದ ಮಂಡಿಸಿದ್ದರು.

ಭಾರತೀಯ ತಂಡವನ್ನು ಪ್ರತಿನಿಧಿಸಿದ್ದ ಮೈಸೂರಿನ ಥ್ರೋಬಾಲ್ ಆಟಗಾರನಿಗೆ ಅಭಿನಂದನೆ

ಮೈಸೂರು, ಸೆ.26(ಜಿಎ)–ಇತ್ತೀಚೆಗೆ ಮಲೇಷಿಯಾದಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಥ್ರೋಬಾಲ್ ಚಾಂಪಿಯನ್‌ಷಿಪ್ ಪಂದ್ಯಾವಳಿಯಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ತಂಡವು ಜಯಗಳಿಸಿದ್ದು, ಈ ತಂಡಕ್ಕೆ ಆಯ್ಕೆಗೊಂಡಿದ್ದ ಮೈಸೂರಿನ ತಾಂಡವಪುರದಲ್ಲಿ ಎಂಇಟಿ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಯನ್ನು ಸಂಸ್ಥೆಯು ಅಭಿನಂದಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಕಾಲೇಜಿನ ಜಂಟಿ ಕಾರ್ಯದರ್ಶಿ ಡಾ.ಎಚ್.ಕೆ. ಏತನ್ ಈ ವಿಷಯ ತಿಳಿಸಿ, ನಮ್ಮ ಸಂಸ್ಥೆಯ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ಕೋರ್ಸ್ ವಿದ್ಯಾರ್ಥಿ ಎನ್.ಜೆ. ಪ್ರೇಮ್‌ಕುಮಾರ್ ಈಚೆಗೆ ಮಲೇಷಿಯಾದಲ್ಲಿ ನಡೆದ ಅಂತರರಾಷ್ಟ್ರೀಯ ಮಟ್ಟದ ಥ್ರೋಬಾಲ್ ಚಾಂಪಿಯನ್‌ಷಿಪ್ ಪಂದ್ಯಾವಳಿಯಲ್ಲಿ ಭಾರತವನ್ನು ಪ್ರತಿನಿಧಿಸಿದ ತಂಡದಲ್ಲಿದ್ದರು. ಈ ತಂಡ ಫೈನಲ್‌ನಲ್ಲಿ ಜಯ ಗಳಿಸಿದೆ. ಹೀಗಾಗಿ ತಮ್ಮ ಶಿಕ್ಷಣ ಸಂಸ್ಥೆ ಪ್ರೇಮ್‌ಕುಮಾರ್ ಅವರನ್ನು ಅಭಿನಂದಿಸಿದೆ ಎಂದರು.

ವಿದ್ಯಾರ್ಥಿಯು ಹುಣಸೂರು ತಾಲೂಕು ನಾಗಮಂಗಲ ಗ್ರಾಮದ ಜಲೇಂದ್ರ ಮತ್ತು ರೂಪ ದಂಪತಿ ಪುತ್ರರಾಗಿದ್ದು, ಬಾಲ್ಯದಿಂದಲೂ ಓದಿನ ಜೊತೆಗೆ ಕ್ರೀಡೆಯಲ್ಲಿಯೂ ಆಸಕ್ತಿ ಬೆಳೆಸಿಕೊಂಡಿದ್ದಾರೆ. ಹೀಗಾಗಿ ಈ ಸಾಧನೆ ಮಾಡಿ ಕಾಲೇಜಿಗೆ ಕೀರ್ತಿ ತಂದಿದ್ದಾರೆ ಎಂದು ಸಂತಸ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಕ್ರೀಡಾಪಟು ಎನ್.ಜೆ.ಪ್ರೇಮ್‌ಕುಮಾರ್, ಕಾಲೇಜಿನ ಮೊಹಮ್ಮದ್ ಸಲಾಮತ್, ಗಣೇಶ್, ಆಲ್ವಿನ್ ಉಪಸ್ಥಿತರಿದ್ದರು.

ಹಿಂದೂ ದೇವಾಲಯ, ಧಾರ್ಮಿಕ ಕೇಂದ್ರಗಳಿಗೆ ಮುಕ್ತಿ ಕಲ್ಪಿಸಲು ಆಗ್ರಹ

ವಿಶ್ವ ಹಿಂದೂ ಪರಿಷತ್ ವತಿಯಿಂದ ಮನವಿ



ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಮಹೇಶ್ ಕಾಮತ್ ನೇತೃತ್ವದಲ್ಲಿ ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟಿಸಿ, ತಹಸೀಲ್ದಾರ್ ಶಿವಪ್ರಸಾದ್ ಮೂಲಕ ಹಿಂದೂ ದೇವಾಲಯ ಮತ್ತು ಧಾರ್ಮಿಕ ಕೇಂದ್ರಗಳನ್ನು ಸರ್ಕಾರದಿಂದ ಮುಕ್ತಿಗೊಳಿಸಲು ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಮೈಸೂರು, ಸೆ. 26– ವಿಶ್ವ ಹಿಂದೂ ಪರಿಷತ್ ಅಧ್ಯಕ್ಷ ಮಹೇಶ್ ಕಾಮತ್ ನೇತೃತ್ವದಲ್ಲಿ ಮೈಸೂರಿನ ಸಿದ್ಧಾರ್ಥ ಲೇಔಟ್‌ನಲ್ಲಿರುವ ಜಿಲ್ಲಾಧಿಕಾರಿ ಕಚೇರಿ ಮುಂದೆ ಪ್ರತಿಭಟಿಸಿ ಡಿಸಿ ಕಚೇರಿಯ ತಹಸೀಲ್ದಾರ್ ಶಿವಪ್ರಸಾದ್ ಅವರ ಮೂಲಕ ಹಿಂದೂ ದೇವಾಲಯ ಮತ್ತು ಧಾರ್ಮಿಕ ಕೇಂದ್ರಗಳನ್ನು ಸರ್ಕಾರದಿಂದ ಮುಕ್ತಿಗೊಳಿಸಲು ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಬಳಿಕ ಮಾತನಾಡಿದ ಮಹೇಶ್ ಕಾಮತ್, ಅನಾದಿ ಕಾಲದಿಂದ ಸನಾತನ ಹಿಂದೂ ಧರ್ಮ, ಧಾರ್ಮಿಕ ಕೆಲಸ ಮಾಡುತ್ತಾ ಬಂದಿದೆ. ದೇಶದಲ್ಲಿ ಮುಸಲ್ಮಾನರಿಗೆ ವಕ್ಫ್ ಬೋರ್ಡ್ ಹಾಗೂ ಕ್ರೈಸ್ತರಿಗೆ ಅವರದೇ ಬೋರ್ಡ್ ಇದ್ದು ಬಹುಸಂಖ್ಯಾತರಾದ ಹಿಂದುಗಳಿಗೆ ಸನಾತನ ಬೋರ್ಡ್ ಏತಕ್ಕೆ ರಚಿಸಬಾರದು. ಸರ್ಕಾರ, ಕೇವಲ ದೇವಸ್ಥಾನಗಳನ್ನು ಮುಜರಾಯಿ ಇಲಾಖೆಗೆ ಸೇರಿಸಿದೆ. ಭಕ್ತರ ದೇಣಿಗೆಯಿಂದ ದೇವಸ್ಥಾನಗಳು ನಡೆಯುವಂತೆ ಮಾಡಿ ದೇವಸ್ಥಾನದ ಆಡಳಿತ ಮಂಡಳಿಗೆ ಸಂಪೂರ್ಣ ಸ್ವಾಧೀನತೆ ಕೊಡಬೇಕು. ಇದರಿಂದ ಮುಂದೆಂದೂ ಯಾವುದೇ ಧರ್ಮದವರು ಸರ್ಕಾರ ರಚಿಸಿದರೂ ಹಸ್ತಕ್ಷೇಪ ಮಾಡಲು ಸಾಧ್ಯವಾಗದು. ಇತ್ತೀಚೆಗೆ ತಿರುಪತಿಯಲ್ಲಿ ನಡೆದ ಜಾನುವಾರು, ಹಂದಿ ಕೊಬ್ಬು ಹಾಗೂ ಮೀನಿನ ಎಣ್ಣೆಯನ್ನು ಲಾಡುವಿಗೆ ಬೆರೆಸಿದ ಘಟನೆಗೆ ಹಿಂದಿನ ಜಗನ್‌ಮೋಹನ್ ರೆಡ್ಡಿ ಸರ್ಕಾರ ಅನ್ಯ ಧರ್ಮದವರ ಟಿಟಿಡಿಯ ಆಡಳಿತ ಮಂಡಳಿಗೆ ನೇಮಿಸಿತ್ತು. ಖರೀದಿಸಿದ ಕಳಪೆ ತುಪ್ಪದಿಂದ ಇಡೀ ಕ್ಷೇತ್ರ ಅಪವಿತ್ರಗೊಂಡಿತು. ಆದ್ದರಿಂದ ಎಲ್ಲಾ ಹಿಂದೂ ದೇವಸ್ಥಾನ ಹಾಗೂ ಧಾರ್ಮಿಕ ಕೇಂದ್ರಗಳು ಸರ್ಕಾರದಿಂದ ಮುಕ್ತಿ ಹೊಂದಬೇಕೆಂದು ಆಗ್ರಹಿಸಿದ್ದಾರೆ.

ಉಪಾಧ್ಯಕ್ಷ ಜಗದೀಶ್ ಹೆಬ್ಬಾರ್, ಅಂಬಿಕಾ ಜೀವನ್, ಸಹ ಕಾರ್ಯದರ್ಶಿ ಪುನೀತ್ ಜಿ ಕೂಡ್ಲೂರು, ಜಯಶ್ರೀ ಶಿವರಾಂ, ಗೋರಕ್ಷಾ ಪ್ರಮುಖ್ ಶಿವರಾಜ್, ಸೇವಾ ಪ್ರಮುಖ್ ಲೋಕೇಶ್, ಸವಿತಾ ಘಾಟ್ಕೆ ಸೇರಿದಂತೆ ಹಲವು ಹಿಂದೂ ಕಾರ್ಯಕರ್ತರು ಈ ವೇಳೆ ಹಾಜರಿದ್ದರು.

ಇಂದು ಸೇವಾ, ಸಂಗೀತ ಕಾರ್ಯಕ್ರಮ

ಮೈಸೂರು,ಸೆ.26–ಮೈಸೂರು ಶಿವರಾಂಪೇಟೆಯ ಶ್ರೀರಾಮಾಭ್ಯುದಯ ಸಭಾ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀಕ್ರೋಧಿನಾಮ ಸಂವತ್ಸರದ ಮಹಾಗಣಪತಿ ಪೂಜಾ ಮಹೋತ್ಸವ ಮಂಗಳ ಪ್ರಯುಕ್ತ ಸೆ.27ರ ಶುಕ್ರವಾರದಂದು ಸಂಜೆ 5 ಗಂಟೆಗೆ ದೃಷ್ಟಿದೋಷದವರಿಗೆ, ವಿಶೇಷ ಚೇತನರಿಗೆ, ಅನಾಥಾಶ್ರಮ, ವೃದ್ಧಾಶ್ರಮಗಳು, ವೃದ್ಧರಿಗೆ ಅವಶ್ಯಕವಾದ ಸಾಮಗ್ರಿಗಳನ್ನು ವಿತರಿಸುವ ಕಾರ್ಯಕ್ರಮ ಮತ್ತು ಸಂಜೆ 6.30 ಗಂಟೆಗೆ ಶ್ರೀ ರಾಮಮಂದಿರದ ಆವರಣದಲ್ಲಿ ಕು.ಮೇಘನಾ ಸತೀಶ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಕಾರ್ಯಕ್ರಮ ಏರ್ಪಡಿಸಲಾಗಿದೆ. ಇವರಿಗೆ ಪಕ್ಕವಾದ್ಯದಲ್ಲಿ ವಿದ್ವಾನ್ ರತ್ನತೇಜ–ಪಿಟೀಲು, ವಿದ್ವಾನ್ ಪ್ರಣವ್ ಸುಬ್ರಹ್ಮಣ್ಯ–ಮೃದಂಗದಲ್ಲಿ ಸಹಕಾರ ನೀಡಲಿದ್ದಾರೆ. ಕಾರ್ಯಕ್ರಮಕ್ಕೆ ಡಾ.ಎಂ.ಎಸ್.ರಂಗನಾಥ್, ಸೀನಿಯರ್ ಸರ್ಜನ್ ಮತ್ತು ಯೂರಾಲಜಿಸ್ಟ್ ಹಾಗೂ ಅಧ್ಯಕ್ಷರು, ಎನ್‌ಐಇ ಸೊಸೈಟಿ ಮುಖ್ಯ ಅತಿಥಿಗಳಾಗಿರುವರು. ಎಸ್‌ರಾಮಪ್ರಸಾದ್, ಸ್ಥಾಪಕ ಅಧ್ಯಕ್ಷರು, ಕರ್ನಾಟಕ ಮುಕ್ತ ಸಾಹಿತ್ಯ ಅಕಾಡೆಮಿ ಹಾಗೂ ವಿಜ್ಞಾನ ಲೇಖಕರು ವಿಶೇಷ ಆಹ್ವಾನಿತರಾಗಿರುವರು ಎಂದು ಟ್ರಸ್ಟ್ ಅಧ್ಯಕ್ಷ ಡಾ.ಎನ್.ಶ್ರೀರಾಮ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಆಗ್ರಹಿಸಿ ವಿಧಾನಸೌಧದ ಗಾಂಧಿ ಪ್ರತಿಮೆ ಮುಂದೆ ಬಿಜೆಪಿ ಧರಣಿ



ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯಿಸಿ ರಾಜ್ಯ ಬಿಜೆಪಿ ವಿಧಾನಸೌಧದ ಮಹಾತ್ಮ ಗಾಂಧಿ ಪ್ರತಿಮೆ ಮುಂಭಾಗ ಗುರುವಾರ ಧರಣಿ ನಡೆಸಿತು.

ಬೆಂಗಳೂರು, ಸೆ.26(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಾಯಿಸಿ ರಾಜ್ಯ ಬಿಜೆಪಿ ವಿಧಾನಸೌಧದ ಮಹಾತ್ಮ ಗಾಂಧಿ ಪ್ರತಿಮೆ ಮುಂಭಾಗ ಇಂದು ಬೃಹತ್ ಪ್ರತಿಭಟನೆ ನಡೆಸಿತು.

ಮುಡಾ ನಿವೇಶನಗಳನ್ನು ಕೊಳ್ಳೆ ಹೊಡೆದ ಭ್ರಷ್ಟ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ನೀಡಬೇಕು, ಬೆಲೆ ಏರಿಕೆ, ತೆರಿಗೆ ಏರಿಕೆ ಖಂಡನೀಯ ಎಂಬ ಘೋಷಣೆಗಳನ್ನು ಕೂಗಲಾಯಿತು. ಬಿಜೆಪಿ ಪ್ರಮುಖರು ಮಾತನಾಡಿ, ಹಲವು ಹಗರಣಗಳ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಕೂಡಲೇ ರಾಜೀನಾಮೆ ನೀಡಬೇಕು, ಕರ್ನಾಟಕ ಕಂಡ ಅತ್ಯಂತ ಭ್ರಷ್ಟ ಸರ್ಕಾರ ಇದು ಎಂದು ಟೀಕಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ್, ಉಪನಾಯಕ ಅರವಿಂದ ಬೆಲ್ಲದ್, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಎನ್.ರವಿಕುಮಾರ್, ಪಕ್ಷದ ಸಂಸದರು, ಶಾಸಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಸೇವಾ ಭೂಷಣ ಪ್ರಶಸ್ತಿಗೆ ಹುಯಿಲಾಳು ರಾಮಸ್ವಾಮಿ ಆಯ್ಕೆ



ಮೈಸೂರು: ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಕೊಡಮಾಡುವ ಸೇವಾಭೂಷಣ ಪ್ರಶಸ್ತಿಗೆ ರಂಗಭೂಮಿ ಕಲಾವಿದ ಹುಯಿಲಾಳು ರಾಮಸ್ವಾಮಿ ಆಯ್ಕೆಯಾಗಿದ್ದಾರೆ. ಸೆ.28ರಂದು ಕಲಾಮಂದಿರದ ಕಿರುರಂಗಮಂದಿರದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಗಾಂಧಿ ಜಯಂತಿ ಪ್ರಯುಕ್ತ ಮಾಂಸ ಮಾರಾಟ ನಿಷೇಧ

ಮೈಸೂರು,ಸೆ.26–ಅ.2ರಂದು ಗಾಂಧಿ ಜಯಂತಿ ಪ್ರಯುಕ್ತ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕುರಿ, ಮೇಕೆ, ಕೋಳಿ ಮಾಂಸ, ಹಂದಿ ಮಾಂಸ ಮತ್ತು ಮೀನು ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದ್ದು, ಪಾಲಿಕೆ ವ್ಯಾಪ್ತಿಯಲ್ಲಿರುವ ವಿವಿಧ ಮಾಂಸದ ಅಂಗಡಿಗಳನ್ನು ಮುಚ್ಚಲು ಆದೇಶ ನೀಡಲಾಗಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಇಂದು ಮ್ಯಾರಥಾನ್ ಸ್ಪರ್ಧೆ ಕಾರ್ಯಕ್ರಮ

ಮೈಸೂರು: ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ವತಿಯಿಂದ ವಾರ್ಷಿಕ ಕ್ರಿಯಾ ಯೋಜನೆ 2024–25ರ ಯುವಜನೋತ್ಸವ ಕಾರ್ಯಕ್ರಮದ ಪ್ರಯುಕ್ತ ಸೆ.27ರಂದು ಬೆಳಗ್ಗೆ 7.30 ಗಂಟೆಗೆ ಜಿಲ್ಲಾ ಮಟ್ಟದ ಮ್ಯಾರಥಾನ್ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಮ್ಯಾರಥಾನ್ ಸ್ಪರ್ಧೆಯು ಜೆಎಸ್‌ಎಸ್ ಮಹಿಳಾ ಕಾಲೇಜು ಸರಸ್ವತಿಪುರಂನಿಂದ ಪ್ರಾರಂಭಗೊಂಡು ಅಗ್ನಿಶಾಮಕ ಠಾಣೆಯಿಂದ ರಾಮಸ್ವಾಮಿ ಸರ್ಕಲ್‌ನಿಂದ ಎಡಕ್ಕೆ ತಿರುಗಿ ಮಹಾರಾಣಿ ವಿಜ್ಞಾನ ಕಾಲೇಜಿನಿಂದ ಹಳೆಯ ಡಿ.ಸಿ ಕಚೇರಿ ಮುಖಾಂತರ ಓವೆಲ್ ಗ್ರೌಂಡ್ ರಸ್ತೆಯ ಮೂಲಕ ಕುಕ್ಕರಹಳ್ಳಿ ರಸ್ತೆಯ ಸ್ವೀಟ್ ಪ್ಯಾಲೇಸ್ ಹತ್ತಿರ ಬಲಕ್ಕೆ ತಿರುಗಿ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಮುಕ್ತಾಯಗೊಳ್ಳಲಿದೆ ಎಂದು ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕದ ಜಿಲ್ಲಾ ಕಾರ್ಯಕ್ರಮಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಂಡಿತ್ ದೀನದಯಾಳ್ ಉಪಾಧ್ಯಾಯರ ಜನ್ಮದಿನ ಆಚರಣೆ



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದಲ್ಲಿ ಪಂಡಿತ್ ದೀನದಯಾಳ್ ಉಪಾಧ್ಯಾಯರ ಜನ್ಮದಿನ ಆಚರಿಸಲಾಯಿತು. ಚಾಮುಂಡೇಶ್ವರಿ ಮಂಡಲದ ಅಧ್ಯಕ್ಷರಾದ ಪೈಟಿ.ರವಿ. ಲಕ್ಷ್ಮೀಪುರ, ನಿಕಟಪೂರ್ವ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಜಿಲ್ಲಾ ಕಾರ್ಯದರ್ಶಿ ಮೋನಿಕಾ, ಹಿರಿಯ ಮುಖಂಡ ಎಸ್.ಆರ್.ಗೋಪಾಲ್‌ರಾವ್, ಹಿನಕಲ್ ಶ್ರೀನಿವಾಸ್, ಉಪಾಧ್ಯಕ್ಷರಾದ ಕರ್ಗಳ್ಳಿ ರೇವಣ್ಣ, ಶ್ರೀಕಂಠು, ಶಿವು ಚಿಕ್ಕಾನ್ಯ, ಹೇಮಂತ್, ಈರಪ್ಪ, ಸವಿತಾ, ಮೋಹನ್, ಮಂಜುಳಾ, ಅನಿತಾ ಭಾರತಿ ಪಶುಪತಿ, ಮಹೇಶ್, ತೇಜು, ಗೀತಾ, ನಾರಾಯಣಚಾರ್, ಅನಿತಾ ಮಹಾದೇವಸ್ವಾಮಿ, ಶರತ್, ರಮೇಶ್ ಇತರರಿದ್ದರು.

ಜಾತಿಗಣತಿ ಜಾರಿ ವಿರೋಧಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಷಡ್ಯಂತ್ರ



ಮೈಸೂರು,ಸೆ.26(ಜಿಎ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜಾತಿ ಗಣತಿ (ಕರ್ನಾಟಕ ಸಾಮಾಜಿಕ ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆ) ವರದಿ ಜಾರಿಗೆ ತರಲು ಮುಂದಾಗಿದ್ದನ್ನು ಸಹಿಸದೆ ಅವರ ವಿರುದ್ಧ ಷಡ್ಯಂತ್ರ ಮಾಡಲಾಗುತ್ತಿದ್ದು, ಮುಡಾ ಹಗರಣ ತನಿಖೆಯೂ ಅದರ ಭಾಗವಾಗಿಯೇ ನಡೆಯುತ್ತಿದೆ ಎಂದು ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆ ಜಾರಿ ಬಗ್ಗೆಯೂ ಬಿಜೆಪಿ ಮತ್ತು ಜೆಡಿಎಸ್ ಪಕ್ಷ ಅಸಮಾಧಾನ ಹೊಂದಿದ್ದು, ಸಿದ್ದರಾಮಯ್ಯ ವಿರುದ್ಧ ದ್ವೇಷ ಕಾರುತ್ತಿವೆ ಎಂದರು. ಮುಡಾ ಹಗರಣದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಪಾಲು ದೊಡ್ಡದಿದ್ದು, ಮುಖ್ಯಮಂತ್ರಿ ವಿರುದ್ಧ ಮಾತನಾಡುವ ನೈತಿಕತೆ ಅವರಿಗಿಲ್ಲ. ಇದೇ ರೀತಿ ಆರೋಪ ಮುಂದುವರಿಸಿದರೆ ಮುಂದಿನ ವಾರ ಬೆಂಗಳೂರಿನ ಅವರ ನಿವಾಸಕ್ಕೆ ಹಿಂದುಳಿದ ವರ್ಗದ ಸದಸ್ಯರು ಮುತ್ತಿಗೆ ಹಾಕಲಿದ್ದಾರೆ ಎಂದು ಎಚ್ಚರಿಸಿದರು. ವಿರೋಧ ಪಕ್ಷಗಳ ಷಡ್ಯಂತ್ರಕ್ಕೆ ಮಣಿದು ಸಿದ್ದರಾಮಯ್ಯ ಅವರು ರಾಜೀನಾಮೆ ಕೊಡುವ ಅಗತ್ಯವಿಲ್ಲ. ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಎಫ್‌ಐಆರ್ ಆಗಿದ್ದರೂ ರಾಜೀನಾಮೆ ನೀಡಿದ್ದಾರೆಯೇ, ಯಡಿಯೂರಪ್ಪ ಕೂಡ ಎಫ್.ಐ.ಆರ್ ಆಗಿದ್ದರೂ ಒಂಬತ್ತು ತಿಂಗಳು ಮುಖ್ಯಮಂತ್ರಿಯಾಗಿ ಅಧಿಕಾರ ನಡೆಸಲಿಲ್ಲವೇ ಎಂದು ಪ್ರಶ್ನಿಸಿದರು. ಸುದ್ದಿಗೋಷ್ಠಿಯಲ್ಲಿ ವೇದಿಕೆ ಮುಖಂಡರಾದ ಲೋಕೇಶ್‌ಕುಮಾರ್ ಮಾದಾಪುರ, ಹರೀಶ್ ಮೋಗಣ್ಣ, ರಾಜೇಶ್ ರವಿನಂದನ್ ಉಪಸ್ಥಿತರಿದ್ದರು.

'ಗ್ಯಾರಂಟಿ ಯೋಜನೆಗಳು ಬಡವರ ಸುರಕ್ಷತೆ ಮತ್ತು ಕಲ್ಯಾಣ' ಕೃತಿ ಬಿಡುಗಡೆ

ಮೈಸೂರಿನ ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ ಸೆ.28ರಂದು ಬೆಳಗ್ಗೆ 10.30ಕ್ಕೆ ಡಿ.ಶ್ರೀನಿವಾಸ ಮಣಗಳ್ಳಿ ಅವರ ಸಂಪಾದಿತ ಕೃತಿ 'ಗ್ಯಾರಂಟಿ ಯೋಜನೆಗಳು ಬಡವರ ಸುರಕ್ಷತೆ ಮತ್ತು ಕಲ್ಯಾಣ' ಬಿಡುಗಡೆ ಮತ್ತು ಸಂವಾದ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕೆ.ಎಸ್.ಶಿವರಾಮು ತಿಳಿಸಿದರು. ಗ್ಯಾರಂಟಿ ಯೋಜನೆಯ ಫಲಾನುಭವಿಗಳು ಕೃತಿ ಬಿಡುಗಡೆ ಮಾಡಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಂಸದ ಸುನೀಲ್ ಬೋಸ್, ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್ ಭಾಗವಹಿಸುವರು. ಕೃತಿ ಕುರಿತು ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ ನಿರ್ದೇಶಕ ಪ್ರೊ.ಎಂ.ಚಂದ್ರ ಪೂಜಾರಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಪುರುಷೋತ್ತಮ ಬಿಳಿಮಲೆ ಮಾತನಾಡುವರು. ನಾಟಕಕಾರ ಕೆ.ವೈ.ನಾರಾಯಣಸ್ವಾಮಿ, ಮೈಸೂರು ವಿಶ್ವವಿದ್ಯಾಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು. ತುಮಕೂರು ವಿವಿ ಪ್ರಾಧ್ಯಾಪಕ ಬಿ.ರಮೇಶ್ ಅಧ್ಯಕ್ಷತೆಯಲ್ಲಿ ಗ್ಯಾರಂಟಿ ಯೋಜನೆಗಳು ಸಾಮಾಜಿಕ–ಆರ್ಥಿಕ ಪರಿಣಾಮಗಳು ಕುರಿತು ವಿಶ್ರಾಂತ ಪ್ರಾಧ್ಯಾಪಕ ಟಿ.ಆರ್.ಚಂದ್ರಶೇಖರ್, ಸಾಮಾಜಿಕ ಕಾರ್ಯಕರ್ತ ಡಾ.ವಾಸು, ಪತ್ರಕರ್ತ ಶಿವಕುಮಾರ್, ಪ್ರೊ.ವಿಜಯಲಕ್ಷ್ಮಿ, ಸಹ ಪ್ರಾಧ್ಯಾಪಕ ಅಪ್ಪಗೆರೆ ಸೋಮಶೇಖರ್ ವಿಷಯ ಮಂಡನೆ ಮಾಡಲಿದ್ದಾರೆ ಎಂದು ತಿಳಿಸಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.09.2024 ಶುಕ್ರವಾರ, ಮಳೆ ನಕ್ಷತ್ರ: ಹಸ್ತ, 27.09.2024 ರಿಂದ 09.10.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಪುಷ್ಯ, ರಾಹುಕಾಲ : ಬೆಳಗ್ಗೆ 10.30 ರಿಂದ 12 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ, ಜಿಲ್ಲಾಡಳಿತ, ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಜೆಎಸ್‌ಎಸ್ ಮಹಿಳಾ ಕಾಲೇಜು :** ಯುವ ಜನೋತ್ಸವ, ಜಿಲ್ಲಾ ಮಟ್ಟದ ಮ್ಯಾರಥಾನ್ ಸ್ಪರ್ಧಾ ಕಾರ್ಯಕ್ರಮ, ಉಪಸ್ಥಿತರು : ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಜಿ. ದಿನೇಶ್, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀಮತಿ ಕೆ.ಎಂ. ಗಾಯತ್ರಿ, ಡಾ. ಕೆ.ಹೆಚ್. ಪ್ರಸಾದ್, ಡಾ. ಎಂ.ಎಸ್. ಜಯಂತ್, ಡಾ. ಪೂರ್ಣಿಮಾ, ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತರೆಡ್ಡಿ, ಪಾಲಿಕೆ ಆಯುಕ್ತ ಆಶಾದ್ ಉರ್ ರಹಮಾನ್ ಷರೀಫ್, ಡಾ. ಪಿ.ಸಿ. ಕುಮಾರಸ್ವಾಮಿ, ಬಿ. ನಿರಂಜನಮೂರ್ತಿ, ಡಾ. ರೇಚಣ್ಣ, ಶ್ರೀಮತಿ ಅನುಷ, ಗಿರೀಶ್, ಸ್ಥಳ: ಜೆಎಸ್‌ಎಸ್ ಮಹಿಳಾ ಕಾಲೇಜು ಆವರಣ, ಸರಸ್ವತಿಪುರಂ, ಬೆಳಗ್ಗೆ 7.30ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8 ರಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ನೆಗಡಿ, ಕೆಮ್ಮು ಮತ್ತು ಅಸ್ತಮ ಕಾಯಿಲೆಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಜಿಲ್ಲಾಡಳಿತ, ಪ್ರವಾಸೋದ್ಯಮ ಇಲಾಖೆ : ವಿಶ್ವ ಪ್ರವಾಸೋದ್ಯಮ ದಿನಾಚರಣೆ, ಉಪಸ್ಥಿತರು :** ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ ಮಹದೇವಪ್ಪ, ಅಧ್ಯಕ್ಷತೆ : ಶಾಸಕ ಡಾ. ಟಿ.ಎಸ್.ಶ್ರೀವತ್ಸ, ಮುಖ್ಯ ಅತಿಥಿಗಳು : ಪಶುಸಂಗೋಪನಾ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷ ಅನಿಲ್ ಕುಮಾರ್.ಸಿ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ ರಮೇಶ್ ಬಂಡಿಸಿದ್ದೇಗೌಡ, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷೆ ಡಾ.ಮಾನಸ, ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನಿಲ್ ಬೋಸ್, ಶಾಸಕರಾದ ತನ್ವೀರ್ ಸೇಠ್, ಜಿ.ಟಿ ದೇವೇಗೌಡ, ಡಿ.ರವಿಶಂಕರ್, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಕೆ.ಹರೀಶ್ ಗೌಡ, ವಿಧಾನಪರಿಷತ್‌ನ ಶಾಸಕರಾದ ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ.ಎಸ್, ಕೆ.ವಿವೇಕಾನಂದ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರಿಗೌಡ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕಾವೇರಿ ಜಲಾನಯನ ಯೋಜನೆಯ ಅಚ್ಚುಕಟ್ಟು ಪ್ರಾಧಿಕಾರದ ಅಧ್ಯಕ್ಷ ಮರಿಸ್ವಾಮಿ, ವಿಶೇಷ ಅತಿಥಿಗಳಾಗಿ ಪ್ರವಾಸೋದ್ಯಮ ಇಲಾಖೆ ಕಾರ್ಯದರ್ಶಿ ಸಲ್ಮಾ ಕೆ.ಫಹೀಮ್, ಮೈಸೂರು ಮಹಾನಗರ ಪಾಲಿಕೆ ಹಾಗೂ ಪ್ರಾದೇಶಿಕ ಆಯುಕ್ತ ರಮೇಶ್ ಡಿ.ಎಸ್ ಹಾಗೂ ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ. ರಾಜೇಂದ್ರ ಕೆ.ವಿ, ಸ್ಥಳ:ಮೈಸೂರು ಅರಮನೆ ಆವರಣ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ಅಭಿಜಾತ ಕೇಂದ್ರ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ :** ಶಾಸ್ತ್ರೀಯ ಕನ್ನಡ ಅಧ್ಯಯನದ ಅಂತಾರಾಷ್ಟ್ರೀಯ ಶಿಬಿರ, ಉದ್ಘಾಟನೆ : ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಅಧ್ಯಕ್ಷತೆ : ಕನ್ನಡ ವಿದ್ವಾಂಸ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ, ಆಶಯ ಭಾಷಣ : ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ಡಾ. ಸಂತೋಷ್ ಹಾನಗಲ್, ಮುಖ್ಯ ಅತಿಥಿಗಳು ; ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ ಕುಲಸಚಿವ ಪ್ರೊ. ಕೆ.ಬಿ. ಪ್ರವೀಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸದಸ್ಯ ಟಿ. ಗುರುರಾಜ್, ಸ್ಥಳ: ಸಮಾವೇಶ ಮಂದಿರ, ಕರ್ನಾಟಕ ಮುಕ್ತ ವಿಶ್ವವಿದ್ಯಾನಿಲಯ, ಬೆಳಗ್ಗೆ 10 ರಿಂದ.

■ **ಭಾರತ ಸರಕಾರದ ಜವಳಿ ಮಂತ್ರಾಲಯ, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ :** ಗಾಂಧಿ ಶಿಲ್ಪ ಬಜಾರ್ ಹಾಗೂ ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ಬೆಳಗ್ಗೆ 10 ರಿಂದ.

■ **ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ :** ಬಿಲ್ಡ್‌ಟೆಕ್–24 ಅಂಗವಾಗಿ ಸುಸ್ಥಿರತೆ ಜೀವನದ ರೇಖೆ ಕುರಿತು ತಾಂತ್ರಿಕ ವಿಚಾರ ಸಂಕಿರಣ, ಮುಖ್ಯ ಅತಿಥಿಗಳು : ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ, ಗೌರವ ಅತಿಥಿಗಳು : ಕನ್ಸಲ್ಟಿಂಗ್ ಇಂಜಿನಿಯರ್ ಉಮೇಶ್ ಬಿ. ರಾವ್, ಸ್ಥಳ: ಎಂಬಿಸಿಟಿ ಸಭಾಂಗಣ, ಇಂಡಸ್ಟ್ರಿಯಲ್ ಏರಿಯಾ, ವಿಶ್ವೇಶ್ವರನಗರ, ಬೆಳಗ್ಗೆ 10ಕ್ಕೆ.

■ **ಕಲ್ಪವೃಕ್ಷ ಬೋನ್ಸಾಯ್ ಬುಟೀಕ್ :** ಧರಣಿ ಧಾರಿಣಿ, ಭೂಮಿಯ ಸಂಭ್ರಮಾಚರಣೆ, ಸಸ್ಯಗಳು, ಕುಂಡಗಳು ಮತ್ತು ಆಭರಣಗಳ ಪ್ರದರ್ಶನ ಮತ್ತು ಮಾರಾಟ, ಉದ್ಘಾಟನೆ : 'ಸ್ಟಾರ್ ಆಫ್ ಮೈಸೂರು' ಮತ್ತು 'ಮೈಸೂರು ಮಿತ್ರ' ವ್ಯವಸ್ಥಾಪಕ ಸಂಪಾದಕ ವಿಕ್ರಂ ಮುತ್ತಣ್ಣ, ಸ್ಥಳ: ಕಲ್ಪವೃಕ್ಷ ಬೋನ್ಸಾಯ್ ಬುಟೀಕ್, ಬಂಡಿಪಾಳ್ಯ, ಉತ್ತನಹಳ್ಳಿ ಕ್ರಾಸ್, ಬೆಳಗ್ಗೆ 10.30ಕ್ಕೆ

■ **ಕನ್ನಡ ಕಲಾ ಅಭಿಮಾನಿ ಕ್ಷೌರಿಕ ಸೇವಾ ಬಳಗ :** ಆನೆಗಳ ಮಾವುತರು ಮತ್ತು ಕಾವಾಡಿಗರು ಮತ್ತು ಮಕ್ಕಳಿಗೆ ಉಚಿತ ಕ್ಷೌರಿಕ ಸೇವೆ, ಮುಖ್ಯ ಅತಿಥಿಗಳು : ಅರಣ್ಯ ಸಂರಕ್ಷಣಾಧಿಕಾರಿ ಪ್ರಭುಗೌಡ, ಸಮಾಜ ಸೇವಕ ಡಾ. ರಘುರಾಂ ವಾಜಪೇಯಿ, ಸಾಹಿತಿ ಬನ್ನೂರು ರಾಜು, ನಿತೀನ್ ವೆಂಕಟೇಶ್, ಪ್ರಕಾಶ್, ಆರ್. ಶ್ರೀಪಾಲ್, ಡಾ. ಪ್ರಕಾಶ್‌ಬಾಬು, ಸಂತೋಷ್, ಬಾಲಕೃಷ್ಣ, ನಟೇಶ್ ಕಾಯಕ, ಸ್ಥಳ: ಅರಮನೆ ಆವರಣ, ಬೆಳಗ್ಗೆ 11ಕ್ಕೆ.

■ **ಗಾನಭಾರತೀ :** ಟಿ.ಪಿ. ವೈದ್ಯನಾಥನ್ ಸಂಸ್ಮರಣಾ ಸಂಗೀತ ಕಛೇರಿ, ವಿದುಷಿ ವಿ. ಚೈತ್ರಾ ಸಾಯಿರಾಂ ಅವರಿಂದ ಗಾಯನ, ವಿದುಷಿ ಸಿ.ವಿ. ಶ್ರುತಿ–ಪಿಟೀಲು, ವಿದ್ವಾನ್ ಪುತ್ತೂರ್ ನೀಕ್ಷಿತ್–ಮೃದಂಗ, ವಿದ್ವಾನ್ ವಿ.ಎಸ್. ರಮೇಶ್–ಮೋರ್ಚಿಂಗ್, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಆರ್ಟ್ ಆಫ್ ಲಿವಿಂಗ್ :** ಜಾಗತಿಕ ಸಹಜ ಸಮಾಧಿ ಧ್ಯಾನದ ಕಾರ್ಯಕ್ರಮ, ಸ್ಥಳ: ದಿ ಆರ್ಟ್ ಆಫ್ ಲಿವಿಂಗ್ ಸೆಂಟರ್, ವಿಶ್ವಮಾನವ ಜೋಡಿ ರಸ್ತೆ, ಸರಸ್ವತಿಪುರಂ, ಸಂಜೆ 6.30 ರಿಂದ.

ಹುಣಸೂರಿನಲ್ಲಿಂದು

■ **ಸಾರ್ವಜನಿಕ ಭಕ್ತ ವಿನಾಯಕ ಮಂಡಲಿ :** 57ನೇ ವರ್ಷದ ಗಣೇಶೋತ್ಸವ ಕಾರ್ಯಕ್ರಮದ ಅಂಗವಾಗಿ ಸಂಜೆ 7 ಗಂಟೆಗೆ ಸಹಾಯಕ ಸಾರಿಗೆ ಇಲಾಖೆ ಸಹಯೋಗದಲ್ಲಿ ಹುಣಸೂರಿನ ಶ್ರೀನಿಕೇತನ ನಾಟ್ಯ ಕಲಾ ತಂಡದವರಿಂದ ಭರತ ನಾಟ್ಯ ಕಾರ್ಯಕ್ರಮ, ಸ್ಥಳ: ಮುನೇಶ್ವರ ಕಾವಲ್ ಮೈದಾನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಬಣ್ಣದ ಬಾನಾಡಿಗಳು– ಬಾನುಲಿ ಸರಣಿ, ರಚನೆ : ಡಾ. ಕಲೀಂವುಲ್ಲಾ, ಪ್ರಸ್ತುತಿ: ಜಿ. ಶಾಂತಕುಮಾರ್, 6.40 ಮತ್ತು ಸಂಜೆ 5.45 ಕರಾಮುವಿವಿ ಮುಕ್ತವಾಣಿ–ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಅಧ್ಯಯನ ಅವಕಾಶಗಳನ್ನು ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಭಾಗವಹಿಸುತ್ತಾರೆ: ಎಸ್. ವಿ. ನಿರಂಜನ, ಮುಖ್ಯಸ್ಥರು, ಭೌತಶಾಸ್ತ್ರ ಅಧ್ಯಯನ ವಿಭಾಗ, ಪ್ರಾಯೋಜಕರು : ಕರ್ನಾಟಕ ರಾಜ್ಯ ಮುಕ್ತ ವಿಶ್ವ ವಿದ್ಯಾನಿಲಯ, ಮೈಸೂರು. ಪ್ರಸ್ತುತಿ: ಎನ್. ಕೇಶವಮೂರ್ತಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು–ಯಶವಂತ ಹಳಿಬಂಡಿ, 9.00 ನಮ್ಮ ಆರೋಗ್ಯ–ವಿಶ್ವ ಅಲ್ ಝೈಮರ್ಸ್ ದಿನದ ಸಂದರ್ಭದಲ್ಲಿ ಮರೆವಿನ ಕಾಯಿಲೆ ಆಲ್ ಝೈಮರ್ಸ್ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಅಲ್‌ಝೈಮರ್ಸ್ ಅಂಡ್ ರಿಲೇಟೆಡ್ ಡಿಸಾರ್ಡರ್ಸ್ ಸೊಸೈಟಿ ಆಫ್ ಇಂಡಿಯಾದ ರಾಷ್ಟ್ರೀಯ ಕಾರ್ಯದರ್ಶಿಗಳಾದ ಡಾ. ಹನುಮಂತಾಚಾರ್ ಜೋಷಿ. ಕೆ ಅವರೊಂದಿಗೆ ಮಾತುಕತೆ. ನಂತರ ಮಕ್ಕಳಲ್ಲಿ ಕಂಡು ಬರುವ ಕಣ್ಣಿನ ಅಪರೂಪದ ತೊಂದರೆಗಳು ಮತ್ತು ಚಿಕಿತ್ಸೆ ಕುರಿತು ಹಿರಿಯ ನೇತ್ರತಜ್ಞರು ಹಾಗೂ ಮಕ್ಕಳ ನೇತ್ರ ಶಸ್ತ್ರಚಿಕಿತ್ಸಾ ತಜ್ಞರಾದ ಡಾ. ಕೆ. ವಿ. ರವಿಶಂಕರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ : ಬೇಂದ್ರೆ ಮಂಜುನಾಥ್, 9.30 ಗಾಂಧಿ ಸ್ಮೃತಿ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ಆರ್. ಶಶಿಕಾಂತ್–ವೀಣಾ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಸಂಗೀತ ಸಂಭ್ರಮ ನಾದಾಲಯ ಸಂಗಮ', ಪ್ರಸ್ತುತಿ : ಹೆಚ್. ಎಲ್. ಶಿವಶಂಕರಸ್ವಾಮಿ

ಮಧ್ಯಾಹ್ನ: 12.30 ದೇವರನಾಮ–ಲತಾ ಶೇಖರ್, 12.45 ಕಾದಂಬರಿ ವಿಹಾರ–ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ: ಉಮೇಶ್. ಎಸ್.ಎಸ್, 1.20 ಭಾವಗೀತೆಗಳು– ಕೆ.ಎಸ್. ಸುರೇಖಾ–ದ.ರಾ. ಬೇಂದ್ರೆ ಅವರ ರಚನೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ದಾರಿ ದೀಪ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು: FEBA India, 2.55 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ : ಜಿ.ಕೆ. ರವೀಂದ್ರಕುಮಾರ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ರಾಮಸ್ವಾಮಿ. ಕೆ.ಜಿ – ಹಾಡುಗಾರಿಕೆ, 4.00 ಮಹಿಳಾರಂಗ–ಸಖೀ ಸಂವಾದ, ಮಕ್ಕಳನ್ನು ನೋಡಿಕೊಳ್ಳುವ ವಿಷಯದಲ್ಲಿ ತಂದೆಯ ಪಾತ್ರ. ಪ್ರಸ್ತುತಿ : ಸಹನ ಮತ್ತು ಕೀರ್ತನ, 4.30 ವೃತ್ತಿ ಮಾರ್ಗದರ್ಶನ, 6.50 ಕೃಷಿರಂಗ : ಮದ್ದೂರು ತಾಲ್ಲೂಕು ಕೋಣಸಾಲೆ ಶಿವಾರ ಕಾಲೋನಿಯ ಸಮೀಪದ ಸಂಧ್ಯಾಕೃಷ್ಣ ಸಹಜ ಕೃಷಿ ತೋಟದಲ್ಲಿ ನಡೆದ ಬಾನುಲಿ ಕೃಷಿ ಬೆಳಗು ಕಾರ್ಯಕ್ರಮದ ಬಾನುಲಿ ವರದಿ. 7.45 ಚಿತ್ರಗೀತೆಗಳು, 8.00 ಸಂಧ್ಯಾರಾಗ: ಸಾಮಾಜಿಕ ಕಳಕಳಿಯ ಹಿರಿಯರಾದ ಡಾ. ಮಲ್ಲಿಕಾ. ಬಿ.ಆರ್.ಅವರೊಂದಿಗೆ ಸಂವಾದ. ಇವರೊಂದಿಗೆ ಭಾಗವಹಿಸುತ್ತಾರೆ: ಜಿ. ಶಾಂತಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಿ.ಕೆ. ಪಟ್ಟಮಾಳ್ – ಹಾಡುಗಾರಿಕೆ, 10.00 ತತ್ವಸಂಚಾರ : ಜನಪದ ಗಾಯಕರ ತತ್ವಗಾಯನ, ಪ್ರಸ್ತುತಿ : ಡಾ. ಮೈಸೂರು ಉಮೇಶ್, 10.30 ಸವಿನೆನಪು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 27 ಶುಕ್ರವಾರ 2024

ಸಂಪುಟ: 45 | ಸಂಚಿಕೆ: 162 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ದಸರಾ ಉದ್ಘಾಟಕರಾದ ಸಾಹಿತಿ ಹಂಪ ನಾಗರಾಜಯ್ಯ, ರಾಜ್ಯಪಾಲ, ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಉಸ್ತುವಾರಿ ಸಚಿವರು ಸೇರಿ ಗಣ್ಯರಿಗೆ ದಸರಾಗೆ ಅಧಿಕೃತ ಆಹ್ವಾನ


ಸಾಹಿತಿ ಡಾ.ಹಂಪಾ ನಾಗರಾಜಯ್ಯ


ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್


ಮುಖ್ಯಮಂತ್ರಿ ಸಿದ್ದರಾಮಯ್ಯ


ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್


ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ

ಮೈಸೂರು,ಸೆ.26(ಆರ್‌ಕೆ)–ಅಕ್ಟೋಬರ್ 3ರಿಂದ 12ರವರೆಗೆ ನಡೆಯಲಿರುವ ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವಕ್ಕೆ ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ನೇತೃತ್ವದ ಅಧಿಕಾರಿಗಳ ತಂಡ ಇಂದು ಬೆಂಗಳೂರಲ್ಲಿ ದಸರಾ ಉದ್ಘಾಟಕರೂ ಆದ ನಾಡಿನ ಹಿರಿಯ ಸಾಹಿತಿ ಡಾ.ಹಂಪಾ ನಾಗರಾಜಯ್ಯ ಸೇರಿದಂತೆ ಗಣ್ಯಾತಿಗಣ್ಯರಿಗೆ ಅಧಿಕೃತ ಆಹ್ವಾನ ನೀಡಿದರು.

ಸಂಶೋಧಕರೂ ಆದ ಪ್ರೊ. ಹಂಪ ನಾಗರಾಜಯ್ಯ ಅವರನ್ನು ಬೆಂಗಳೂರಿನ ಕ್ರೆಸೆಂಟ್ ರಸ್ತೆಯ ಅಮೆರಿಕನ್ ಕಾಲೋನಿಯ ನಿವಾಸದಲ್ಲಿ ಭೇಟಿ ಮಾಡಿದ ಅಧಿಕಾರಿಗಳು, 2024ರ ನವರಾತ್ರಿ ಉತ್ಸವ ಉದ್ಘಾಟಿಸಿ, ನಾಡಹಬ್ಬಕ್ಕೆ ಚಾಲನೆ ನೀಡುವಂತೆ ಆತ್ಮೀಯ ಆಹ್ವಾನ ನೀಡಿದರು. ಇದೇ ವೇಳೆ ಪ್ರೊ.ಹಂಪನಾ ಅವರಿಗೆ ಮೈಸೂರು ಪೇಟ, ಶಾಲು, ಹಾರ, ಫಲ ತಾಂಬೂಲ ಸಮರ್ಪಿಸಿ ಆತ್ಮೀಯವಾಗಿ ಅಭಿನಂದಿಸಲಾಯಿತು. ಅಧಿಕಾರಿಗಳನ್ನು ಆತ್ಮೀಯವಾಗಿ ಬರಮಾಡಿಕೊಂಡ ಪ್ರೊ.ಹಂಪನಾ, ವಿಶ್ವ ಖ್ಯಾತಿಯ ಮೈಸೂರು ದಸರಾ ಮಹೋತ್ಸವ ಉದ್ಘಾಟಿಸುವ ಅವಕಾಶ ಸಿಕ್ಕಿರುವುದು ನನ್ನ ಸೌಭಾಗ್ಯ. ಅಧಿದೇವತೆ ತಾಯಿ ಚಾಮುಂಡೇಶ್ವರಿ

ಮೈಸೂರು ಜಿಲ್ಲಾಡಳಿತದ ವತಿಯಿಂದ ಆಮಂತ್ರಣ ನೀಡಿದ ಡಿಸಿ ನೇತೃತ್ವದ ತಂಡ

ದೇವಿಯ ಕೃಪೆ ಎಂದು ಭಾವಿಸಿದ್ದೇನೆ. ಅತ್ಯಂತ ಸಂತೋಷದಿಂದ ನಾನು ನವರಾತ್ರಿ ಉತ್ಸವಕ್ಕೆ ಚಾಲನೆ ನೀಡುತ್ತೇನೆ ಎಂದು ತಮ್ಮನ್ನು ಆಹ್ವಾನಿಸಿದ ಅಧಿಕಾರಿಗಳಿಗೆ ತಿಳಿಸಿ, ಶುಭ ಕೋರಿದರು. ನಂತರ ರಾಜಭವನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಗೂ ದಸರಾ ಆಹ್ವಾನ ಪತ್ರಿಕೆ ನೀಡಿ, ಪಂಜಿನ ಕವಾಯತು ಪ್ರದರ್ಶನದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಗೌರವ ವಂದನೆ ಸ್ವೀಕರಿಸುವಂತೆ ಅಧಿಕಾರಿಗಳು ಕೋರಿದರು. ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಆಮಂತ್ರಣ ನೀಡಲಾಯಿತು. ಮುಖ್ಯಮಂತ್ರಿಗಳಿಗೆ ಮೈಸೂರು ಪೇಟ, ಶಾಲು, ಹಾರ, ಫಲ ತಾಂಬೂಲ ನೀಡಿ, ದಸರಾ ಉದ್ಘಾಟನೆ ಹಾಗೂ 9 ದಿನಗಳ ಉತ್ಸವದಲ್ಲಿ ಪಾಲ್ಗೊಂಡು, ಅಂತಿಮವಾಗಿ ವಿಜಯದಶಮಿ ಮೆರವಣಿಗೆಗೆ ಚಾಲನೆ ನೀಡುವಂತೆಯೂ ಆಹ್ವಾನಿಸಿದರು.

ಇದೇ ವೇಳೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕರ್ನಾಟಕ ವಿಧಾನಸಭಾ ಅಧ್ಯಕ್ಷ ಯು.ಟಿ.ಖಾದರ್, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೂ ಅಧಿಕಾರಿಗಳು ಮೈಸೂರು ದಸರಾ ಮಹೋತ್ಸವಕ್ಕೆ ಅಧಿಕೃತ ಆಹ್ವಾನ ನೀಡಿದರು. ■6ನೇ ಪುಟಕ್ಕೆ

ಕರ್ನಾಟಕದಲ್ಲಿ ಸಿಬಿಐಗೆ ಬ್ರೇಕ್

ತನಿಖೆಗೆ ಮುಕ್ತ ಅವಕಾಶವಿಲ್ಲ

● ಸಂಪುಟ ಸಭೆಯಲ್ಲಿ ಮಹತ್ವದ ತೀರ್ಮಾನ ● ರಾಜ್ಯಪಾಲರು ಯಾವುದೇ ಮಾಹಿತಿ ಕೇಳಿದರೂ ಸಂಪುಟದ ಗಮನಕ್ಕೆ ತರುವುದು ಕಡ್ಡಾಯ

ಬೆಂಗಳೂರು, ಸೆ.26(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನಗಳ ಹಂಚಿಕೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಲು ಆದೇಶ ಮಾಡಿದ ಬೆನ್ನಲ್ಲೇ ಕರ್ನಾಟಕದಲ್ಲಿ ಸಿಬಿಐ ತನಿಖೆಗೆ ಇರುವ ಮುಕ್ತ ಅವಕಾಶವನ್ನು ಹಿಂದಕ್ಕೆ ಪಡೆಯಲು ಸಂಪುಟ ಸಭೆ ತೀರ್ಮಾನ ಕೈಗೊಂಡಿದೆ.



ಅಷ್ಟೇ ಅಲ್ಲ, ಸರ್ಕಾರದ ದೈನಂದಿನ ಆಡಳಿತದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮೂಗು ತೂರಿಸುತ್ತಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಮಂತ್ರಿ ಮಂಡಲ, ಇನ್ನು ಮುಂದೆ ಅವರ ಪತ್ರಗಳಿಗೆ ಸಚಿವರು, ಅಧಿಕಾರಿಗಳು ಉತ್ತರ ನೀಡುವಂತಿಲ್ಲ. ರಾಜಭವನದಿಂದ ಬರುವ ಸಮಜಾಯಿಷಿಗಳನ್ನು ಸಂಪುಟದ ಗಮನಕ್ಕೆ ಅಧಿಕಾರಿಗಳು ತರಬೇಕು, ಆ ವಿಷಯವನ್ನು ಸಭೆಯಲ್ಲಿ ಚರ್ಚಿಸಿ ಸರ್ಕಾರ ತೀರ್ಮಾನ ಕೈಗೊಳ್ಳಲಿದೆ. ಅರ್ಕಾವತಿ ಬಡಾವಣೆಯಲ್ಲಿ 547 ಎಕರೆ ಡಿ–ನೋಟಿಫಿಕೇಷನ್ ಹೆಸರಿನಲ್ಲಿ ಮಾಡಿರುವ ರೀ–ಡೂ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಕೆಂಪಣ್ಣ ಆಯೋಗದ ವರದಿ ಮತ್ತು ದಾಖಲೆಗಳನ್ನು ನೀಡುವಂತೆ ರಾಜ್ಯಪಾಲರು ಸರ್ಕಾರದ ಮುಖ್ಯಕಾರ್ಯದರ್ಶಿಗಳಿಗೆ ಪತ್ರ ಬರೆದಿದ್ದರು. ಇದರ ಬೆನ್ನಲ್ಲೇ ಇಂದು ಸೇರಿದ್ದ ಸಚಿವ ಸಂಪುಟ, ರಾಜ್ಯಪಾಲರು ದಿನನಿತ್ಯ ಸಣ್ಣ–ಪುಟ್ಟ ವಿಷಯಗಳಿಗೂ ಮಾಹಿತಿ ಕೇಳಿ ಅಧಿಕಾರಿಗಳನ್ನು ಇಕ್ಕಟ್ಟಿಗೆ ಸಿಲುಕಿಸುತ್ತಿದ್ದಾರೆ. ರಾಜಭವನದ ಪತ್ರಗಳಿಗೆ ಅಧಿಕಾರಿಗಳು ಉತ್ತರ ನೀಡುವಾಗ ಲೋಪ ಉಂಟಾದರೆ, ಸರ್ಕಾರ ಸಮಸ್ಯೆ ಎದುರಿಸಬೇಕಾಗುತ್ತದೆ. ಯಾವುದೇ ಪತ್ರ ಬಂದಾಗ ಸಂಬಂಧ ಪಟ್ಟ ಅಧಿಕಾರಿಗಳು ಇಲಾಖಾ ಸಚಿವರ ಗಮನಕ್ಕೆ ತರಬೇಕು. ತದನಂತರ ಆ ಕಡತವನ್ನು ಸಂಪುಟದ ಮುಂದಿಡುವಂತೆ ಮುಖ್ಯಕಾರ್ಯದರ್ಶಿಯವರಿಗೆ ಆದೇಶಿಸಿದ್ದಾರೆ. ಕೇಂದ್ರ ಸರ್ಕಾರ ಸಿಬಿಐಯನ್ನು ■6ನೇ ಪುಟಕ್ಕೆ

ಪಶ್ಚಿಮ ಘಟ್ಟಗಳ ಸಂರಕ್ಷಣೆ ಸಂಬಂಧಿತ

ಕಸ್ತೂರಿರಂಗನ್ ವರದಿ ತಿರಸ್ಕರಿಸಲು ಸಂಪುಟ ನಿರ್ಧಾರ


ಹೆಚ್‌.ಕೆ.ಪಾಟೀಲ್

ಬೆಂಗಳೂರು, ಸೆ.26–ಕರ್ನಾಟಕದಲ್ಲಿ ಪಶ್ಚಿಮ ಘಟ್ಟಗಳ ಸಂರಕ್ಷಿಸುವ ನಿಟ್ಟಿನಲ್ಲಿ ಕಸ್ತೂರಿ ರಂಗನ್ ವರದಿಯನ್ನು ತಿರಸ್ಕರಿಸಲು ಸಂಪುಟ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಹೆಚ್.ಕೆ. ಪಾಟೀಲ್ ಹೇಳಿದ್ದಾರೆ.


ವಿಧಾನಸೌಧದಲ್ಲಿ ನಡೆದ ಸಂಪುಟ ಸಭೆ ಈ ಮಹತ್ವದ ನಿರ್ಣಯ ಕೈಗೊಳ್ಳಲಾಗಿದೆ ಎಂದು ಸಭೆ ಬಳಿಕ ಅವರು ಹೇಳಿದರು. ಮಾನವನ ಹಸ್ತಕ್ಷೇಪ ಮಾಡುತ್ತಿರುವುದರಿಂದಾಗಿ ಪರಿಸರಕ್ಕೆ ಧಕ್ಕೆ ಉಂಟಾಗುತ್ತಿದೆ. ಆ ಮೂಲಕ ಜೀವ ಸಂಕುಲಕ್ಕೂ ಅಪಾಯ ಎದುರಾಗಲಿದೆ ಎನ್ನುವುದು ಪರಿಸರ ತಜ್ಞರ ಆತಂಕಕ್ಕೆ ಕಾರಣವಾಗಿತ್ತು. ಹಾಗಾಗಿ ಕಸ್ತೂರಿ ರಂಗನ್ ವರದಿಯನ್ನು ಸಿದ್ಧಪಡಿಸಲಾಗಿತ್ತು. ಇತ್ತೀಚೆಗೆ ಕಸ್ತೂರಿ ರಂಗನ್ ವರದಿ ಜಾರಿಗೆ ಜನಪ್ರತಿನಿಧಿಗಳ ಸಭೆಯಲ್ಲಿ ಸಮ್ಮತಿಸಲಾಗಿತ್ತು. ಆದರೆ ಕೇಂದ್ರ ಸರ್ಕಾರದ ಕಸ್ತೂರಿರಂಗನ್ ಸಮಿತಿಯ ಶಿಫಾರಸುಗಳನ್ನು ಕರ್ನಾಟಕ ಸರ್ಕಾರ ಪೂರ್ಣವಾಗಿ ಜಾರಿಗೊಳಿಸಲು ಸಾಧ್ಯವಿಲ್ಲ ಎಂದು ಇತ್ತೀಚೆಗೆ ಅರಣ್ಯ ಸಚಿವ ಈಶ್ವರ್‌ಖಂಡ್ರೆ ಕೂಡ ಹೇಳಿದ್ದರು.

ಕಸ್ತೂರಿ ರಂಗನ್ ಸಮಿತಿ ವರದಿ ಸಾರಾಂಶ: ಕಸ್ತೂರಿ ರಂಗನ್ ಸಮಿತಿಯು ಪಶ್ಚಿಮ ಘಟ್ಟ ವ್ಯಾಪ್ತಿಯ 59,949 ಚದರ ಕಿಮೀ ವ್ಯಾಪ್ತಿಯ ಪ್ರದೇಶ ಅಂದರೆ ಶೇ. 36.4ರಷ್ಟು ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಒಳಪಡುತ್ತದೆ ಎಂದು ಗುರುತಿಸಿದೆ. ಈ ಪ್ರದೇಶಗಳಲ್ಲಿ ಗಣಿಗಾರಿಕೆ, ಜಲವಿದ್ಯುತ್, ಕ್ವಾರಿ, ಮರಳುಗಾರಿಕೆ ಪರಿಸರ ವಿರೋಧಿ ಕೈಗಾರಿಕೆ, ಪವನ ವಿದ್ಯುತ್ ಯೋಜನೆಗಳನ್ನು ಸಂಪೂರ್ಣ ನಿಷೇಧಿಸಬೇಕು. 20,000 ಚ.ಮೀ, ಬೃಹತ್ ಆದ ಯಾವುದೇ ಕಟ್ಟಡ ನಿರ್ಮಿಸುವ ಹಾಗಿಲ್ಲ. ಇಎಸ್‌ಎನಿಂದ 10ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಕಾಮಗಾರಿ ನಡೆಸುವುದಾದರೇ ಪರಿಸರ ಇಲಾಖೆ, ಸ್ಥಳೀಯ ಗ್ರಾಮಸಭೆ ಅನುಮತಿ ಪಡೆಯಬೇಕು. ಈ ಪ್ರದೇಶದಲ್ಲಿ ಸಿಮೆಂಟು, ಕಲ್ಲು, ರಸಾಯನಿಕ ಬಳಸಲು, ಜನವಸತಿ ನಿರ್ಮಿಸಲು ಯಾವುದೇ ಅವಕಾಶವಿಲ್ಲ.

ಒಂದು ವೇಳೆ ಕಸ್ತೂರಿ ರಂಗನ್ ವರದಿ ಅನುಷ್ಠಾನವಾದರೆ ಪಶ್ಚಿಮ ಘಟ್ಟ ಮತ್ತು ಮಲೆನಾಡು ಸೂಕ್ಷ್ಮ ಪರಿಸರ ವಲಯವಾಗಿ ಪರಿವರ್ತನೆ ಆಗುತ್ತದೆ. ಅಲ್ಲಿ ಮಾನವ ಹಸ್ತಕ್ಷೇಪ ಮಾಡುವ ಹಾಗೇ ಇಲ್ಲ. ಇಡೀ ಭೂ ಭಾಗ ರಾಜ್ಯದ ನಿಯಂತ್ರಣದಿಂದ ಕೇಂದ್ರದ ಸುಪರ್ದಿಗೆ ಹೋಗುತ್ತದೆ. ಆಗ ಅಲ್ಲಿ ವಾಸಿಸುತ್ತಿರುವ ಆದಿವಾಸಿಗಳನ್ನು ಒಕ್ಕಲು ಎಬ್ಬಿಸಬೇಕಾಗುತ್ತದೆ. ಹಾಗಾಗಿ ಈ ಎಲ್ಲಾ ವಿಚಾರಗಳಿಂದ ಕಸ್ತೂರಿ ರಂಗನ್ ವರದಿಗೆ ಭಾರಿ ವಿರೋಧ ವ್ಯಕ್ತವಾಗಿತ್ತು.

ಮುಡಾ ಹಗರಣ: ಸಿದ್ದರಾಮಯ್ಯ ರಾಜೀನಾಮೆಗೆ ಕಾಂಗ್ರೆಸ್ ಮುಖಂಡ ಕೋಳಿವಾಡ ಸಲಹೆ

ಬೆಂಗಳೂರು, ಸೆ.26– ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ಕೊಡಬೇಕು ಎಂದು ಒಂದು ಕಡೆಯಲ್ಲಿ ಬಿಜೆಪಿ ಪ್ರತಿಭಟನೆ ನಡೆಸಿದರೆ, ಮತ್ತೊಂದೆಡೆ ಹಿರಿಯ ಕಾಂಗ್ರೆಸ್ ಮುಖಂಡರೂ ಆದ ಮಾಜಿ ವಿಧಾನ ಸಭಾಧ್ಯಕ್ಷ ಕೆಬಿ ಕೋಳಿವಾಡ ಅವರು, ಮುಡಾ ಹಗರಣದಲ್ಲಿ ಸಿದ್ದರಾಮಯ್ಯ ವಿರುದ್ಧ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಅವರು ರಾಜೀನಾಮೆ ನೀಡಲಿ ಎಂದಿದ್ದಾರೆ.



ಬೆಂಗಳೂರಿನಲ್ಲಿ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಮುಡಾ ಪ್ರಕರಣದಲ್ಲಿ ಲೋಕಾಯುಕ್ತಾ ತನಿಖೆಗೆ ಜನಪ್ರತಿನಿಧಿಗಳ ಕೋರ್ಟ್ ಅಸ್ತು ವಿಚಾರವಾಗಿ, ಸಿಎಂ ಸಿದ್ದರಾಮಯ್ಯ ರಾಜೀನಾಮೆಗೆ ಅವರು ಸಲಹೆ ನೀಡಿದರು. ಸಿಎಂ ಸಿದ್ದರಾಮಯ್ಯ ಜನಪ್ರಿಯ ಸಿಎಂ ಹಾಗೂ ಕಾಂಗ್ರೆಸ್ ನಾಯಕ. ಮುಡಾ ಪ್ರಕರಣವನ್ನು ಪ್ರಧಾನಮಂತ್ರಿಗಳು ಸಹ ತಮ್ಮ ಭಾಷಣಗಳಲ್ಲಿ ಪ್ರಸ್ತಾಪ ಮಾಡುತ್ತಿದ್ದಾರೆ. ಇದರಿಂದ ಪಕ್ಷಕ್ಕೆ ಮುಜುಗರ ಆಗುತ್ತಿದೆ ಎಂದರು. ಹಾಗಾಗಿ ಸಿಎಂ ರಾಜೀನಾಮೆ ಕೊಟ್ಟು ತನಿಖೆ ಎದುರಿಸಬೇಕು. ತನಿಖೆ ಬಳಿಕ ಅವರೇ ಸಿಎಂ ಆಗಲಿ. ಯಾಕೆಂದರೆ ಸಿದ್ದರಾಮಯ್ಯ ಅವರಿಗೆ ಶಾಸಕರು, ಸಚಿವರು ಹಾಗೂ ಹೈಕಮಾಂಡ್ ಬೆಂಬಲ ಇದೆ. ಮೊದಲು ರಾಜೀನಾಮೆ ಕೊಟ್ಟು ತನಿಖೆ ಎದುರಿಸಲಿ ಎಂದು ಕೆಬಿ ಕೋಳಿವಾಡ ಸಿಎಂಗೆ ಸಲಹೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ತನಿಖೆ ಯಾವ ಕಾನೂನಿನಡಿ...!?

ಬೆಂಗಳೂರು, ಸೆ.26(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬಿಡಿ ನಿವೇಶನ ಹಂಚಿಕೆ ಆರೋಪಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಯಾವ ಕಾನೂನಿನಡಿ ತನಿಖೆ ನಡೆಸಬೇಕೆಂಬ ಜಿಜ್ಞಾಸೆಗೆ ಲೋಕಾಯುಕ್ತ ಒಳಗಾಗಿದೆ.

ಜನಪ್ರತಿನಿಧಿಗಳ ನ್ಯಾಯಾಲಯ ಮುಖ್ಯಮಂತ್ರಿ ವಿರುದ್ಧ ಎಫ್‌ಐಆರ್ ದಾಖಲಿಸಿ ಸಿಆರ್‌ಪಿಸಿ 156(3) ಅಡಿ ತನಿಖೆ ನಡೆಸುವಂತೆ ಆದೇಶಿಸಿದೆ. ಆದರೆ ಜುಲೈನಿಂದ ಬಿಎನ್‌ಎಸ್‌ಎಸ್ ಕಾಯಿದೆ ಜಾರಿಯಲ್ಲಿದೆ. ಆದರೆ, ನಾವು ಯಾವ ಕಾಯಿದೆಯಡಿ ತನಿಖೆ ನಡೆಸಬೇಕೆಂದು ಲೋಕಾಯುಕ್ತ ಪೋಲಿಸರು ಇಂದು ಕಾನೂನು ತಜ್ಞರೊಂದಿಗೆ ಸುದೀರ್ಘ ಸಭೆ ನಡೆಸಿದರು. ಸಭೆಗೆ ಮೈಸೂರು ಲೋಕಾಯುಕ್ತ ಪೋಲಿಸ್ ವರಿಷ್ಠಾಧಿಕಾರಿ ಉದೇಶ್ ಅವರನ್ನೂ ಕರೆಸಿಕೊಂಡಿರುವುದರಿಂದ, ಅವರು ಮುಖ್ಯಮಂತ್ರಿ ವಿರುದ್ಧ ಇದುವರೆಗೂ ಯಾವುದೇ ಎಫ್‌ಐಆರ್ ದಾಖಲಿಸಿಲ್ಲ. ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ ಲೋಕಾಯುಕ್ತ ಐಜಿ ಸುಬ್ರಹ್ಮಣ್ಯೇಶ್ವರ ರಾವ್, ಎಡಿಜಿಪಿ ಮನೀಶ್ ಕರ್ಬಿಕರ್ ಇತರರು ಚರ್ಚಿಸಿದರು.

ಸಿಎ ನಿವೇಶನಕ್ಕೆ ಸಂಬಂಧಿಸಿದಂತೆ ನಿಯಮ ಉಲ್ಲಂಘನೆ ಪ್ರಕರಣಗಳ ಬಗ್ಗೆ ವರದಿ ನೀಡಿ

● ಮುಡಾ ಅಧಿಕಾರಿಗಳಿಗೆ ಪ್ರಾಧಿಕಾರದ ಅಧ್ಯಕ್ಷ ಮರೀಗೌಡರು ಸೂಚನೆ ● ದಸರೆ ನಂತರ ಮುಡಾ ಸಭೆ ನಡೆಸಲು ನಿರ್ಧಾರ

ಮೈಸೂರು,ಸೆ.26(ಆರ್‌ಕೆ)– ನಾಗರಿಕ ಸೌಕರ್ಯ (ಸಿಎ) ನಿವೇಶನಗಳಿಗೆ ಸಂಬಂಧಿಸಿದಂತೆ ಅಕ್ರಮಗಳು ನಡೆದಿರುವ ಬಗ್ಗೆ ತಮಗೆ ಕೂಡಲೇ ವರದಿ ನೀಡುವಂತೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರೀಗೌಡರು ಮುಡಾ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಇಂದು ಮುಡಾ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಈ ಹಿಂದೆ ಪ್ರಾಧಿಕಾರದಿಂದ ಹಂಚಿಕೆ ಮಾಡಿರುವ ನಾಗರಿಕ ಸೌಕರ್ಯ (ಸಿಎ) ನಿವೇಶನಗಳನ್ನು ಅದೇ ಉದ್ದೇಶಕ್ಕೆ ಬಳಸಲಾಗಿದೆಯೇ ಅಥವಾ ಕಟ್ಟಡ ಕಟ್ಟಿ ಬಾಡಿಗೆಗೆ ನೀಡಲಾಗಿದೆಯೇ ಎಂಬುದನ್ನು ಪರಿಶೀಲಿಸಲು ವಾರದೊಳಗಾಗಿ ಸಂಪೂರ್ಣ ಮಾಹಿತಿ ನೀಡುವಂತೆ ಸೂಚಿಸಿದ ಮರೀಗೌಡರು, ಮೈಸೂರು ನಗರದಲ್ಲಿ ಲಭ್ಯವಿರುವ ಒಟ್ಟು ಸಿಎ ನಿವೇಶನಗಳ ಸಂಖ್ಯೆ, ಸಾರ್ವಜನಿಕರಿಂದ ಸ್ವೀಕೃತವಾಗಿರುವ ಅರ್ಜಿಗಳ ವಿವರ, ಸಿಎ ನಿವೇಶನಗಳ ಸಂಬಂಧ ನ್ಯಾಯಾಲಯಗಳಲ್ಲಿರುವ ಪ್ರಕರಣಗಳ ಮಾಹಿತಿ, ನಿಯಮ ಉಲ್ಲಂಘನೆಯಾಗಿರುವುದು ಸೇರಿದಂತೆ ಇನ್ನಿತರ ಅಗತ್ಯ ಮಾಹಿತಿಗಳೊಂದಿಗೆ ಸಂಪೂರ್ಣ ವರದಿಯನ್ನು ತಮಗೆ ನೀಡುವಂತೆಯೂ ನಿರ್ದೇಶನ ನೀಡಿದ್ದಾರೆ.


ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಮರೀಗೌಡ ಗುರುವಾರ ಮುಡಾ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಒತ್ತುವರಿ ತೆರವು ಮಾಡಿಸಿ: ಪ್ರಾಧಿಕಾರದ ಸಾವಿರಾರು ಕೋಟಿ ರೂ. ಬೆಲೆಬಾಳುವ ಖಾಲಿ ಜಮೀನುಗಳನ್ನು ಒತ್ತುವರಿ ಮಾಡಿರುವ ಬಗ್ಗೆ ದೂರುಗಳು ಬಂದಿದ್ದು, ಅವುಗಳನ್ನು ಪತ್ತೆ ಹಚ್ಚಲು ಸೂಚಿಸಿದ ಅವರು, ಕಾರ್ಯದರ್ಶಿಗಳು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳು ಖಾಲಿ ಉಳಿದಿರುವ ನಿವೇಶನ, ಜಮೀನು ಹಾಗೂ ಆಸ್ತಿಗಳನ್ನು ನಿಖರವಾಗಿ ಸರ್ವೆ ಮಾಡಿಸಿ, ಒತ್ತುವರಿಯಾಗಿದ್ದಲ್ಲಿ ಮುಲಾಜಿಲ್ಲದೆ ತೆರವುಗೊಳಿಸಲು ಕ್ರಮ ಕೈಗೊಳ್ಳುವುದು. ಹಾಗೂ ಆ ಜಾಗದಲ್ಲಿ ■6ನೇ ಪುಟಕ್ಕೆ

ನಿಯಮ ಉಲ್ಲಂಘನೆ: ಸಿಎ ನಿವೇಶನ ರದ್ದು ಆದೇಶ ಹಿಂಪಡೆಯಲು ಮುಡಾಗೆ ಸಿಎಂ ಶಿಫಾರಸು!

ಸದರಿ ನಿವೇಶನದಲ್ಲಿ ಕಟ್ಟಡ ನಿರ್ಮಿಸಲು ಅನುಮೋದನೆ ನೀಡುವಂತೆಯೂ ಸೂಚನೆ

ಎಸ್.ಟಿ.ರವಿಕುಮಾರ್

ಮೈಸೂರು, ಸೆ.26– ನಿಗದಿತ ಕಾಲಾವಧಿಯಲ್ಲಿ ಉದ್ದೇಶಿತ ಕಟ್ಟಡ ನಿರ್ಮಿಸದೇ ನಿಯಮ ಉಲ್ಲಂಘಿಸಿರುವ ಕಾರಣ ಮಂಜೂರಾತಿ ರದ್ದುಪಡಿಸಿರುವ ಸುಮಾರು ಎರಡೂವರೆ ಎಕರೆ (10250.20 ಚ.ಮೀ) ನಾಗರಿಕ ಸೌಲಭ್ಯ(ಸಿಎ) ನಿವೇಶನದ ಆದೇಶವನ್ನು ಹಿಂಪಡೆಯುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶಿಫಾರಸು ಮಾಡಿದ್ದು, ಅಲ್ಲಿ ಕಟ್ಟಡ ನಿರ್ಮಿಸಲು ಅನುಮೋದನೆ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಆಯುಕ್ತರಿಗೆ ಸೂಚನೆ ನೀಡಿರುವ ಪ್ರಕರಣ ಇದೀಗ ತಡವಾಗಿ ಬೆಳಕಿಗೆ ಬಂದಿದೆ.

ಶೇ.50–50ರ ಅನುಪಾತದಡಿ ತಮ್ಮ ಪತ್ನಿ ಶ್ರೀಮತಿ ಪಾರ್ವತಿ ಅವರಿಗೆ ಅಭಿವೃದ್ಧಿಪಡಿಸಿದ ವಿಜಯನಗರ 3 ಮತ್ತು 4ನೇ ಹಂತದ ವಸತಿ ಬಡಾವಣೆಯಲ್ಲಿ ಕೋಟ್ಯಾಂತರ ರೂ. ಬೆಲೆಬಾಳುವ 14 ನಿವೇಶನಗಳನ್ನು ಪ್ರಾಧಿಕಾರದಿಂದ ಮಂಜೂರು ಮಾಡಿರುವ ಪ್ರಕರಣದಲ್ಲಿ ಹೈಕೋರ್ಟ್ ಏಕಸದಸ್ಯ ಪೀಠ ಹಾಗೂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ತನಿಖೆಗೆ ಆದೇಶ ನೀಡಿರುವ ಬೆನ್ನಲ್ಲೇ 2024ರ ಮಾ.11ರಂದು (ಟಿಪ್ಪಣಿ ಮೂಲಕ ಸಂಖ್ಯೆ 7502380/2024 ಅನ್ವಯ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರಿಗೆ ಸ್ವತಃ ಸಿದ್ದರಾಮಯ್ಯ ಅವರೇ ಸೂಚನೆ ನೀಡಿರುವುದು ಇದೀಗ ಸದ್ದು ಮಾಡುತ್ತಿದೆ.

ಸಿಎಂ ಟಿಪ್ಪಣಿಯಲ್ಲಿ ಏನಿದೆ?: ಶ್ರೀ ಟಿ.ಬಾಬು, ಮುಖ್ಯಸ್ಥರು, ಜೆ.ರಂಗಣ್ಣ ಲಕ್ಷ್ಮಮ್ಮ ಚಾರಿಟಬಲ್ ಟ್ರಸ್ಟ್(ರಿ), ಕನಕದಾಸನಗರ, ದಟ್ಟಗಳ್ಳಿ, ಮೈಸೂರು ಇವರು ಮೈಸೂರು ನಗರದ ಸರ್ಕಾರಿ ನೌಕರರ ಗೃಹ ನಿರ್ಮಾಣ ಸಂಘದವರು ನಿರ್ಮಿಸಿರುವ


ಸೋಮನಾಥನಗರ (ಕೇರ್ಗಳ್ಳಿ) ಬಡಾವಣೆಯಲ್ಲಿನ ನಾಗರಿಕ ಸೌಕರ್ಯ ನಿವೇಶನ ಸಂಖ್ಯೆ: ಸಿಎ–01 ಒಟ್ಟು ವಿಸ್ತೀರ್ಣ 10250.20 ಚದರ ಮೀಟರ್‌ನ್ನು ಪಡೆದಿದ್ದು, ಕೋವಿಡ್‌ನಿಂದ ಶಾಲಾ/ಸಂಸ್ಥೆ ಕಾರ್ಯ ಚಟುವಟಿಕೆಗಳಿಗೆ ಅಡ್ಡಿಯುಂಟು ಮಾಡಿದ್ದರಿಂದ ಸದರಿ ಸಿ.ಎ. ನಿವೇಶನದಲ್ಲಿ ಕಟ್ಟಡ ಕೆಲಸ ಆರಂಭಿಸಲು ಅನಾನುಕೂಲವಾದ ಕಾರಣ ಸರಿಯಾದ ಸಮಯಕ್ಕೆ ಕಟ್ಟಡ ಕಟ್ಟದೇ ಇರುವುದರಿಂದ ಮಂಜೂರಾಗಿದ್ದ ಸಿಎ ನಿವೇಶನವನ್ನು ರದ್ದುಮಾಡಿರುವ ಆದೇಶವನ್ನು ಹಿಂಪಡೆದು ಸದರಿ ಸಿಎ ನಿವೇಶನದಲ್ಲಿ ಕಟ್ಟಡ ಕಟ್ಟಲು ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಅದರಂತೆ ಮನವಿದಾರರು ಕೋರಿರುವಂತೆ **‘ಮೇಲ್ಕಂಡ ಸಿಎ ನಿವೇಶನವನ್ನು ರದ್ದು ಮಾಡಿರುವ ಆದೇಶವನ್ನು ಹಿಂಪಡೆದು ಸಿಎ ನಿವೇಶನದಲ್ಲಿ ಕಟ್ಟಡ ಕಟ್ಟಲು ಅನುಮೋದನೆ ನೀಡುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದೆ’** ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2024ರ ಮಾ.11ರಂದು ಅಂದಿನ ಮುಡಾ ಆಯುಕ್ತರಿಗೆ ಟಿಪ್ಪಣಿಯಲ್ಲಿ ಸಹಿ ಮಾಡಿ ಸೂಚನೆ ನೀಡಿದ್ದಾರೆ.



ನಕ್ಕರೆ ಅದೇ ಸ್ವರ್ಗ



ಬಾಸ್ : ಏನ್ರೀ ಮೊನ್ನೆ ತಾನೇ ಮೂರು ದಿನ ರಜಾ ಹಾಕಿ ತಿರುಪತಿಗೆ ಹೋಗ್ಬಂದ್ರಿ... ಮತ್ತೆ ತಿರುಪತಿಗೆ ಹೋಗೋಕೆ ರಜೆಯಾ!

ನೌಕರ : ಹೂ ಸಾರ್... ಸೇಫಾಗಿ ವಾಪಸ್ ಹೋದ್ರೆ 'ಮತ್ತೆ ಬರ್ತಿನಿ' ಅಂತ ಬೇಡ್ಕೊಂಡಿದ್ದೆ...!

ಮೈಸೂರು ಮಿತ್ರ

ಶುಕ್ರವಾರ, 27 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಕಾಲ ಎಂದಿಗೂ ಹಿಂದೆ ತಿರುಗುವುದಿಲ್ಲ. ಆದರೆ ಅದರ ದುರುಪಯೋಗ ಮಾಡಿಕೊಂಡವರನ್ನು ಹಿಂದೆ ತಿರುಗಿ ನೋಡುವಂತೆ ಮಾಡುತ್ತದೆ.

ವೇದ ಸುಳ್ಳಾದರೂ { ಭಾವಿಸಿದರೆ ಬಳಗ,
ಗಾದೆ ಸುಳ್ಳಾಗದು { ಕೂಡಿಸಿದರೆ ಕಾಸು.

ನಿಮ್ಮ ಪತ್ರಗಳು

ದಸರೆಗೆ ನಾಡೋಜ ಡಾ.ಹಂಪ ನಾಗರಾಜಯ್ಯ ಆಯ್ಕೆ ಸ್ವಾಗತಾರ್ಹ

ಮಾನ್ಯರೆ,



ಹಿರಿಯ ಕವಿ, ಸಂಶೋಧಕ, ಪ್ರಾಧ್ಯಾಪಕ, ನಾಡೋಜ ಡಾ.ಹಂಪ ನಾಗರಾಜಯ್ಯನವರನ್ನು ಈ ಬಾರಿಯ ವಿಶ್ವವಿಖ್ಯಾತ ದಸರಾ ಮಹೋತ್ಸವನ್ನು ಉದ್ಘಾಟಿಸಲು ರಾಜ್ಯ ಸರ್ಕಾರ ಆಹ್ವಾನಿಸಿರುವುದು ಸ್ವಾಗತಾರ್ಹವಾಗಿದೆ.

ತಮ್ಮ ಪ್ರಖಂಡ ವಿದ್ವತ್ತಿನಿಂದ ರಾಜ್ಯಾದ್ಯಂತ ಹೆಸರು ಮಾಡಿರುವ 88 ವರ್ಷದ ಡಾ. ಹಂಪ ನಾಗ ರಾಜಯ್ಯ ಅವರನ್ನು ಸಾಹಿತ್ಯ ವಲಯದಲ್ಲಿ 'ಹಂಪನಾ' ಎಂದೇ ಕರೆಯಲಾಗುತ್ತದೆ. ಚಿಕ್ಕಬಳ್ಳಾಪುರ ಜಿಲ್ಲೆ, ಗೌರಿ ಬಿದನೂರು ತಾಲೂಕಿನ 'ಹಂಪಸಂದ್ರ' ಎಂಬ ಕುಗ್ರಾಮದಲ್ಲಿ 07.10.1936 ರಂದು ಜನಿಸಿದ ಹಂಪನಾ ಇದುವರೆಗೂ 115ಕ್ಕೂ ಹೆಚ್ಚಿನ ಮೌಲಿಕ ಕೃತಿಗಳನ್ನು ರಚಿಸುವ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ವಿಶಿಷ್ಟವಾದ ಸ್ಥಾನ ಗಳಿಸಿದ್ದಾರೆ. ಆಂಗ್ಲ ಭಾಷೆಯಲ್ಲಿ ಸಹ 20ಕ್ಕೂ ಹೆಚ್ಚಿನ ಕೃತಿಗಳನ್ನು ರಚಿಸಿದ್ದಾರೆ. ಭಾಷಾ ವಿಜ್ಞಾನ, ಸಂಶೋಧನೆ, ಮಹಾಕಾವ್ಯ, ಕಾವ್ಯ ಮಿಮಾಂಸೆ ಮುಂತಾದ ಹತ್ತು ಹಲವು ಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸಿರುವ ಹಂಪನಾ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಕೆಲ ಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಕೂಡ ಸೇವೆ ಸಲ್ಲಿಸಿದ್ದಾರೆ. ಜೈನ ಸಾಹಿತ್ಯದಲ್ಲಿ ಸಾಕಷ್ಟು ಸಂಶೋಧನೆಗಳನ್ನು ಮಾಡಿರುವ ಹಂಪನಾವರಿಗೆ ರಾಜ್ಯೋತ್ಸವ ಪ್ರಶಸ್ತಿ, ಚಾಮುಂಡರಾಯ ಪ್ರಶಸ್ತಿ, ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಎಲ್ಲಕ್ಕಿಂತ ಮಿಗಿಲಾಗಿ ಪ್ರತಿಷ್ಠಿತ 'ನಾಡೋಜ' ಪ್ರಶಸ್ತಿಗಳು ಸಂದಿವೆ. ಅವರ ದಿವಂಗತ ಪತ್ನಿ ಕಮಲಾ ಹಂಪನಾ ಕೂಡ ಕನ್ನಡದ ಅಗ್ರಗಣ್ಯ ಲೇಖಕಿಯಾಗಿದ್ದರು ಎಂಬುದು ಇಲ್ಲಿ ಸ್ಮರಣಾರ್ಹ. ಕನ್ನಡದ ಕಂಪನ್ನು 6 ದಶಕಗಳ ಕಾಲದಿಂದಲೂ ಚೆಲ್ಲುತ್ತಲೇ ಬಂದಿರುವ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು.

–ಕೆ.ವಿ.ವಾಸು, ವಿವೇಕಾನಂದ ನಗರ, ಮೈಸೂರು

ಸ್ವಚ್ಛ ನಗರದ ಪಟ್ಟ ಹೋಗಲು ಇದೇ ಕಾರಣ



ಮಾನ್ಯರೆ,

ಮೈಸೂರು ಮಹಾನಗರ ಪಾಲಿಕೆಯವರು ದಸರಾ ಹಬ್ಬದ ಹಿನ್ನೆಲೆಯಲ್ಲಿ ಜಂಬೂಸವಾರಿ ಸಾಗುವ ಮಾರ್ಗ ಸಯ್ಯಾಜಿರಾವ್ ರಸ್ತೆಯಲ್ಲಿ ಒಣಗಿದ ಮತ್ತು ಅಪಾಯದ ಸ್ಥಿತಿಯಲಿದ್ದ ಮರದ ಕೊಂಬೆ ರೆಂಬೆಗಳನ್ನು ತೆಗೆಯುವ ಕೆಲಸ ಮುಗಿಸಿದ್ದಾರೆ. ಆದರೆ ನಗರದ ಅಂದ ಗೆಡಿಸುವ ಈ ಗಿಡಗಳನ್ನು ತೆಗೆಯದೆ ಹಾಗೆ ಬಿಟ್ಟದ್ದು ನಿಜಕ್ಕೂ ಇದು ಜಾಣ ಕುರುಡೇ ಸರಿ. ಈ ಗಿಡಗಳನ್ನು ಆಸರೆಯಾಗಿ ಮಾಡಿಕೊಂಡು ಫುಟ್‌ಪಾತ್‌ನಲ್ಲಿ ವ್ಯಾಪಾರ ಮಾಡುವವರು ಪ್ಲಾಸ್ಟಿಕ್ ಚಪ್ಪರಗಳನ್ನು ಹಾಕಿಕೊಂಡು ಕೆ.ಆರ್. ವೃತ್ತದ ಮತ್ತು ಮೆರವಣಿಗೆ ಸಾಗುವ ರಸ್ತೆಯ ಅಂದವನ್ನೇ ಕೆಡಿಸುತ್ತಿದ್ದಾರೆ. ಮುಂದೆ ಬರುವ ನಾಡ ಹಬ್ಬದ ಮೆರವಣಿಗೆಯನ್ನು ವೀಕ್ಷಿಸಲು ಬರುವ ಸಾರ್ವಜನಿಕರು ಈ ಗಿಡಗಳ ಮೇಲೆ ಹತ್ತಿ ದಸರಾ ಮೆರವಣಿಗೆಯನ್ನು ನೋಡುವ ದುಸ್ಸಾಹಸಕ್ಕೂ ಮುಂದಾಗಬಹುದು. ಇದರಿಂದ ಅಪಾಯ ಕಟ್ಟಿಟ್ಟ ಬುತ್ತಿ ಆದ್ದರಿಂದ ಈ ಕೂಡಲೇ ಸಂಬಂಧಪಟ್ಟ ಪಾಲಿಕೆಯ ಅಧಿಕಾರಿಗಳು ಎಚ್ಚೆತ್ತುಕೊಂಡು ಈ ಕಾಡು ಸಸಿಗಳನ್ನು ಬುಡ ಸಮೇತ ತೆಗೆದು ಹಾಕಬೇಕೆಂದು ಮನವಿ.

–ಮೈಸೂರು ಸಂಜಯ್

ಕ್ರಿಮಿನಲ್ ಜನಪ್ರತಿನಿಧಿಗಳ ನ್ಯಾಯಾಲಯ!

ಮಾನ್ಯರೆ,

ಬೆಂಗಳೂರಿನಲ್ಲಿರುವ 81ನೇ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯವನ್ನು 'ಜನಪ್ರತಿನಿಧಿಗಳ ನ್ಯಾಯಾಲಯ' ಎಂದು ಮಾಧ್ಯಮಗಳಲ್ಲಿ ಬಿಂಬಿಸಲಾಗುತ್ತಿದೆ. ಇದು ಜನಪ್ರತಿನಿಧಿಗಳ ನ್ಯಾಯಾಲಯವಲ್ಲ! ಇದು 'ಜನಪ್ರತಿನಿಧಿಗಳ ವಿರುದ್ಧ ದಾಖಲಾಗುವ ಕ್ರಿಮಿನಲ್ ಪ್ರಕರಣಗಳ ವಿಚಾರಣೆ ನಡೆಸುವ ವಿಶೇಷ ನ್ಯಾಯಾಲಯ'. ಹಾಗಾಗಿ ಇದನ್ನು 'ಕ್ರಿಮಿನಲ್ ಜನಪ್ರತಿನಿಧಿಗಳ ನ್ಯಾಯಾಲಯ' ಎಂದು ಕರೆಯಬಹುದು.

–ಪಿ.ಜೆ.ರಾಘವೇಂದ್ರ ನ್ಯಾಯವಾದಿ ಮೈಸೂರು

ಯುವ ದಸರಾ ರೇಸ್ ಕೋರ್ಸ್ ಮೈದಾನದಲ್ಲಿ ಮಾಡುವುದು ಸೂಕ್ತ

ಮಾನ್ಯರೆ,

ಯುವ ದಸರಾವನ್ನು ಈ ವರ್ಷ ಉತ್ತನಹಳ್ಳಿ ಬಳಿ ಮಾಡಲು ನಿರ್ಧಾರ ಮಾಡಿರುವುದು ಅಷ್ಟು ಸೂಕ್ತವಲ್ಲ. ಆ ರಸ್ತೆಯಲ್ಲಿ ಕಾರ್ಯಕ್ರಮ ಮುಗಿದ ನಂತರ ಹೆಣ್ಣು ಮಕ್ಕಳು ಮಧ್ಯರಾತ್ರಿಯಲ್ಲಿ ಊರಾಚೆಯಿಂದ ಬರುವುದು ಅಷ್ಟು ಸುರಕ್ಷಿತವಲ್ಲ. ಆದುದರಿಂದ ಯುವ ದಸರಾ ಕಾರ್ಯಕ್ರಮಗಳನ್ನು ರೇಸ್ ಕೋರ್ಸ್‌ನಲ್ಲಿ ನಡೆಸುವುದು ಸುರಕ್ಷಿತ. ವಿಶಾಲವಾದ ಮೈದಾನವಿದೆ. ಕಾಂಪೌಂಡ್‌ನಿಂದ ಹೊರ ಬಂದ ತಕ್ಷಣ ವಿದ್ಯುತ್ ದೀಪಗಳಿರುವ ಮುಖ್ಯ ರಸ್ತೆಗಳು ಸಿಗುತ್ತವೆ. ಹಿಂದೆ ಇದೇ ಮೈದಾನದಲ್ಲಿ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಣೆ ಮಾಡಿದ್ದಾಗ 75000ಕ್ಕೂ ಹೆಚ್ಚು ಯೋಗ ಪಟುಗಳು ಭಾಗವಹಿಸಿದ್ದರು. ಯೋಗ ಮಾಡಲು ಪ್ರತಿ ಯೋಗಪಟುವಿಗೂ 6 ಜನರು ಕುಳಿತುಕೊಳ್ಳುವಷ್ಟು ಸ್ಥಳ ಒಬ್ಬರಿಗೆ ಮೀಸಲಾಗಿತ್ತು. ಅಂದರೆ ಕನಿಷ್ಟ 3 ಲಕ್ಷ ಜನ ಕುಳಿತುಕೊಳ್ಳಬಹುದು. ಅದೇ ಮೈದಾನದಲ್ಲಿ ವಾಹನಗಳನ್ನು ವ್ಯವಸ್ಥಿತವಾಗಿ ನಿಲ್ಲಿಸುವ ವ್ಯವಸ್ಥೆ ಮಾಡಬಹುದು. ಒಳ ಬರಲು ಹೊರಹೋಗಲು ಬೇರೆ ಬೇರೆ ದ್ವಾರಗಳನ್ನು ನಿರ್ಧರಿಸಿ ಅತ್ಯುತ್ತಮ ವ್ಯವಸ್ಥೆ ಕಲ್ಪಿಸಬಹುದು. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಯೋಚಿಸುವುದು ಒಳಿತು.

– ಎ.ಜಿ. ದೇವರಾಜು ಮೈಸೂರು



ರಾಘವೇಂದ್ರ ಸಿ.ಎಸ್.
ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಸಂತೋಷವೆನ್ನುವುದು ಹುಡುಕುವ ವಸ್ತುವಲ್ಲ; ಕಂಡುಕೊಳ್ಳುವಂತದ್ದು!

ದುಡ್ಡು ಕೊಟ್ಟರೆ ಕಣ್ಣಿಗೆ ಬೇಕಾದದ್ದು ಕೊಂಡುಕೊಳ್ಳಬಹುದು. ಆದರೆ ಜೀವನವೆಂದರೆ ಕೊಂಡುಕೊಂಡು ಹೋಗುವುದಲ್ಲ. ನಿಜದ ಅರ್ಥದಲ್ಲಿ ಕಂಡುಕೊಂಡು ಹೋಗುವುದು. ಆದರೂ ಕಂಡುಕೊಳ್ಳುವುದಾದರೂ ಏನನ್ನು ಎಂಬ ಹಿರಿದಾದ ಪ್ರಶ್ನೆಗೆ ಉತ್ತರ ಯಾವುದು ಶಾಶ್ವತ ಸುಖವೋ ಅದರ ಕಡೆ ನಮ್ಮ ಬದುಕು ತುಡಿಯಬೇಕು. ಅಶಾಶ್ವತ ವಿಚಾರಗಳ ಕಡೆ ಸಾಕಷ್ಟು ತಲೆಕೆಡಿಸಿಕೊಂಡು ಜೀವನವನ್ನು ಅರ್ಥಮಾಡಿಕೊಳ್ಳದೆ ಕಾಲು ಕಸ ಮಾಡಿಕೊಂಡಿರುವುದು ದುರಂತವೇ ಸರಿ. ಬಿಸಿಲ್ಗುದುರೆಗೆ ಮರುಳಾಗಿ ಅದನ್ನು ಹಿಡಿಯುವ, ಅದರೊಂದಿಗೆ ಸ್ನೇಹ ಸಂಪಾದಿಸುವ ಹುಂಬತನ ಸರಿಯಲ್ಲ.

ಜೀವನ ಇರುವುದು ಅರಳುವುದಕ್ಕೆ, ನರಳುವುದಕ್ಕಲ್ಲ. ಅಂದರೆ ಸಂತೋಷದಿಂದ ಬದುಕಿನಲ್ಲಿ ಏನೇ ಎದುರಾದರೂ ಅದನ್ನು ಸ್ವೀಕರಿಸುತ್ತಾ ಮುಂದೆ ಸಾಗಲೇಬೇಕಾಗಿದೆ. ಆದರೆ ನಮ್ಮಲ್ಲಿ ಬಹುತೇಕ ಜನ ಇರುವುದನ್ನು ಬಿಟ್ಟು ಇಲ್ಲದೆ ಇರುವುದರ ಕಡೆಗೆ ಪರಿತಪಿಸುತ್ತಾ ಜೀವನ ಪೂರ್ತಿ ಸಂತೋಷವನ್ನು ಅರಸುತ್ತಲೇ ಇರುತ್ತಾರೆ. ಕಾಡಿನಲ್ಲಿರುವ ಕಸ್ತೂರಿ ಮೃಗ ತನ್ನ ಮೈಯಿಂದ ಬರುವ ಸುಗಂಧವಾದ ಪರಿಮಳವನ್ನು ತಾನು ಅರಿತುಕೊಳ್ಳದೆ ಈ ಸುಗಂಧ ಪರಿಮಳ ಯಾವ ಕಡೆಯಿಂದ ಬರುತ್ತಿದೆ ಎಂಬುದನ್ನು ಹುಡುಕುತ್ತಾ ಇಡೀ ಕಾಡನ್ನು ಅಲೆಯುತ್ತಿರುತ್ತದೆ. ನಮ್ಮಲ್ಲಿ ಬಹುತೇಕ ಜನ ಆ ಕಸ್ತೂರಿ ಮೃಗದಂತೆ ವರ್ತಿಸುತ್ತಾರೆ. ನಮ್ಮಲ್ಲಿಯೇ ಇರುವ ಸಂತೋಷವನ್ನು ಕಂಡುಕೊಳ್ಳದೆ ಅದನ್ನು ಹೊರಗೆ ಹುಡುಕುವ ಪ್ರಯತ್ನ ಮಾಡುತ್ತಲಿರುವರು.

ಸಂತೋಷ ಎಂಬುದು ವಸ್ತುಗಳಲ್ಲಾಗಲೀ, ಹಣದಲ್ಲಾಗಲೀ ಇರುವುದಲ್ಲ. ಸಣ್ಣ, ಸಣ್ಣ ಸಂಗತಿಗಳಲ್ಲಿ ಸಂತೋಷವನ್ನು ಕಾಣಬೇಕು. ನಾವು ನೋಡುವ ದೃಷ್ಟಿಕೋನವನ್ನು ಬದಲಿಸಿಕೊಂಡರೆ ಖಂಡಿತವಾಗಿಯೂ ಸಂತೋಷವನ್ನು ಕಂಡುಕೊಳ್ಳಬಹುದು.

* * * *

ಎಲ್ಲಾ ಕಥೆಗಳಿಗಿಂತ ವಾಸ್ತವಿಕತೆ ಎಂಬುದು ಬಹಳ ಮುಖ್ಯ. ಮೊದಲು ನಾವು ಭ್ರಮೆಯನ್ನು ಬದಿಗೆ ಸರಿಸಿ ಅವಾಸ್ತವಿಕತೆಯನ್ನು ಇಲ್ಲವಾಗಿಸಿ ವಾಸ್ತವಿಕೆಯ ಸ್ನೇಹವನ್ನು ಸಂಪಾದಿಸಿ ಅದನ್ನು ಜೀವನದಲ್ಲಿ ಅನ್ವಯಿಸಿಕೊಂಡು ಪಾಲಿಸಬೇಕಾದ ಅಂಶವಿದು. ಭ್ರಮೆಗಳಲ್ಲಿ ಬದುಕುವ ನಾವು ವಾಸ್ತವತೆಯನ್ನು ಒಪ್ಪಿಕೊಳ್ಳುವ ಪ್ರಯತ್ನವನ್ನು ಸ್ವಲ್ಪವೂ ಮಾಡು ವುದೇ ಇಲ್ಲ. ಪ್ರತಿಯೊಬ್ಬರಿಗೂ ಅವರನ್ನು ಮತ್ತೊ ಬ್ಬರು ಗುರುತಿಸಬೇಕು, ಹೊಗಳಬೇಕು, ಎಲ್ಲರಿ ಗಿಂತ ತಾನು ಭಿನ್ನನೆಂದು ಸಾಬೀತುಗೊಳಿಸ ಬೇಕು, ಬದುಕಿನಲ್ಲಿ ಕಷ್ಟಗಳು ಬರಲೇಬಾರದು, ಸುಖವಾಗಿ, ನೆಮ್ಮದಿಯಿಂದ ಇರಬೇಕು, ನಾವು ಬಯಸಿದ್ದನ್ನೆಲ್ಲ ಪಡೆಯಬೇಕು... ಹೀಗೆ ಭ್ರಮೆಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಒಂದೇ ಒಂದು ಕ್ಷಣವೂ ಭ್ರಮೆಗಳಾಚೆ ವಾಸ್ತವವಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುವುದೇ ಇಲ್ಲ. ಎಲ್ಲವು ನಾವು ಅಂದುಕೊಂಡಂತೆ ನಡೆದುಬಿಟ್ಟರೆ ನಾವೆಲ್ಲರೂ ನಂಬುವ ಆ ದೇವರನ್ನು ನೆನಪಿಸಿಕೊಳ್ಳಲು ಸಮಯ ಸಿಗುವುದೇ ಯೋಚಿಸಿ!? ಜೀವನ ಒಂದು ಓಟದ ಪಯಣ ಇದ್ದ ಹಾಗೆ. ಆ ಓಟದ ಪಯಣದಲ್ಲಿ ಪ್ರತಿಯೊಬ್ಬನು ತಾನು ಗೆಲ್ಲಲೇಬೇಕೆಂಬ ಹಠದಿಂದ ಮುನ್ನುಗ್ಗುತ್ತಾ, ಓಡುತ್ತಲೇ ಇರುತ್ತಾನೆ. ಸ್ಪರ್ಧೆ ಯಲ್ಲಿ ಗೆಲ್ಲುವುದಕ್ಕಾಗಿ ಮತ್ತೊಬ್ಬರಿಗೆ ಯಾವುದೇ ರೀತಿಯಾದಂತಹ ಕಷ್ಟವನ್ನು ಕೊಡಲು ಸಹ ತಯಾರಾಗಿರುತ್ತಾನೆ. ಏಕೆಂದರೆ ಆತನಿಗೆ ತನ್ನ ಗುರಿಯನ್ನು ತಲುಪುವುದಷ್ಟೇ ಮುಖ್ಯವಾಗಿರುತ್ತದೆ, ಮತ್ತೊಬ್ಬರ ಬಗ್ಗೆ ಆತ ಯೋಚಿಸಲಾರ. ಹಾಗೆಯೇ ಸಾಧನೆಯ ಪಥದಲ್ಲಿ ಹೊರಟವನಿಗೆ ಟೀಕೆಗಳು, ಅಪಮಾನದ ಮಾತುಗಳು, ನಿಂದನೆಯ ನುಡಿಗಳು ಬರುವುದು ಸಹಜ. ಈ ವಾಸ್ತವತೆಯನ್ನು ಮೊದಲು ಅರಿತುಕೊಳ್ಳಬೇಕು. ಎಲ್ಲಿಯವರೆಗೆ ನಾವು ಮತ್ತೊಬ್ಬರನ್ನು ಮೆಚ್ಚಿಸಬೇಕೆಂದು ಬಾಳುತ್ತೇವೆಯೋ ಅಲ್ಲಿಯವರೆಗೂ ನಮಗೆ ಸಂತೋಷ ಸಿಗಲಾರದು. ಏಕೆಂದರೆ ಪ್ರತಿ ಕ್ಷಣವು ನಾವು ಮೆಚ್ಚಿಸುವುದಕ್ಕೆ ಪ್ರಯತ್ನಿಸುತ್ತಾ, ವಿನಾ ಕಾರಣ ಕಾಲಹರಣವನ್ನು ಮಾಡುತ್ತಿರುತ್ತೇವೆ ಹೊರತು ನಮಗಾಗಿ ನಾವು ಬದುಕುವುದನ್ನು ಮರೆತಿರುತ್ತೇವೆ. ಅದಕ್ಕಾಗಿ ನಾನು ಹೇಳಿದ್ದು ಭ್ರಮೆಗಳ ಹೊರೆ–ಪೊರೆಯನ್ನು ತೊರೆದು ವಾಸ್ತವತೆಯನ್ನು ಒಪ್ಪಿ ಅಪ್ಪಿಕೊಂಡು ನಡೆದಾಗ ಮಾತ್ರ ಸಂತೋಷವನ್ನು ಅನುಭವಿಸಲು ಸಾಧ್ಯ ಎಂಬುದು ನನ್ನ ಅಭಿಪ್ರಾಯ.

* * * *

ಎಲ್ಲವೂ ನೆಮ್ಮದಿಯಲ್ಲಿದಾಗ ಸಂಶೋಧನೆಗೊಂಡ ಸಮಸ್ಯೆಯೇ ಹಣ. ಹಣ ಎಂದರೆ ಹೆಣವು ಬಾಯಿ ಬಿಡುತ್ತದೆ ಎಂಬ ಗಾದೆ ಮಾತಿನಂತೆ ಹಣದ ಬೆಂಬತ್ತಿ ಹೋಗುವ ಮಂದಿಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ. ಹೆಚ್ಚು ಹಣವಿದ್ದರೆ ಸಂತೋಷದಿಂದ ಇರಬಹುದು ಎಂಬ ತಪ್ಪು ಕಲ್ಪನೆ ನಮ್ಮಲ್ಲಿದೆ. ಬದುಕುವುದಕ್ಕೆ ಹಣ ಅವಶ್ಯಕವು, ಅನಿವಾರ್ಯವೂ ನಿಜ. ಆದರೆ ಹಣ ವೊಂದೇ ಜೀವನವಲ್ಲ. ಹೊಟ್ಟೆ ಹಸಿದಾಗ ತಿನ್ನುವುದಕ್ಕೆ ಆಹಾರ ಬೇಕೇ ವಿನಃ ಹಣವಲ್ಲ. ಬಡವರಿಗೆ, ಮಧ್ಯಮ ವರ್ಗದವರಿಗೆ ಸಾಕಷ್ಟು ಹಣವಿದ್ದರೆ ನಾವು ನೆಮ್ಮದಿಯಿಂದ, ಸಂತೋಷದಿಂದ ಬಾಳ್ವೆ ನಡೆಸಬಹುದು ಎಂಬ ಆಸೆ ಇರುತ್ತದೆ. ಖಂಡಿತವಾಗಿಯೂ ಹಣ ಸಂತೋಷವನ್ನು, ನೆಮ್ಮದಿಯನ್ನು ತಂದುಕೊಡಲಾರದು. ಆದರೆ ಸಮಸ್ಯೆಗಳು, ಯೋಚನೆ ಗಳು ದುಃಖವನ್ನಂತೂ ಉಚಿತವಾಗಿ ತಂದುಕೊಡು ತ್ತದೆ. ಬೇಕಿದ್ದರೆ ಶ್ರೀಮಂತರ ಜೀವನವನ್ನು ಅವ ಲೋಕಿಸಿ ನೋಡಬಹುದು. ನೆಮ್ಮದಿಯಾಗಿ ನಿದ್ದೆ ಮಾಡಲಾಗದೆ, ನಿದ್ದೆ ಮಾತ್ರೆಗಳಿಗೆ ಮೊರೆ ಹೋಗುವ, ಇರುವ ಹಣವನ್ನು ದುಪ್ಪಟ್ಟು ಮಾಡುವ ಕಾರ್ಯದಲ್ಲಿ ತಮ್ಮ ಆರೋಗ್ಯವನ್ನೇ ಪಣಕ್ಕಿಡುವ, ಕೊನೆಗೆ ಕಳೆದುಕೊಂಡ ಆರೋಗ್ಯಕ್ಕಾಗಿ ಹಣವನ್ನೆಲ್ಲ ವ್ಯಯಿಸುವ ಜನರಿಗೇನು ಕಡಿಮೆ ಇಲ್ಲ! ಹಣ ಜೀವನ ನಿರ್ವಹಣೆಗೆ ಬೇಕು ನಿಜ, ಆದರೆ ಜೀವನವನ್ನು ಹಣವೇ ನಿರ್ವಹಣೆ ಮಾಡಬಾರದು. ಮಾನಸಿಕ ಸಂಪತ್ತಾದ ನೆಮ್ಮದಿ–ಸಂತೋಷ ಸುಖವನ್ನು ಹಣದಿಂದ ತಂದುಕೊಳ್ಳಲು, ಕೊಂಡುಕೊಳ್ಳಲಾಗದು. ಒಂದು ಸಣ್ಣ ಉದಾಹರಣೆಯನ್ನು ಹೇಳುವುದಾದರೆ ನಮ್ಮ ಕಿಸೆಯಲ್ಲಿ ಲಕ್ಷ ಹಣ ಇದೆ ಎಂದು ಭಾವಿಸೋಣ. ಆಗ ನಮ್ಮ ಸ್ಥಿತಿ ಹೇಗಿರುತ್ತದೆ ಎಂಬುದನ್ನು ಒಮ್ಮೆ ಆಲೋಚಿಸೋಣ. ಪ್ರತಿ ಬಾರಿಯೂ ಆ ಹಣದ ಕಡೆಗೆ ನಮ್ಮ ಗಮನವಿರುತ್ತದೆ, ಸುತ್ತಮುತ್ತ ಇರುವವರೆಲ್ಲ ಕಿಸೆಯಲ್ಲಿರುವ ಹಣವನ್ನು ಕಸಿದುಕೊಳ್ಳಲು ಬರುವ ಕಳ್ಳರಂತೆ ಭಾಸವಾಗುತ್ತಾರೆ. ಹಣವನ್ನು ಭದ್ರಪಡಿಸಲು ಆಲೋಚಿಸುತ್ತಲೇ ಇರುತ್ತೇವೆ ಹೊರತು ನೆಮ್ಮದಿಯಾಗಿರಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಈ ವ್ಯಾಮೋಹವನ್ನು ಕಳೆಯುವ ಕೆಲಸ ಮಾಡಬೇಕು. ಆಗ ಸಣ್ಣ ,ಸಣ್ಣ ಸಂಗತಿಗಳಲ್ಲಿ ಸಂತೋಷವನ್ನು ಕಾಣಲು ಸಾಧ್ಯವಾಗಬಹುದು.

> "ಸಂತೋಷ ಎಂಬುದು ವಸ್ತುಗಳಲ್ಲಾಗಲೀ, ಹಣದಲ್ಲಾಗಲೀ ಇರುವುದಲ್ಲ. ಸಣ್ಣ, ಸಣ್ಣ ಸಂಗತಿಗಳಲ್ಲಿ ಸಂತೋಷವನ್ನು ಕಾಣಬೇಕು. ನಾವು ನೋಡುವ ದೃಷ್ಟಿಕೋನವನ್ನು ಬದಲಿಸಿಕೊಂಡರೆ ಖಂಡಿತವಾಗಿಯೂ ಸಂತೋಷವನ್ನು ಕಂಡುಕೊಳ್ಳಬಹುದು.

ಹೋಲಿಕೆ ಮನುಷ್ಯನಲ್ಲಿ ಅಂಟಿರುವ ಒಂದು ದೊಡ್ಡ ಕಾಯಿಲೆ. ಪ್ರತಿ ಮನುಷ್ಯನ ದೌರ್ಬಲ್ಯ. ಪ್ರತಿಯೊಬ್ಬರ ಬದುಕು ಭಿನ್ನ, ವಿಭಿನ್ನವಾಗಿರುತ್ತದೆ. ಈ ಸತ್ಯವನ್ನು ಅರ್ಥ ಮಾಡಿಕೊಳ್ಳದೆ ನಮ್ಮ ಬದುಕನ್ನು ಮತ್ತೊಬ್ಬರ ಬದುಕಿನೊಂದಿಗೆ ಹೋಲಿಕೆ ಮಾಡಿಕೊಂಡು ,ಸದಾಕಾಲ ಅವರಿಗೆ ಸಿಕ್ಕಿರುವುದು ನನಗೆ ದೊರೆತಿಲ್ಲ ಎಂಬುದರಲ್ಲಿ ಸಮಯ ವನ್ನು ವ್ಯರ್ಥವಾಗಿ ಕಳೆಯುವ ಕೆಲಸವನ್ನು ಮಾಡು ತ್ತೇವೆ. ಅವರ ಹತ್ತಿರ ಹಣ, ಆಸ್ತಿ, ಕೀರ್ತಿ, ಸ್ವಂತ ಮನೆ, ನಾಲ್ಕಾರು ಸೈಟ್ ಇವೆ, ನಮ್ಮ ಹತ್ತಿರ ಯಾವುದು ಇಲ್ಲ ಎಂದು ಮತ್ತೊಬ್ಬರ ಮೇಲೆ ಮತ್ಸರದ ಭಾವನೆಯನ್ನು ವ್ಯಕ್ತಪಡಿಸುತ್ತಾ ನಮ್ಮ ಸಂತೋಷವನ್ನು ಕಳೆದುಕೊಳ್ಳುತ್ತೇವೆ.ಅವರ ಸಂತೋಷಕ್ಕೂ ಭಂಗವನ್ನುಂಟು ಮಾಡುವ ಪ್ರಯತ್ನವನ್ನು ಮಾಡುತ್ತೇವೆ. ಇದಕ್ಕಿಂತ ದೊಡ್ಡ ವಿಪರ್ಯಾಸ ಇನ್ನೊಂದಿಲ್ಲ.

ಪ್ರತಿಯೊಬ್ಬರ ಹಿನ್ನೆಲೆ ಬೇರೆ ಇರುತ್ತದೆ.ಅವರು ಬದುಕಿ ಬಾಳಿ ಬಂದ ರೀತಿ ನಮಗೆ ತಿಳಿದಿರುವುದಿಲ್ಲ. ಕಣ್ಣಿಗೆ ಕಾಣುವುದಷ್ಟೇ ನಿಜ ಎಂದು ಭ್ರಮಿಸಿ,ಇಲ್ಲ ಸಲ್ಲದ ಹೋಲಿಕೆಗಳನ್ನು ಮಾಡಿ ನಮ್ಮ ಸಂತೋಷವನ್ನು ಕಳೆದುಕೊಳ್ಳುವ ಪ್ರಯತ್ನ ಮಾಡುತ್ತೇವೆ. ಹೋಲಿಕೆ ಬೇಕು ನಿಜ, ಆದರೆ ನಮ್ಮ ಜೀವನವನ್ನು ಮತ್ತೊಬ್ಬರ ಜೀವನೊಂದಿಗೆ ಹೋಲಿಕೆ ಮಾಡಿಕೊಳ್ಳಲು ಅಲ್ಲ. ಹಿಂದೆ ನಾನು ಹೇಗಿದ್ದೆ, ಈಗ ನಾನು ಹೇಗಿರುವೆ, ಮುಂದೆ ಏನು ಮಾಡಿದರೆ ನನ್ನ ಬದುಕು ಬದಲಾಗಬಹುದು ಎಂಬ ಸ್ವಯಂ ಹೋಲಿಕೆಗಳನ್ನು ಮಾಡಿಕೊಳ್ಳುತ್ತಾ ತಪ್ಪುಗಳನ್ನು ತಿದ್ದಿಕೊಂಡು ಬಾಳುವುದು ನಿಜವಾದ ಮನುಷ್ಯನ ಧರ್ಮ. ಇದನ್ನು ಅರ್ಥ ಮಾಡಿಕೊಳ್ಳದೆ ಅವರಿಗೆ ಸಿಕ್ಕಿರುವ ಪ್ರಶಸ್ತಿ ನನಗೆ ಸಿಗಲಿಲ್ಲ, ಅವರ ಹತ್ತಿರ ಇರುವ ಆಸ್ತಿ ನನ್ನಲ್ಲಿಲ್ಲ, ಮತ್ತೊಬ್ಬರಿಗೆ ಸಿಕ್ಕಿರುವ ಸವಲತ್ತು ನನಗೆ ದೊರೆಯಲಿಲ್ಲ ಎಂದು ಬಿರಿ ತಪ್ಪಿಸುವ ನಾವು ಖಂಡಿತವಾಗಿಯೂ ಜೀವನದ ಉದ್ದಕ್ಕೂ ಸಂತೋಷವನ್ನು ಮರೆತು ದುಃಖಿಸುವುದಂತೂ ನಿಜ. ಬೆಳಗ್ಗೆ ಅರಳಿ ಸಂಜೆಗೆ ಬಾಡುವ ಹೂವು ಗಳು ತಾವು ಇರುವಷ್ಟು ಹೊತ್ತು ಪರಿಮಳವನ್ನು ಬೀರುತ್ತಾ, ಕಂಪನ್ನು ಪಸರಿಸುತ್ತಾ ನಗೆಯ ತೋರಣ ವನ್ನು ನೀಡುತ್ತಲಿ, ಸಂತಸವನ್ನು ಪಡುತ್ತಲಿರುವಾಗ ವರ್ಷಾನುಗಟ್ಟಲೆ ಬದುಕುವ ಮನುಷ್ಯ ಮಾತ್ರ ಹೋಲಿಕೆಯನ್ನು ಮಾಡಿಕೊಳ್ಳುತ್ತಲೇ ದುಃಖಿತನಾಗಿರು ವುದು ಸೋಜಿಗದ ವಿಷಯವಲ್ಲದೇ ಮತ್ತೇನು ?!

ಸಾಲಾಗಿ ಹರಿಯುತ್ತಾ ಸಾಗುವ ಇರುವೆಗಳಿಗೆ ಯಾರು ಶಿಸ್ತನ್ನು ಕಲಿಸಿರುವುದಿಲ್ಲ, ಅಂದಿನ ಆಹಾರವನ್ನು ಮಾತ್ರ ಹುಡುಕಿಕೊಂಡು ತಿನ್ನುವ ಪ್ರಾಣಿಗಳಿಗೆ ಮುಂದಿನ ದಿನಗಳಿಗೆ ಬೇಕಾದಷ್ಟು ಆಹಾರವನ್ನು ಸಂಗ್ರಹಿಸುವ ಬುದ್ಧಿ ಯನ್ನು ಯಾರು ತಿಳಿಸಿಕೊಡುವುದಿಲ್ಲ. ಇದುವ ರೆಗೂ ಯಾವುದೇ ಪ್ರಾಣಿಗಳಾಗಲಿ, ಪಕ್ಷಿಗಳಾಗಲಿ ನಮಗೆ ಮಾನವರಿಂದ ತೊಂದರೆಯಾಗಿದೆ ಎಂದು, ಮಾನವರಿಗೆ ಸಿಕ್ಕ ಸವಲತ್ತುಗಳು ನಮಗೆ ಸಿಗಲಿಲ್ಲ ಎಂದೂ ಮುಷ್ಕರವನ್ನಾಗಲಿ, ಮತ್ಸರವನ್ನಾಗಲಿ ಪಟ್ಟ ಉದಾಹರಣೆಯಂತೂ ಇಲ್ಲ. ಇರುವುದರಲ್ಲಿ ಹಂಚಿಕೊಂಡು ಬಾಳಿ ಬದುಕುವ ಪ್ರಾಣಿ ಪಕ್ಷಿಗಳು ಮನುಷ್ಯನ ಜೀವನಕ್ಕೆ ಮಾದರಿಯಾದ ಜೀವನದ ಅನುಭವವನ್ನು ಕಲಿಸಿಕೊಟ್ಟಿವೆ. ಅದನ್ನು ನೋಡುವ ದೃಷ್ಟಿ ನಮ್ಮದಾಗಬೇಕು ಅಷ್ಟೇ.

ಪ್ರಕೃತಿಯಲ್ಲಿ ವೈವಿಧ್ಯತೆಗಳಿವೆ. ಮಳೆಗಾಲ, ಬೇಸಿಗೆ ಗಾಲ, ಚಳಿಗಾಲ ಎಂಬ ವೈರುಧ್ಯಗಳು ಉಂಟಾಗುತ್ತವೆ. ಮಳೆಗಾಲ ಬಂದಾಗ ಹೆಚ್ಚು ಮಳೆ ಆಗಬಹುದು ಅಥವಾ ಮಳೆ ಬರದಿರಬಹುದು. ಬೇಸಿಗೆಕಾಲ ಬಂದಾಗ ಅಸಾಧ್ಯವಾದಷ್ಟು ಬಿಸಿಲು ಬರುತ್ತದೆ. ಚಳಿಗಾಲದಲ್ಲಿ ಅಸಾಧ್ಯವಾದಷ್ಟು ಚಳಿ ಆವರಿಸುತ್ತದೆ. ಆದರೆ ಅದ್ಯಾವುದೂ ಶಾಶ್ವತವಲ್ಲ. ಕಾಲಕ್ಕೆ ತಕ್ಕಂತೆ ಅದು ಬದಲಾಗುತ್ತದೆ ಎಂಬ ಅಂಶ ಪ್ರಕೃತಿಗೆ ತಿಳಿದಿದೆ. ಪಾಪ ! ಯೋಚನೆ ಮಾಡುವ ಬುದ್ಧಿಶಕ್ತಿಯನ್ನು ಹೊಂದಿರುವ ಮನುಷ್ಯನಿಗೆ ಕಷ್ಟಗಳ ನಂತರ ಸುಖ, ಸುಖಗಳ ನಂತರ ಕಷ್ಟ, ಬಂದೇ ಬರುತ್ತದೆ, ಅದನ್ನು ಸ್ವೀಕರಿಸಲೇಬೇಕೆಂಬ ಒಂದು ಸಾಮಾನ್ಯ ತಿಳುವಳಿಕೆಯೂ ಇಲ್ಲ. ಹಾಗಾಗಿಯೇ ಮನುಷ್ಯ ಸಂತೋಷವನ್ನು ಮರೆತಂತೆ ಜೀವಿಸುತ್ತಾನೆ.

ನಮ್ಮ ಜೀವನ ಸುಂದರವಾದುದು, ಅದನ್ನು ಇರುವಂತೆಯೇ ಸ್ವೀಕರಿಸುವ, ಸಂತೋಷಪಡುವ ಗುಣ ನಮದಾಗಬೇಕು, ಹೊರತು ಇಲ್ಲದಿರುವುದರ ಬಗ್ಗೆ ಚಿಂತಿಸಿ, ಯೋಚಿಸಿ, ನರಳುವ ಅಗತ್ಯ ಇಲ್ಲ. ಸಂತಸ ಪಡುವ ಮನಸ್ಸು ನಮ್ಮದಾದರೆ ಎಲ್ಲದರಲ್ಲೂ, ಎಲ್ಲರಲ್ಲೂ ಸಂತೋಷವನ್ನು ಹುಡುಕಲು ಸಾಧ್ಯ. ಆದರೆ ಆ ಸಂತೋಷ ಮತ್ತೊಬ್ಬರನ್ನು ಅಣಕಿಸಿದಂತಿರಬಾರದು ಅಷ್ಟೇ. ಏನೇ ಆದರೂ, ಏನೇ ಬಂದರೂ ಈಸಬೇಕು ಇದ್ದು ಜೈಸಬೇಕು. ಮಾನ್ಯ ಡಿ.ವಿ ಗುಂಡಪ್ಪ ಅವರು ಹೇಳುವಂತೆ ಎಲ್ಲರೊಳಗೊಂದಾಗುತ್ತಾ ನಗು ನಗುತಾ ಬಾಳಿ, ನಗುತ್ತಲೇ ತೆರಳಬೇಕು.ನಕ್ಕು ನಗಿಸುತ್ತಲಿ ಹಗುರಾಗಿ ಬಾಳುತ್ತಲಿರಬೇಕು. ಇದನ್ನು ಅರಿತೆ ಏನೋ ನಮ್ಮ ಕನ್ನಡದ ವರಕವಿ ಬೇಂದ್ರೆ ಅಜ್ಜ ಹೇಳಿರುವುದು.

ನಕ್ಕ ಸಾಯ್ರೋ
ನಕ್ಕ ಸಾಯ್ರಿ
ನಕ್ಕು ಸತ್ರ
ನಕ್ಷತ್ರ ಅಕ್ಕೀರಿ



ಕ್ವಿನ್‌ಸಿಟಿ ಯೋಜನೆಯಡಿ ವಿಜ್ಞಾನ–ತಂತ್ರಜ್ಞಾನಾಧರಿತ ಸುಸ್ಥಿರ ಬೆಳವಣಿಗೆ



ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಕ್ವಿನ್ ಸಿಟಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಿದರು.

ಬೆಂಗಳೂರು, ಸೆ.26(ಕೆಎಂಶಿ)– ಕ್ವಿನ್ ಸಿಟಿ ಯೋಜನೆಯಡಿ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಂಡು ಸುಸ್ಥಿರ ಬೆಳವಣಿಗೆ ಸಾಧಿಸಲಾಗುವುದು ಎಂದು ಮುಖ್ಯ ಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ವಿಧಾನಸೌಧದ ಬ್ಯಾಂಕ್ವೆಟ್ ಸಭಾಂಗಣದಲ್ಲಿ ಯೋಜನೆಗೆ ಚಾಲನೆ ನೀಡಿ ಮಾತನಾಡಿದ ಮುಖ್ಯಮಂತ್ರಿ, ಜಾಗತಿಕ ಮಟ್ಟದ ಸಹಭಾಗಿತ್ವ ಮತ್ತು ನಾವೀನ್ಯತೆಗಳಿಗೆ ಆದ್ಯತೆ ನೀಡಲಿದ್ದು, 'ಸ್ಮಾರ್ಟ್ ಲಿವಿಂಗ್' ಪರಿಕಲ್ಪನೆಗೆ ಒತ್ತು ಕೊಡಲಾಗುವುದು, ಕರ್ನಾಟಕ ದೇಶದ ಜ್ಞಾನಾಧಾರಿತ ಆರ್ಥಿಕತೆಯಲ್ಲಿ ಪ್ರಥಮ ಸ್ಥಾನದಲ್ಲಿದೆ. ಕ್ವಿನ್‌ಸಿಟಿ ಯೋಜನೆ ಕರ್ನಾಟಕ ಮತ್ತು ಭಾರತದ ಹೊಸ ಭಾಷ್ಯ ಬರೆಯಲಿದೆ ಎಂದರು.

ನಗರದ ಹೊರವಲಯದ ಡಾಬಸ್ ಪೇಟೆ ಮತ್ತು ದೊಡ್ಡಬಳ್ಳಾಪುರ ನಡುವೆ, ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ ಸಮೀಪ ಅಭಿವೃದ್ಧಿಪಡಿಸಲಿರುವ ಜ್ಞಾನ, ಆರೋಗ್ಯ ಮತ್ತು ಸಂಶೋಧನಾ ನಗರ ಯೋಜನೆ (ಕ್ವಿನ್‌ಸಿಟಿ)ಯ ಮೊದಲ ಹಂತಕ್ಕೆ ಚಾಲನೆ ನೀಡಲಾಗಿದೆ ಎಂದರು.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತನಾಡಿ, ಬೆಂಗಳೂರಿನಲ್ಲಿ ಕೈಗಾರಿಕಾ ಬೆಳವಣಿಗೆಗೆ ಬಹಳ ಅವಕಾಶಗಳಿದ್ದು, ಇದರ ಸಾಕಾರಕ್ಕೆ ಸರ್ಕಾರ ಬದ್ಧವಾಗಿದೆ, ಎರಡು ವಾರಗಳಲ್ಲಿ ಕಾವೇರಿ 5ನೇ ಹಂತದ ಕುಡಿಯುವ ನೀರು ಪೂರೈಕೆ ಆರಂಭವಾಗಲಿದ್ದು, ನಗರಕ್ಕೆ ಇನ್ನು 20 ವರ್ಷ ನೀರಿನ ಕೊರತೆ ಇರುವುದಿಲ್ಲ.

ಬೆಂಗಳೂರಿನಲ್ಲಿ ವಿದ್ಯುತ್ ಸಮಸ್ಯೆ ಇಲ್ಲ, ಸಂಚಾರ ವ್ಯವಸ್ಥೆಯಲ್ಲಿ ಸ್ವಲ್ಪ ಮಟ್ಟಿನ ಸಮಸ್ಯೆ ಇರುವುದು ನಿಜ, ಅದನ್ನು ಕ್ಷಿಪ್ರಗತಿಯಲ್ಲಿ ಪರಿಹರಿಸಲು ಕ್ರಮ ಕೈಗೊಳ್ಳಲಾಗುವುದು, ಇಲ್ಲಿರುವಷ್ಟು ಪ್ರತಿಭಾನ್ವಿತ ಮಾನವ ಸಂಪನ್ಮೂಲ ಇನ್ನೆಲ್ಲೂ ಸಿಗುವುದಿಲ್ಲ ಎಂದರು.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಮಾತನಾಡಿ, 40 ಸಾವಿರ ಕೋಟಿ ರೂ. ಹೂಡಿಕೆಯ ಈ ಯೋಜನೆಯಿಂದ 1 ಲಕ್ಷ ಉದ್ಯೋಗ ಸೃಷ್ಟಿಯಾಗ ಲಿದೆ. ಒಟ್ಟು 5,800 ಎಕರೆಯಲ್ಲಿ ಕ್ವಿನ್‌ಸಿಟಿ ಅಭಿವೃದ್ಧಿಪಡಿಸುವ ಉದ್ದೇಶವಿದೆ ಎಂದರು.

ಕ್ವಿನ್‌ಸಿಟಿ ರಾಜ್ಯದ ಕೈಗಾರಿಕಾ ಬೆಳವಣಿಗೆ ಮತ್ತು ಶ್ರೇಷ್ಠತೆಗೆ ಮಾನದಂಡವಾಗಿ ಹೊರಹೊಮ್ಮಲಿದೆ, ಬೆಂಗಳೂರಿನಲ್ಲಿರುವ ವಿಜ್ಞಾನ, ತಂತ್ರಜ್ಞಾನ, ಸಂಶೋಧನೆ, ನವೋದ್ಯಮ, ವೈಮಾಂತರಿಕ್ಷ ಮತ್ತು ರಕ್ಷಣಾ ವಲಯಗಳ ಕಾರ್ಯ ಪರಿಸರವನ್ನು ಪೂರಕವಾಗಿ ಬಳಸಿಕೊಳ್ಳಲಾಗುವುದು. ಮುಂಬರುವ ದಿನಗಳಲ್ಲಿ ಸ್ಮಾರ್ಟ್ ಸಿಟಿಗಳಿಗೆ ಮೇಲ್ಪಂಕ್ತಿಯಾಗಲಿದೆ ಎಂದರು.

ಒಂದು ದೇಶ– ಒಂದು ಚುನಾವಣೆ ಕೈಬಿಡಲು ಆಗ್ರಹಿಸಿ ದಸಂಸ ಪ್ರತಿಭಟನೆ



ಒಂದು ದೇಶ ಒಂದು ಚುನಾವಣೆ ವ್ಯವಸ್ಥೆ ಜಾರಿ ನಿರ್ಧಾರ ವಿರೋಧಿಸಿ ಪ್ರತಿಭಟಿಸಲಾಯಿತು.

ಮೈಸೂರು, ಸೆ.26(ಎಸ್‌ಬಿಡಿ)– 'ಒಂದು ದೇಶ, ಒಂದು ಚುನಾವಣೆ' ಪದ್ಧತಿಯನ್ನು ಕೈಬಿಡಬೇಕು ಎಂದು ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ವತಿಯಿಂದ ಮೈಸೂರಿನ ಗಾಂಧಿ ವೃತ್ತದಲ್ಲಿ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಸರ್ಕಾರದ ಸಚಿವ ಸಂಪುಟ 'ಒಂದು ದೇಶ ಒಂದು ಚುನಾವಣೆ' ಅನುಷ್ಠಾನಗೊಳಿಸಲು ಒಪ್ಪಿಗೆ ನೀಡಿದೆ. ಆದರೆ, ಇದು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದ ಕ್ರಮವಾಗಿದೆ. ಅಲ್ಲದೆ ಇದರ ಅನುಷ್ಠಾನವೂ ಕಷ್ಟಕರವಾಗಿದೆ. ಜನತಂತ್ರ ವ್ಯವಸ್ಥೆಯಲ್ಲಿ ಗೊಂದಲ ಸೃಷ್ಟಿಸುವುದು ಸರಿಯಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಇದು ಬಿಜೆಪಿಯ ರಹಸ್ಯ ಕಾರ್ಯಸೂಚಿ. ಇದು ಪ್ರಜಾಪ್ರಭುತ್ವಕ್ಕೆ ಮಾರಕವಾಗಿದ್ದು, ಜನರೂ ವಿರೋಧಿಸುತ್ತಿದ್ದಾರೆ. ಲೋಕಸಭೆ, ವಿಧಾನಸಭೆಯಲ್ಲಿ ಆಡಳಿತ ರೂಢ ಪಕ್ಷ ವಿಶ್ವಾಸ ಮತ ಗಳಿಸಲು ವಿಫಲವಾದರೆ ಎದುರಾಗುವ ಬಿಕ್ಕಟ್ಟಿಗೆ ಪರಿಹಾರವನ್ನೇ ಸೂಚಿಸಿಲ್ಲ. ಮಧ್ಯಂತರ ಚುನಾವಣೆಗೆ ಅವಕಾಶವಿಲ್ಲದಿದ್ದರೆ ವಿಶ್ವಾಸ ಮತದಲ್ಲಿ ವಿಫಲವಾದ ಪಕ್ಷವೇ ಅಧಿಕಾರದಲ್ಲಿ ಮುಂದುವರೆಯಬೇಕಾಗುತ್ತದೆ. ಹಾಗಾದರೆ ಅದು ಪ್ರಜಾಪ್ರಭುತ್ವಕ್ಕೆ ಮಾಡುವ ದ್ರೋಹವಾಗುತ್ತದೆ ಎಂದು ಬೇಸರ ವ್ಯಕ್ತಪಡಿಸಿದರು. ಲೋಕಸಭೆ, ವಿಧಾನಸಭೆ ಚುನಾವಣೆಯನ್ನು ಏಕಕಾಲದಲ್ಲಿ ನಡೆಸುವುದು ಚುನಾವಣಾ ಆಯೋಗಕ್ಕೆ ಸಾಧ್ಯವಾಗದು. ಈಗಿರುವ ಚುನಾವಣಾ ವ್ಯವಸ್ಥೆಯನ್ನು ದುಪ್ಪಟ್ಟು ಪ್ರಮಾಣದಲ್ಲಿ ವಿಸ್ತರಿಸಬೇಕಾಗುತ್ತದೆ. ಸಂವಿಧಾನಕ್ಕೆ, ಪ್ರಜಾಪ್ರತಿನಿಧಿ ಕಾಯ್ದೆಗೂ ತಿದ್ದುಪಡಿ ಮಾಡಬೇಕಿದೆ. ಇದೆಲ್ಲಾ ತಿಳಿದೂ ಪ್ರಧಾನಿ ನರೇಂದ್ರ ಮೋದಿ ಅವರು ತಮ್ಮ ವೈಫಲ್ಯವನ್ನು ಮುಚ್ಚಿ ಹಾಕಲು ಈ ರೀತಿಯ ಕಸರತ್ತು ನಡೆಸಿದ್ದಾರೆ ಎಂದು ಆರೋಪಿಸಿದರು.

ಇದೇ ವೇಳೆ ಜಾತಿ ನಿಂದನೆ, ಮಹಿಳೆ ಮೇಲಿನ ಅತ್ಯಾಚಾರದ ಆರೋಪ ಎದುರಿಸುತ್ತಿರುವ ಶಾಸಕ ಮುನಿರತ್ನ ವಿರುದ್ಧ ಕಠಿಣ ಕಾನೂನು ಕ್ರಮ ತೆಗೆದುಕೊಳ್ಳಬೇಕು ಎಂದು ಆಗ್ರಹಿಸಲಾಯಿತು. ಸಂಘಟನೆಯ ಮುಖಂಡರಾದ ರಾಜಯ್ಯ ಇಟ್ನ, ಮಲ್ಲೇಶ್ ಚುಂಚನಹಳ್ಳಿ, ಸುರೇಶ್ ಯರಗನಹಳ್ಳಿ, ಗೋವಿಂದರಾಜು ಅಶೋಕಪುರಂ, ರಾಜು, ನೀಲವಾಡಿ, ಕೃಷ್ಣ ಗೋಳಗಟ್ಟ, ಪುಟ್ಟಸ್ವಾಮಿ ದೇವರಸನಹಳ್ಳಿ ಮತ್ತಿತರರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ದಸರಾ ಗಜಪಡೆ, ಅಶ್ವಪಡೆಗೆ ಮೊದಲ ಹಂತದ ಯಶಸ್ವಿ ಸಿಡಿಮದ್ದು ಸದ್ದಿನ ತಾಲೀಮು

ಒಂದೆರಡು ಆನೆಗಳು ಅಳುಕಿದರೆ ಬಹುತೇಕ ಅಂಜಲಿಲ್ಲ... ಕೆಂದಲಿಲ್ಲ

ಮೈಸೂರು, ಸೆ.26(ಎಂಟಿವೈ)– ದಸರಾ ಮಹೋತ್ಸವದ ಜಂಬೂಸವಾರಿಯಲ್ಲಿ ಪಾಲ್ಗೊಳ್ಳುವ ಗಜಪಡೆ ಹಾಗೂ ಅಶ್ವಪಡೆಗೆ ಗುರುವಾರ ಮೊದಲ ಹಂತದ ಸಿಡಿಮದ್ದು ಸಿಡಿತದ ತಾಲೀಮನ್ನು ಯಶಸ್ವಿಯಾಗಿ ನಡೆಸಲಾಯಿತು.

ನಾಡಹಬ್ಬ ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆ ಜಂಬೂಸವಾರಿಗೆ ಕೇವಲ 16 ದಿನ ಮಾತ್ರವಿದ್ದು, ಈ ಹಿನ್ನೆಲೆಯಲ್ಲಿ ದಸರಾ ಗಜಪಡೆ ಹಾಗೂ ಅಶ್ವಪಡೆಯನ್ನು ಸಜ್ಜುಗೊಳಿಸಲು ಅಂತಿಮ ಹಂತದ ತರಬೇತಿ ನೀಡಲಾಗುತ್ತಿದೆ. ಪ್ರತಿವರ್ಷದಂತೆ ಈ ಬಾರಿ ಮೂರು ದಿನ ಸಿಡಿಮದ್ದು ಸಿಡಿಸುವ ತಾಲೀಮಿಗೆ ಉದ್ದೇಶಿಸಲಾಗಿದ್ದು, ಇಂದು ದಸರಾ ವಸ್ತುಪ್ರದರ್ಶನದ ವಾಹನ ನಿಲುಗಡೆ ಸ್ಥಳದಲ್ಲಿ ನಡೆಸಿದ ಮೊದಲ ಹಂತ ಸಿಡಿಮದ್ದು ತಾಲೀಮು ಯಶಸ್ವಿಯಾಗಿ ನೆರವೇರಿತು. ಕ್ಯಾಪ್ಟನ್ ಅಭಿಮನ್ಯು ನೇತೃತ್ವದ 14 ಆನೆಗಳು ಹಾಗೂ ಜಂಜೂಸವಾರಿ ಮೆರವಣಿಗೆಯಲ್ಲಿ ಸಾಗುವ 38 ಕುದುರೆಗಳು ಸಿಡಿಮದ್ದಿನ ತಾಲೀಮಿನಲ್ಲಿ ಪಾಲ್ಗೊಂಡವು.

7 ಫಿರಂಗಿಗಳಲ್ಲಿ ಮೂರು ಸುತ್ತು: ಸಿಡಿಮದ್ದು ಪ್ರಯೋಗಕ್ಕೆ ಅರಮನೆಯಿಂದ 7 ಫಿರಂಗಿಗಳನ್ನು ಸಿಡಿಮದ್ದು ಸಿಡಿತದ ತಂಡ ದಸರಾ ವಸ್ತುಪ್ರದರ್ಶನದ ಆವರಣದ ಪಾರ್ಕಿಂಗ್ ಸ್ಥಳಕ್ಕೆ ತಂದು ಸಿದ್ಧತೆ ಮಾಡಿಕೊಂಡಿತ್ತು. 21 ಬಾರಿ ಸಿಡಿಮದ್ದು ಸಿಡಿಸಲು ಒಂದೂವರೆ ಕೆಜಿಯಿಂದ ಎರಡೂವರೆ ಕೆಜಿಯ ಸಿಡಿಮದ್ದನ್ನು ತಂದಿದ್ದರು. ಎಎಸ್ಐ ಸಿದ್ದರಾಜು ನೇತೃತ್ವದ 30 ಮಂದಿಯುಳ್ಳ ಫಿರಂಗಿ ದಳ ಚಾಕಚಕ್ಯತೆಯಿಂದ ಯಶಸ್ವಿಯಾಗಿ ಸಿಡಿಮದ್ದು ಸಿಡಿಸಿದರು.

ಗಮನಾರ್ಹ ವರ್ತನೆ: ಸಿಡಿಮದ್ದು ತಾಲೀಮಿನಲ್ಲಿ ಪಾಲ್ಗೊಂಡಿದ್ದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆಯ 14 ಆನೆಗಳಲ್ಲಿ ಒಂದೆರಡು ಆನೆಗಳು ಸಣ್ಣ ಪ್ರಮಾಣದಲ್ಲಿ ಬೆದರಿದ್ದು ಹೊರತುಪಡಿಸಿದರೆ, ಉಳಿದ ಆನೆಗಳ ವರ್ತನೆಯಲ್ಲಿ ಗಮನಾರ್ಹ ಸುಧಾರಣೆ ಕಂಡಿತು. ಮೊದಲ ಸುತ್ತಿನಲ್ಲಿ ಸಿಡಿಮದ್ದು ಸಿಡಿಸುವಾಗ ಕಿವಿಗಡಚಿಕ್ಕುವ ಭಾರಿ ಶಬ್ದಕ್ಕೆ ರೋಹಿತ, ಹಿರಣ್ಯ ಬೆದರಿದರೆ, ಮೂರ್‍ನಾಲ್ಕು ಆನೆಗಳು ಘೀಳಿಟ್ಟವು. ಬಳಿಕ ಎರಡು ಮತ್ತು ಮೂರನೇ ಸುತ್ತಿನ ಸಿಡಿಮದ್ದು ಸಿಡಿಸುವಾಗ ಸುಧಾರಿಸಿಕೊಂಡವು.

ಕಳೆದ ಬಾರಿ ರಾದ್ಧಾಂತ, ಈ ಬಾರಿ ಮೆಚ್ಚುಗೆ: ಕಳೆದ ವರ್ಷ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿದ್ದ ರೋಹಿತ ಸಿಡಿಮದ್ದು ಸಿಡಿತದ ಶಬ್ದಕ್ಕೆ ಬೆದರಿತ್ತು. ಅಲ್ಲದೆ, ವಾಪಸ್ಸಾಗುವಾಗ ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಪೇರಿ ಕಿತ್ತು ಕೆಲಕಾಲ ಆತಂಕವನ್ನುಂಟು ಮಾಡಿತ್ತು. ಆದರೆ, ಈ ಬಾರಿ ಒಂದೆರಡು ಬಾರಿ ಮಾತ್ರ ಬೆದರಿ ಹಿಂದೆ ಸರಿಯುವ ಪ್ರಯತ್ನ ಮಾಡಿತು. ಆದರೆ, ಅದರ ಮಾವುತ, ಕಾವಾಡಿ ಹಾಗೂ ಇನ್ನಿತರ ಆನೆಗಳ ಮಾವುತರು ರೋಹಿತನನ್ನು ಸಮಾಧಾನ ಮಾಡಿದರು. ಇದರ ಬೆನ್ನಲ್ಲೇ ಹಿರಣ್ಯ ಆನೆಯೂ ಬೆಚ್ಚಿ ಹಿಂದೆ ಸರಿಯಿತು. ದೊಡ್ಡ ಹರವೆ ಲಕ್ಷ್ಮೀಯೂ ಬೆದರಿತು. ಆದರೆ, ಬೆದರುತ್ತಿದ್ದ ಎಲ್ಲಾ ಆನೆಗಳನ್ನು ಮಾವುತರು ನಿಯಂತ್ರಣಕ್ಕೆ ತಂದರು. ಗಜಪಡೆಯ ನಾಯಕ ಅಭಿಮನ್ಯು, ಮಹೇಂದ್ರ, ಪ್ರಶಾಂತ, ಭೀಮ, ಧನಂಜಯ ಹಾಗೂ ಗೋಪಿ ಸಿಡಿಮದ್ದಿನ ಶಬ್ದಕ್ಕೆ ಕೆಂದಲಿಲ್ಲ. ಇವುಗಳ ಅಕ್ಕಪಕ್ಕ ನಿಂತಿದ್ದ ಕುಮ್ಕಿ ಹಾಗೂ ಕಿರಿಯ ಆನೆಗಳ ವರ್ತನೆಯಲ್ಲಿ ಸುಧಾರಣೆ ಕಂಡಿತು.

ಗಮನ ಸೆಳೆದ ಏಕಲವ್ಯ: ಇದೇ ಮೊದಲ ಬಾರಿಗೆ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿರುವ ಏಕಲವ್ಯ, ಸಿಡಿಮದ್ದಿನ ಶಬ್ದಕ್ಕೆ ಅಂಜದೆ ಗಾಂಭೀರ್ಯ ಕಾಯ್ದುಕೊಳ್ಳುವ ಮೂಲಕ ಗಮನ ಸೆಳೆಯಿತು. ಗಜಪಡೆಯ ಕಿರಿಯ ಆನೆಗಳಲ್ಲಿ ಒಂದಾಗಿರುವ ಭೀಮ ಸರದಿ ಸಾಲಿನ ಕೊನೆಯಲ್ಲಿ ನಿಂತಿತ್ತು. ಪಕ್ಕದಲ್ಲಿದ್ದ ಪಟ್ಟದಾನೆ ಕಂಜನ್‌ಗೆ ಧೈರ್ಯ ತುಂಬಿತು.

ಫಿರಂಗಿಯತ್ತ ನುಗ್ಗಿದ ಗಜಪಡೆ: ಮೊದಲ ಮತ್ತು ಎರಡನೇ ಸುತ್ತಿನ ಸಿಡಿಮದ್ದು ಸಿಡಿತ ಪೂರ್ಣಗೊಂಡು, ಮೂರನೇ ಸುತ್ತಿನ ಕುಶಾಲತೋಪು ಸಿಡಿಸುವ ಕಾರ್ಯ ಆರಂಭಿಸುತ್ತಿದ್ದಂತೆಯೇ ಅಭಿಮನ್ಯು, ಮಹೇಂದ್ರ, ಏಕಲವ್ಯ, ಧನಂಜಯ, ಭೀಮ, ಗೋಪಿ, ಪ್ರಶಾಂತ ಇನ್ನಿತರ ಆನೆಗಳು ಫಿರಂಗಿಯತ್ತ ಮುನ್ನುಗ್ಗಿದವು. ಅದರಲ್ಲೂ ಅಭಿಮನ್ಯು ಸೊಂಡಿಲೆತ್ತಿ ಶರವೇಗದಲ್ಲೇ ಸಾಗಿದ್ದು ಗಮನ ಸೆಳೆಯಿತು.

ಅಭ್ಯಾಸ ಅಗತ್ಯ: ಜಂಬೂಸವಾರಿಯ ದಿನವಾದ ವಿಜಯದಶಮಿಯಂದು ಚಾಮುಂಡೇಶ್ವರಿಗೆ ಪುಷ್ಪಾರ್ಚನೆ ಮಾಡಿದ ನಂತರ 21 ಸುತ್ತಿನ ಕುಶಾಲತೋಪು ಸಿಡಿಸುವಾಗ ಹೊಮ್ಮುವ ಕಿವಿಗಡಚಿಕ್ಕುವ ಶಬ್ದಕ್ಕೆ ಕುದುರೆ, ಆನೆಗಳು ಬೆಚ್ಚದಂತೆ ಪೂರ್ವಭ್ಯಾಸ ವಾಡಿಕೆ. ಪಂಜಿನ ಕವಾಯತು ನಡೆಸುವಾಗಲೂ ಕುಶಾಲ ತೋಪು ಸಿಡಿಸಲಾಗುತ್ತದೆ. ಅದರಂತೆ ಸಿಡಿಮದ್ದು ಸಿಡಿಸಲು ಏಳು ಫಿರಂಗಿಗಳನ್ನು ಅಣಿ ಗೊಳಿಸಲಾಗಿತ್ತು.

ವಾಸನೆ ಗ್ರಹಿಕೆ: ಸಿಡಿಮದ್ದು ಸಿಡಿತ ಪೂರ್ಣಗೊಂಡ ನಂತರ ಎಲ್ಲಾ ಆನೆ ಹಾಗೂ ಕುದುರೆಗಳನ್ನು ಫಿರಂಗಿ ಬಳಿ ಕರೆತಂದು ಸಿಡಿಮದ್ದಿನ ವಾಸನೆ ಹಾಗೂ ಹೊಗೆಯ ಪರಿಚಯಿಸಲಾಯಿತು. 30 ಮಂದಿ ಸಿಎಆರ್ ಪೊಲೀಸರು ಸಿಡಿಮದ್ದು ಸಿಡಿಸುವಲ್ಲಿ ನಿರತರಾಗಿದ್ದರು.

ಕಣ್ತುಂಬಿಕೊಂಡ ಜನ: ದಸರಾ ಗಜಪಡೆಗೆ ಸಿಡಿಮದ್ದು ಸಿಡಿಸುವ ತಾಲೀಮು ನಡೆಸುವ ಕಾರ್ಯವನ್ನು ಸಾಕಷ್ಟು ಮಂದಿ ವೀಕ್ಷಿಸಿ, ಸಂಭ್ರಮಿಸಿದರು. ಸುರಕ್ಷತೆಯ ಹಿತದೃಷ್ಟಿಯಿಂದ ಬಿಗಿಪೊಲೀಸ್ ಭದ್ರತೆಯಲ್ಲಿ ಸಿಡಿಮದ್ದು ಸಿಡಿಸಲಾಯಿತು. ಇದರಿಂದ ಅಂತರ ಕಾಯ್ದುಕೊಂಡು ಜನ ತಾಲೀಮು ವೀಕ್ಷಿಸಿದರು.

ಪ್ರಾಧಿಕಾರದಿಂದ ಪೂಜೆ: ಅರಮನೆ ಆವರಣದಿಂದ ಜಯಮಾರ್ತಾಂಡ ಗೇಟ್ ಮೂಲಕ ಹೊರಬಂದ ಗಜಪಡೆ, ಬಿ.ಎನ್. ರಸ್ತೆ ದಾಟಿ ದಸರಾ ವಸ್ತುಪ್ರದರ್ಶನದ ಮುಖ್ಯದ್ವಾರದ ಬಳಿ ಆಗಮಿಸಿದವು. ಈ ವೇಳೆ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಅಧ್ಯಕ್ಷ ಅಯೂಬ್ ಖಾನ್, ಸಿಇಒ ಕೆ.ರುದ್ರೇಶ್ ಹಾಗೂ ಇನ್ನಿತರರು ಆನೆಗಳಿಗೆ ಪೂಜೆ ಸಲ್ಲಿಸಿ, ಬರಮಾಡಿಕೊಂಡರು. ಅಲ್ಲದೆ, ಮಂಗಳವಾದ್ಯದೊಂದಿಗೆ ಸಿಡಿಮದ್ದು ತಾಲೀಮು ನಡೆಯುವ ಸ್ಥಳಕ್ಕೆ ಮೆರವಣಿಗೆಯಲ್ಲಿ ಕರೆದೊಯ್ಯಲಾಯಿತು.

ಡಿಸಿಎಫ್‌ಗಳಾದ ಡಾ.ಐ.ಬಿ.ಪ್ರಭುಗೌಡ, ಡಾ.ಕೆ.ಎನ್.ಬಸವರಾಜ್, ಡಿಸಿಪಿ ಎಂ.ಮುತ್ತುರಾಜ್, ಆರ್‌ಎಫ್ಒ ಸಂತೋಷ್ ಹೂಗಾರ್, ಪಶುವೈದ್ಯರಾದ ಡಾ.ಮುಜೀಬ್ ರೆಹಮಾನ್, ಡಾ.ಮಿರ್ಜಾ ವಾಸೀಂ, ಡಾ.ರಮೇಶ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.




ದಸರಾ ವಸ್ತುಪ್ರದರ್ಶನದ ವಾಹನ ನಿಲುಗಡೆ ಸ್ಥಳದಲ್ಲಿ ಗಜಪಡೆ, ಅಶ್ವಪಡೆ ಮುಂದೆ ಸಿಡಿಮದ್ದು ತಾಲೀಮು ನಡೆಸುತ್ತಿರುವುದು. (ಬಲಚಿತ್ರ) ಸಿಡಿಮದ್ದು ಸಿಡಿಸುವ ಸಿಬ್ಬಂದಿಗೆ ಬೆಂಕಿ ಸುರಕ್ಷತಾ ವಸ್ತ್ರ ನೀಡಿರುವುದು

ಬೆಂಕಿ ಸುರಕ್ಷತಾ ವಸ್ತ್ರ

ಕಳೆದ ಬಾರಿ ಸಿಡಿಮದ್ದು ಸಿಡಿಸುವಾಗ ಸಿಬ್ಬಂದಿಗೆ ಗಾಯವಾಗಿತ್ತು. ಈ ಹಿನ್ನೆಲೆಯಲ್ಲಿ ಇದೇ ಮೊದಲ ಬಾರಿಗೆ ಸಿಡಿಮದ್ದು ಸಿಡಿಸುವ ಸಿಬ್ಬಂದಿಗೆ ಬೆಂಕಿ ಸುರಕ್ಷತಾ ವಸ್ತ್ರ ನೀಡಲಾಗಿದೆ. ಬೆಂಕಿ ಕಿಡಿ ಮೈ ಮೇಲೆ ಬಿದ್ದರೂ, ದೇಹಕ್ಕೆ ಸುಟ್ಟಗಾಯವಾಗುವುದನ್ನು ಇದರಿಂದ ತಡೆಗಟ್ಟಬಹುದಾಗಿದೆ.

ಯಶಸ್ವಿಯಾಗಿದೆ

ಮೊದಲ ಹಂತದ ಸಿಡಿಮದ್ದು ಸಿಡಿಸುವ ತಾಲೀಮು ಅರಣ್ಯ ಇಲಾಖೆ ಹಾಗೂ ಪೊಲೀಸ್ ಇಲಾಖೆ ಜಂಟಿಯಾಗಿ ನಡೆಸಿವೆ. ಎಲ್ಲಾ ಆನೆ ಹಾಗೂ ಕುದುರೆಗಳು ತಾಲೀಮಿನಲ್ಲಿ ಪಾಲ್ಗೊಂಡಿವೆ. ಇನ್ನು ಎರಡು ಬಾರಿ ಸಿಡಿಮದ್ದು ಸಿಡಿಸುವ ತಾಲೀಮು ನಡೆಸಲಾಗುತ್ತದೆ. **–ಎಂ.ಮುತ್ತುರಾಜ್, ಡಿಸಿಎಫ್**

ತೂರಿ ಬಂದ ಡ್ರೋನ್, ವಶಕ್ಕೆ ಪಡೆದ ಪೊಲೀಸರು

ಗಜಪಡೆ ತಾಲೀಮಿನ ವೇಳೆ ಕೆಲವರು ಅನಧಿಕೃತವಾಗಿ ಡ್ರೋನ್ ಹಾರಿಸಿ ಚಿತ್ರೀಕರಿಸಿ ಸಾಮಾಜಿಕ ಜಾಲತಾಣಗಳಲ್ಲಿ ದೃಶ್ಯಗಳ ಅಪ್ಲೋಡ್ ಮಾಡುತ್ತಿದ್ದಾರೆ. ಅರಮನೆ, ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆಯಲ್ಲಿ ಗಜಪಡೆ ಸಂಚರಿಸುವ ವಿಡಿಯೋ ಚಿತ್ರೀಕರಿಸುತ್ತಿದ್ದರು. ಅದರ ಮುಂದುವರೆದ ಭಾಗವಾಗಿ ಸಿಡಿಮದ್ದು ತಾಲೀಮಿನ ವಿಡಿಯೋ ಮಾಡಲು ಯುವಕನೊಬ್ಬ ಎಲ್ಲಿಂದಲೋ ಡ್ರೋನ್ ಹಾರಿಸಿ ಚಿತ್ರೀಕರಿಸುತ್ತಿದ್ದ. ಡ್ರೋನ್ ಹಾರಾಟ ಗಮನಿಸಿದ ಆನೆಗಳು ಬೆದರುತ್ತಿದ್ದವು. ಸಿಡಿಮದ್ದು ಸಿಡಿಸುವ ಪ್ರಕ್ರಿಯೆ ಆರಂಭಕ್ಕೂ ಮುನ್ನವೇ ಹಾರಾಡುತ್ತಿದ್ದ ಡ್ರೋನ್ ಯಾರಿಗೆ ಸೇರಿದ್ದು ಎಂಬ ಪ್ರಶ್ನೆ ಉದ್ಭವಿಸಿತ್ತು. ಈ ವೇಳೆ ಅರಣ್ಯ ಇಲಾಖೆ, ಪೊಲೀಸ್ ಇಲಾಖೆಯದ್ದಲ್ಲ ಎಂಬುದು ಸ್ಪಷ್ಟವಾಯಿತು. ಸಿಡಿಮದ್ದು ಸಿಡಿತಕ್ಕೆ ಎರಡು ನಿಮಿಷ ಮುನ್ನವೇ ಆ ಡ್ರೋನ್ ನೆಲಕ್ಕಪ್ಪಳಿಸಿತು. ಮೂರ್‍ನಾಲ್ಕು ಮಂದಿ ಕೂಡಲೇ ಅಂತರದಲ್ಲಿ ಪಾರಾದರು. ಈ ಸಂಬಂಧ ಅನುಮತಿ ಪಡೆಯದೇ ಡ್ರೋನ್ ಹಾರಿಸುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿದೆ. ಡ್ರೋನ್ ಯಾರಿಗೆ ಸೇರಿದ್ದು ಎಂದು ಸಂಜೆವರೆಗೂ ಮಾಹಿತಿ ತಿಳಿದುಬಂದಿಲ್ಲ.

ಜಂಬೂಸವಾರಿ, ಪಂಜಿನ ಕವಾಯತು ಟಿಕೆಟ್‌ಗೆ ಭಾರಿ ಡಿಮ್ಯಾಂಡ್

ಸೆ.30ರವರೆಗೂ ಮಾರಾಟ ವ್ಯವಸ್ಥೆ

ಮೈಸೂರು,ಸೆ.26(ಎಸ್‌ಬಿಡಿ)–ಮೈಸೂರು ದಸರಾ ಜಂಬೂಸವಾರಿ ಹಾಗೂ ಪಂಜಿನ ಕವಾಯತು ಟಿಕೆಟ್ ಮಾರಾಟದ ಮೊದಲ ದಿನ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಸೆ.30ರವರೆಗೂ ಮಾರಾಟ ಮುಂದುವರೆಯಲಿದೆ ಎಂದು ದಸರಾ ವಿಶೇಷಾಧಿಕಾರಿಯೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದ್ದಾರೆ.

ಮೈಸೂರು ದಸರಾ–2024ರ ಅಧಿಕೃತ ಜಾಲತಾಣ **https://www.mysore dasara. gov.in/** ಮೂಲಕ ಬೆಳಗ್ಗೆ 9 ಗಂಟೆಯಿಂದಲೇ ಟಿಕೆಟ್ ಮಾರಾಟ ಆರಂಭವಾಗುತ್ತದೆ. ಮೊದಲ ದಿನವಾದ ಗುರುವಾರ ಮಾರಾಟಕ್ಕಿಟ್ಟಿದ್ದ ಟಿಕೆಟ್‌ಗಳು ಕೆಲವೇ ಹೊತ್ತಿನಲ್ಲಿ ಖರೀದಿಯಾಗಿದ್ದು, ಸೆ.30ರವರೆಗೂ ಮಾರಾಟ ಮುಂದುವರೆಯಲಿದೆ. ಒಟ್ಟು ಸಂಖ್ಯೆಯನ್ನು ಕೊನೆಯಲ್ಲಿ ತಿಳಿಸಲಾಗುವುದು ಎಂದಿದ್ದಾರೆ. ಗೋಲ್ಡ್ ಕಾರ್ಡ್‌ಗೆ 6,500 ರೂ., ಅರಮನೆ ಆವರಣದಲ್ಲಿ ಜಂಬೂಸವಾರಿ ವೀಕ್ಷಣೆ ಟಿಕೆಟ್‌ಗೆ 3,500 ರೂ. ಹಾಗೂ ಬನ್ನಿಮಂಟಪದಲ್ಲಿ ನಡೆಯಲಿರುವ ಪಂಜಿನ ಕವಾಯತು ವೀಕ್ಷಣೆ ಟಿಕೆಟ್‌ಗೆ 1,000 ರೂ. ನಿಗದಿಪಡಿಸಲಾಗಿದೆ. ಒಂದು ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್‌ನಲ್ಲಿ ಒಬ್ಬರಿಗೆ ಮಾತ್ರವೇ ಪ್ರವೇಶಾವಕಾಶವಿರುತ್ತದೆ.

ದಸರಾ ಗಜಪಡೆ ಫಿಟ್ ಅಂಡ್ ರೆಡಿ!



ಪ್ರಭುಗೌಡ

ಮೈಸೂರು,ಸೆ.26(ಎಂಟಿವೈ)–ದಸರಾ ಮಹೋತ್ಸವ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಗಜಪಡೆಯನ್ನು ಸಜ್ಜುಗೊಳಿಸುವ ಅಂತಿಮ ಹಂತದ ತಾಲೀಮು ನಡೆಸಲಾಗುತ್ತಿದ್ದು, ಗುರುವಾರ ನಡೆದ ಮೊದಲ ಹಂತದ ಸಿಡಿಮದ್ದು ಸಿಡಿಸುವ ತಾಲೀಮಿನಲ್ಲಿ ಎಲ್ಲಾ ಆನೆಗಳು ಅತ್ಯುತ್ತಮವಾಗಿ ವರ್ತಿಸಿವೆ ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ತಿಳಿಸಿದ್ದಾರೆ.

ದಸರಾ ವಸ್ತುಪ್ರದರ್ಶನದ ಆವರಣದಲ್ಲಿ ಸಿಡಿಮದ್ದು ತಾಲೀಮಿನ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಳೆದ ಬಾರಿ ಬೆದರಿದ್ದ ಆನೆಗಳು, ಹೊಸ ಆನೆಗಳು ಸೇರಿದಂತೆ ಎಲ್ಲಾ ಆನೆಗಳು ಉತ್ತಮವಾಗಿ ಸ್ಪಂದಿಸಿವೆ. ಇನ್ನು ಎರಡು ಬಾರಿ ಸಿಡಿಮದ್ದು ತಾಲೀಮು ನಡೆಸಲಾಗುವುದು. ಜಂಬೂಸವಾರಿಗೆ ಎಲ್ಲಾ ಆನೆಗಳನ್ನು ಸಮರ್ಥವಾಗಿ ಸಜ್ಜುಗೊಳಿಸಲಾಗುವುದು. ಎಲ್ಲ ಆನೆಗಳೂ ಕುಶಾಲತೋಪು ತಾಲೀಮಿನಲ್ಲಿ ಪಾಲ್ಗೊಂಡು ಧೈರ್ಯ ಪ್ರದರ್ಶಿಸಿವೆ. ಇದೇ ಮೊದಲ ಬಾರಿ ಬಂದಿರುವ, ಕಾಡಿನಲ್ಲಿ ಸೆರೆಸಿಕ್ಕ ಕೇವಲ ಒಂದೂವರೆ ವರ್ಷದಲ್ಲಿ ಪಳಗಿರುವ ಏಕಲವ್ಯ ಭರವಸೆ ಮೂಡಿಸಿದ್ದಾನೆ ಎಂದು ತಿಳಿಸಿದರು.

ಶ್ರೀರಂಗಪಟ್ಟಣ ದಸರಾಗೆ ಮಹೇಂದ್ರ: ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಈ ಬಾರಿ ಅನುಭವಿ ಆನೆ ಮಹೇಂದ್ರ ಹಾಗೂ ಲಕ್ಷ್ಮೀ, ಹಿರಣ್ಯ ಕಳುಹಿಸುವ ಸಂಬಂಧ ಪಿಸಿಸಿಎಫ್‌ಗೆ ಪತ್ರ ಬರೆಯಲಾಗಿದೆ. ಅಲ್ಲಿಂದ ಅನುಮತಿ ಬಂದ ನಂತರ ಕಳುಹಿಸಿಕೊಡಲಾಗುತ್ತದೆ ಎಂದು ತಿಳಿಸಿದರು.

ನಿಶಾನೆ ಆಯ್ಕೆ ಮಾಡಲಾಗುತ್ತದೆ: ಜಂಬೂಸವಾರಿ ಮೆರವಣಿಗೆಯಲ್ಲಿ ನಿಶಾನೆ ಆನೆ, ನೌಪತ್ ಜವಾಬ್ದಾರಿ ನಿರ್ವಹಣೆಗೆ ಯಾವ ಆನೆಯನ್ನು ಕಳುಹಿಸಬೇಕು ಎಂದು ಇನ್ನು ನಿರ್ಧರಿಸಿಲ್ಲ. ಚರ್ಚೆ ಮಾಡಿ ಆಯ್ಕೆ ಮಾಡಲಾಗುತ್ತದೆ ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ತಿಳಿಸಿದರು.

ಜಿಲ್ಲಾ ಮಟ್ಟದ ಸಿಎಂ ಕಪ್ ಕ್ರೀಡಾಕೂಟಕ್ಕೆ ಚಾಲನೆ




ಮೈಸೂರಿನ ನಜ಼ರ್‌ಬಾದ್‌ನಲ್ಲಿರುವ ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಗುರುವಾರ ಆರಂಭವಾದ ಎರಡು ದಿನಗಳ ಜಿಲ್ಲಾ ಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟದಲ್ಲಿ ಓಟದ ಸ್ಪರ್ಧೆಯಲ್ಲಿ ಪಾಲ್ಗೊಂಡಿರುವ ಯುವ ಪಟುಗಳನ್ನು ಕಾಣಬಹುದು.

ಮೈಸೂರು, ಸೆ.26(ಎಂಟಿವೈ)–ದಸರಾ ಮಹೋತ್ಸವ ಹಿನ್ನೆಲೆಯಲ್ಲಿ ನಡೆಯುವ ರಾಜ್ಯ ಮಟ್ಟದ ಸಿಎಂ ಕಪ್ ಕ್ರೀಡಾಕೂಟಕ್ಕೆ ಕ್ರೀಡಾಪಟುಗಳನ್ನು ಆಯ್ಕೆ ಮಾಡುವ ನಿಟ್ಟಿನಲ್ಲಿ ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣ ಸೇರಿದಂತೆ ವಿವಿಧೆಡೆ ಮೈಸೂರು ಜಿಲ್ಲಾ ಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟ ಆರಂಭವಾಯಿತು.

ಮೈಸೂರಿನ ನಜ಼ರ್‌ಬಾದ್‌ನಲ್ಲಿರುವ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಗುರುವಾರ ಜಿಲ್ಲಾಡಳಿತ, ಜಿ.ಪಂ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಎರಡು ದಿನಗಳ ಕಾಲ ನಡೆದ ಜಿಲ್ಲಾ ಮಟ್ಟದ ದಸರಾ ಸಿಎಂ ಕಪ್ ಕ್ರೀಡಾಕೂಟಕ್ಕೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಕ್ರೀಡೆ ಪ್ರತಿಯೊಬ್ಬರ ಜೀವನದ ಅವಿಭಾಜ್ಯ ಅಂಗವಾಗಬೇಕು. ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕ, ದೈಹಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ದೈಹಿಕ ಹಾಗೂ ಮಾನಸಿಕ ಆರೋಗ್ಯಕ್ಕೆ ಕ್ರೀಡೆ ಸಹಕಾರಿಯಾಗಿದೆ. ಕ್ರೀಡಾ ಸ್ಪರ್ಧೆಗಳಲ್ಲಿ ಸೋಲು, ಗೆಲುವು ಸಾಮಾನ್ಯವಾಗಿದ್ದು, ಎಲ್ಲರೂ ಕ್ರೀಡಾ ಮನೋಭಾವದಿಂದ ಭಾಗವಹಿಸಬೇಕು. ಕ್ರೀಡೆ ಮಾತ್ರವಲ್ಲದೇ, ಎಲ್ಲಾ ಕ್ಷೇತ್ರದಲ್ಲೂ ಕ್ರೀಡಾ ಮನೋಭಾವನೆಯಿಂದ ತೊಡಗಿಸಿಕೊಳ್ಳಬೇಕು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ತನ್ವೀರ್ ಸೇಠ್ ಮಾತನಾಡಿ, ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಣ ವ್ಯವಸ್ಥೆಯಲ್ಲಿ ಹೆಚ್ಚು ಅಂಕ ಪಡೆಯುವುದಕ್ಕೆ ಹೆಚ್ಚಿನ ಮಹತ್ವ ನೀಡುತ್ತಿರುವುದನ್ನು ಕಾಣುತ್ತೇವೆ. ವಿದ್ಯಾರ್ಥಿಗಳು ಅಧ್ಯಯನದೊಂದಿಗೆ ಕ್ರೀಡೆಯಲ್ಲೂ ತೊಡಗಿಸಿಕೊಳ್ಳಬೇಕು. ಆಗ ಮಾತ್ರ ದೈಹಿಕ ಮತ್ತು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವವರು ಕ್ರೀಡಾಸ್ಫೂರ್ತಿಯಿಂದ ಭಾಗವಹಿಸಬೇಕು. ಸೋಲು–ಗೆಲುವು ಮುಖ್ಯವಲ್ಲ. ಭಾಗವಹಿಸುವುದು ಮುಖ್ಯ. ಎರಡನ್ನೂ ಸಮಾನವಾಗಿ ಸ್ವೀಕರಿಸಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಕ್ರೀಡಾಪಟು ಮಮತಾ ಪ್ರತಿಜ್ಞಾವಿಧಿ ಬೋಧಿಸಿದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಜಿಲ್ಲೆಯ ಎಲ್ಲಾ ತಾಲೂಕುಗಳಿಂದ 1800ಕ್ಕೂ ಹೆಚ್ಚು ಕ್ರೀಡಾಪಟುಗಳು ಪಾಲ್ಗೊಂಡಿದ್ದಾರೆ. ವಿವಿಧ ಕ್ರೀಡೆಗಳಲ್ಲಿ ಆಯ್ಕೆಯಾದ ಪಟುಗಳು ದಸರಾ ಸಿಎಂ ಕಪ್ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ.

ಇಂದಿನಿಂದ ಯುವ ದಸರಾ ಟಿಕೆಟ್ ಮಾರಾಟ

- ಗ್ಯಾಲರಿ–1 ಟಿಕೆಟ್ ದರ 8,000 ರೂ.
- ಗ್ಯಾಲರಿ–2 ಟಿಕೆಟ್ ದರ 5,000 ರೂ.
- ಒಬ್ಬರಿಗೆ ಒಮ್ಮೆ ಮಾತ್ರ ಪ್ರವೇಶ
- ಸಾಮಾನ್ಯ ಗ್ಯಾಲರಿಗೆ ಉಚಿತ ಪ್ರವೇಶ
- ಟಿಕೆಟ್ ಹೊಂದಿರುವವರಿಗೆ ವಿಶೇಷ ಪ್ರವೇಶ
- ಅ.6ರಂದು ಅಶ್ವಿನಿ ಪುನೀತ್ ರಾಜ್‌ಕುಮಾರ್ ಚಾಲನೆ
- 5 ದಿನಗಳ ಕಾಲ ಯುವ ಸಮುದಾಯಕ್ಕೆ ಮಸ್ತ್‌ಮಜಾ
- ಮೈಸೂರು ಹೊರ ವಲಯ ಉತ್ತನಹಳ್ಳಿ ಬಳಿ ಮೆಗಾ ಇವೆಂಟ್



ಅಶ್ವಿನಿ ಪುನೀತ್ ರಾಜ್‌ಕುಮಾರ್

ಮೈಸೂರು, ಸೆ.26(ಆರ್‌ಕೆ)– ಪ್ರಖ್ಯಾತ ಸಂಗೀತ ನಿರ್ದೇಶಕರು, ಸಂಗೀತ ಸಂಯೋಜಕರು, ಪ್ರಸಿದ್ಧ ಗಾಯಕರು ರಂಜಿಸಲಿರುವ ದಸರಾ ಉತ್ಸವದ ಮೆಗಾ ಇವೆಂಟ್ ಯುವ ದಸರಾ 2024ರ ಮೈಸೂರು ದಸರಾ ಮಹೋತ್ಸವ ಪ್ರಮುಖ ಆಕರ್ಷಣೆಯಾಗಿದೆ.

ಈ ಬಾರಿಯ ಯುವ ದಸರಾದಲ್ಲಿ ಸಂಗೀತ ಪ್ರಿಯರ ಜೇಬಿಗೆ ಕತ್ತರಿ ಬೀಳುವುದು ಗ್ಯಾರಂಟಿ. ಮೈಸೂರು ಜಿಲ್ಲಾಡಳಿತವು ಮೈಸೂರಿನ ಹೊರವಲಯದ 100 ಎಕರೆ ಬಯಲು ಪ್ರದೇಶದಲ್ಲಿ ಯುವ ದಸರಾ ಕಾರ್ಯಕ್ರಮವನ್ನು ಆಯೋಜಿಸಿದೆ. ಆಯರಹಳ್ಳಿ ಮತ್ತು ಉತ್ತನಹಳ್ಳಿ ನಡುವೆ ರಿಂಗ್ ರೋಡ್ ಬಳಿ ಅ.6ರಿಂದ 10ರವರೆಗೆ 5 ದಿನಗಳ ಕಾಲ ಪ್ರತಿದಿನ ಸಂಜೆ 6ರಿಂದ ರಾತ್ರಿ 10 ಗಂಟೆಯವರೆಗೆ ನಡೆಯಲಿರುವ ಕಾರ್ಯಕ್ರಮಕ್ಕೆ ಟಿಕೆಟ್ ದರ ನಿಗದಿ ಮಾಡಲಾಗಿದೆ.



ಸದರಿ ಕಾರ್ಯಕ್ರಮಕ್ಕೆ ಒಟ್ಟು 14 ಕೋಟಿ ವೆಚ್ಚ ಅಂದಾಜಿಸಲಾಗಿದ್ದು, ಅದಕ್ಕಾಗಿ ಜಿಲ್ಲಾಡಳಿತವು ಟಿಕೆಟ್ ಮಾರಾಟದಿಂದಲೂ ಸಂಪನ್ಮೂಲ ಕ್ರೋಢೀಕರಿಸಲು ಮುಂದಾಗಿದೆ. ಪ್ರತಿದಿನದ ಕಾರ್ಯಕ್ರಮಕ್ಕೆ ಸುಮಾರು ಲಕ್ಷ ಮಂದಿ ಆಗಮಿಸುವ ನಿರೀಕ್ಷೆ ಇರುವುದರಿಂದ ವಿಶಾಲ ಪೆಂಡಾಲ್ ಹಾಗೂ ಬೃಹತ್ ವೇದಿಕೆಯನ್ನು ನಿರ್ಮಿಸಲಾಗುತ್ತಿದೆ. ಈ ಹಿಂದೆ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆಯುತ್ತಿದ್ದ ಯುವ ದಸರಾ ಕಾರ್ಯಕ್ರಮವನ್ನು ನಂತರ ಮಹಾರಾಜ ಕಾಲೇಜು ಮೈದಾನಕ್ಕೆ ಸ್ಥಳಾಂತರಿಸಲಾಗಿತ್ತು. ಈ ಬಾರಿ ಪ್ರಖ್ಯಾತ ಸಂಗೀತ ನಿರ್ದೇಶಕ ಇಳಯರಾಜಾ ಮತ್ತು ಎ.ಆರ್. ರೆಹಮಾನ್ ಆಹ್ವಾನಿಸಿರುವುದರಿಂದ ಸಹಜವಾಗಿ ಅತೀ ಹೆಚ್ಚು ಯುವ ಸಮೂಹ ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವ ನಿರೀಕ್ಷೆ ಇದೆ.

ಆನ್‌ಲೈನ್ ಮೂಲಕ ಟಿಕೆಟ್‌ಗಳನ್ನು ನಾಳೆ (ಸೆ.27)ಯಿಂದ ಮಾರಾಟ ಮಾಡಲಾಗುವುದು. ಗ್ಯಾಲರಿ 1ಕ್ಕೆ ತಲಾ 8,000 ರೂ. ಹಾಗೂ ಗ್ಯಾಲರಿ–2ಕ್ಕೆ 5,000 ರೂ.ಗಳನ್ನು ಒಂದು ಕಾರ್ಯಕ್ರಮಕ್ಕೆ ಮಾತ್ರ ಟಿಕೆಟ್ ದರ ನಿಗದಿಪಡಿಸಲಾಗಿದೆ. ಸುಮಾರು 10,000 ಸಾವಿರ ಟಿಕೆಟ್‌ಗಳನ್ನು www.mysoredasara.gov.in, www.bookmyshow.com ಶುಕ್ರವಾರದಿಂದ ಆನ್‌ಲೈನ್‌ನಲ್ಲಿ ಖರೀದಿಸಬಹುದಾಗಿದೆ. ಪ್ರವೇಶ ಹಾಗೂ ಆಸನ ವ್ಯವಸ್ಥೆಯನ್ನು ಪ್ರತ್ಯೇಕ ಹಾಗೂ ವ್ಯವಸ್ಥಿತವಾಗಿ ಮಾಡಲಾಗುತ್ತಿದೆ.

ಗ್ಯಾಲರಿ–1 ಮುಖ್ಯ ವೇದಿಕೆಗೆ ಸಮೀಪದಲ್ಲಿ ಅದರ ಹಿಂದೆ ಗ್ಯಾಲರಿ–2 ಅನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಉಳಿದ ಸಾಮಾನ್ಯ ಗ್ಯಾಲರಿಯಲ್ಲಿ ಉಚಿತ ಪ್ರವೇಶ ಕಲ್ಪಿಸಲಾಗಿದ್ದು, 90 ಸಾವಿರ ಮಂದಿ ಅಲ್ಲಿ ಕುಳಿತು ಯುವ ದಸರಾ ಕಾರ್ಯಕ್ರಮ ವೀಕ್ಷಿಸಬಹುದಾಗಿದೆ. ಈ ಸಂಬಂಧ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಅವರು, 8000 ರೂ. ಟಿಕೆಟ್ ಬೆಲೆಯ 2 ಸಾವಿರ ಟಿಕೆಟ್ ಹಾಗೂ 5000 ರೂ. ಬೆಲೆಯ 8 ಸಾವಿರ ಟಿಕೆಟ್‌ಗಳು ಆರಂಭದಲ್ಲಿ ಮಾರಾಟವಾಗಬಹುದು. ಬೇಡಿಕೆಗೆ ತಕ್ಕಂತೆ ಮಾರಾಟ ಮಾಡಲು ವ್ಯವಸ್ಥೆ ಮಾಡಲಾಗಿದೆ ಎಂದರು.

ಇಳಯರಾಜಾ ಮತ್ತು ಎ.ಆರ್. ರೆಹಮಾನ್‌ರಂತಹ ಪ್ರಖ್ಯಾತ ಸಂಗೀತಗಾರರು ಕಾರ್ಯಕ್ರಮ ಪ್ರಸ್ತುತಪಡಿಸುವುದರಿಂದ ಮೈಸೂರು ಅಲ್ಲದೆ ಬೆಂಗಳೂರು ಹಾಗೂ ಇನ್ನಿತರೆ ಕಡೆಗಳಿಂದಲೂ ಭಾರಿ ಸಂಖ್ಯೆಯಲ್ಲಿ ಜನ ಯುವ ದಸರಾಗೆ ಬರುವ ನಿರೀಕ್ಷೆ ಇದೆ. ನಾವು 1 ಲಕ್ಷ ಮಂದಿ ಕಾರ್ಯಕ್ರಮ ವೀಕ್ಷಿಸಲು ಅನುವಾಗುವಂತೆ ಮೈಸೂರಿನ ಹೊರ ವಲಯದಲ್ಲಿ ಯುವ ದಸರಾ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ. ಹಾಗೆಯೇ ಅಲ್ಲಿ ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ, ವಿದ್ಯುತ್ ದೀಪದ ವ್ಯವಸ್ಥೆ, ಸುರಕ್ಷತೆಗಾಗಿ ವ್ಯಾಪಕ ಪೊಲೀಸ್ ಬಂದೋಬಸ್ತ್ ಒದಗಿಸಲಾಗುವುದು ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು.


ದಸರಾ ಗೋಲ್ಡ್ ಕಾರ್ಡ್ ಹೊಂದಿರುವವರಿಗೆ ಯುವ ದಸರಾ ಕಾರ್ಯಕ್ರಮದಲ್ಲಿ ಉಚಿತ ಪ್ರವೇಶವಿರುವುದಿಲ್ಲ. ಅವರು ಪ್ರತ್ಯೇಕವಾಗಿ ಯುವ ದಸರಾ ಟಿಕೆಟ್ ಖರೀದಿಸಬೇಕಿದೆ ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ. ಕಾರ್ಯಕ್ರಮದ ಸ್ಥಳಕ್ಕೆ ಹೋಗಿ ಬರಲು ನಗರ ಬಸ್ ನಿಲ್ದಾಣದಿಂದ ಕೆಎಸ್‌ಆರ್‌ಟಿಸಿ ಬಸ್ ವ್ಯವಸ್ಥೆ ಮಾಡಲಾಗಿದೆ. ಅದೇ ರೀತಿ ಯುವ ದಸರಾ ನಡೆಯುವ ದಿನಗಳಂದು ಸಂಜೆ 6ರ ನಂತರ ಉತ್ತನಹಳ್ಳಿಯಿಂದ ಚಾಮುಂಡಿಬೆಟ್ಟಕ್ಕೆ ಹೋಗುವ ರಸ್ತೆಯ ಗೇಟ್ ಅನ್ನು ಬಂದ್ ಮಾಡಲಾಗುವುದು. ಸಾಮಾನ್ಯ ದಿನಗಳಲ್ಲಿ ಈ ಗೇಟ್‌ಗಳು ರಾತ್ರಿ 10 ಗಂಟೆಗೆ ಬಂದ್ ಆಗಲಿವೆ ಎಂದು ತಿಳಿಸಿದರು.

ಯುವ ದಸರಾ ಮೆಗಾ ಕಾರ್ಯಕ್ರಮ

- **ಅ.6:** ಶ್ರೇಯಾ ಘೋಷಲ್ ಅವರಿಂದ ಸಂಗೀತ ಸಂಜೆ
- **ಅ.7:** ಸಂಗೀತ ನಿರ್ದೇಶಕ ರವಿ ಬಸ್ರೂರ್ ಸಂಗೀತ ಕಾರ್ಯಕ್ರಮ
- **ಅ.8:** ಬಾಲಿವುಡ್ ಖ್ಯಾತಿಯ ರ್‍ಯಾಪರ್ ಬಾದ್‌ಶಾ ಸಂಗೀತ ರಂಜನೆ
- **ಅ.9:** ಪ್ರಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್ ಸಂಗೀತ ಕಾರ್ಯಕ್ರಮ
- **ಅ.10:** ಮೆಲೋಡಿ ಕಿಂಗ್ ಹಿರಿಯ ಸಂಗೀತ ನಿರ್ದೇಶಕ ಇಳಯರಾಜಾರಿಂದ ಸಂಗೀತ ಸಂಜೆ

ಮೈಸೂರು ಮಿತ್ರ

ಗಗನಚುಕ್ಕಿ ಜಲಪಾತೋತ್ಸವದಿಂದ 2 ಟಿಎಂಸಿ ಕಾವೇರಿ ನೀರು ಪೋಲು



2 ಟಿಎಂಸಿ ನೀರು ಪೋಲಿಗೆ ಕಾರಣವಾದ ಜಲಪಾತೋತ್ಸವ

ಕಡೆ ಭಾಗಕ್ಕೆ ನೀರು ಕೊಡದೆ ನೂರಾರು ಎಕರೆ ಬೆಳೆ ನಾಶ, ಎಕರೆಗೆ 30 ಸಾವಿರ ಪರಿಹಾರ ಕೊಡಲು ಡಾ.ಅನ್ನದಾನಿ ಒತ್ತಾಯ

ಅ.18, 19ರಂದು ಉದ್ಯೋಗ ಮೇಳ

ಅಕ್ಟೋಬರ್ 18, 19ರಂದು ಮಂಡ್ಯ ಟು ಇಂಡಿಯಾ ಹೆಸರಿನಡಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಮಂಡ್ಯದಲ್ಲಿ ಉದ್ಯೋಗ ಮೇಳ ನಡೆಯಲಿದ್ದು, ಕೈಗಾರಿಕಾ ಮಂತ್ರಿಯಾಗಿರುವ ಕುಮಾರಸ್ವಾಮಿ ಅವರು ಹಲವು ಉದ್ಯೋಗ ಸಂಸ್ಥೆಗಳನ್ನು ಮಂಡ್ಯಕ್ಕೆ ಕರೆತಂದು ಇಂಜಿನಿಯರಿಂಗ್, ಡಿಗ್ರಿ, ಡಿಪ್ಲೊಮೋ, ಐಟಿಐ ಸೇರಿದಂತೆ ಇನ್ನಿತರೆ ಪದವೀಧರ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸುವ ಕೆಲಸಕ್ಕೆ ಮುಂದಾಗಿದ್ದು, ಇದರ ಸದುಪಯೋಗ ಪಡೆದುಕೊಳ್ಳಬೇಕು.

ಧರ್ಮಸ್ಥಳ ಸಂಸ್ಥೆ ವಿರುದ್ಧ ಸುಳ್ಳು ಆರೋಪ

ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಸಾಲ ನೀಡಿರುವ ಸಾಲಗಾರರಿಂದ ಹೆಚ್ಚಿನ ಪ್ರಮಾಣದ ಬಡ್ಡಿ ವಸೂಲಿ ಮಾಡುತ್ತಿದೆ ಎಂದು ಸುಳ್ಳು ಆರೋಪಗಳನ್ನು ಮಾಡಲಾಗುತ್ತಿದ್ದು, ಇದು ಸತ್ಯಕ್ಕೆ ದೂರವಾಗಿದೆ. ಧರ್ಮಸ್ಥಳ ಸಂಸ್ಥೆಯು ವರ್ಷಕ್ಕೆ ಕೇವಲ 14 ಪರ್ಸೆಂಟ್ ಮಾತ್ರ ಬಡ್ಡಿ ಹಣ ಪಡೆಯುತ್ತಿದ್ದು, ಆ ಹಣವನ್ನು ಸಾರ್ವಜನಿರ ಉಪಯೋಗಕ್ಕೆ ಬಳಸಲು ಕೆರೆ, ಕಟ್ಟೆಗಳ ಹೂಳು ತೆಗೆಯುವುದು, ದೇವಾಲಯಗಳ ಜೀರ್ಣೋದ್ಧಾರಕ್ಕೆ ಬಳಸಿಕೊಳ್ಳಲಾಗುತ್ತಿದೆ. ಇಂತಹ ಸಂಸ್ಥೆ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಬಾರದು.



ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡುತ್ತಿರುವ ಡಾ.ಕೆ.ಅನ್ನದಾನಿ.

ಮಂಡ್ಯ,ಸೆ.26–ಇದೇ ತಿಂಗಳು ಸೆ. 14, 15 ರಂದು ನಡೆದ ಮಳವಳ್ಳಿಯ ಗಗನಚುಕ್ಕಿ ಜಲಪಾತೋತ್ಸವದಿಂದ 2 ಟಿಎಂಸಿ ಕಾವೇರಿ ನೀರು ಪೋಲಾಗಿ ತಮಿಳುನಾಡಿಗೆ ಹರಿದಿದ್ದು, ಈ ನೀರು ಇದ್ದಿದ್ದರೆ ಮಂಡ್ಯ ಜಿಲ್ಲೆಯ ಕೃಷಿ ಬೆಳೆಗೆ ಬಳಸಿಕೊಂಡು, ಕೆರೆ ಮತ್ತು ನಾಲೆಗಳನ್ನು ತುಂಬಿಸಿಕೊಳ್ಳಬಹುದಿತ್ತು. ಆದರೆ ಉತ್ಸವದ ಹೆಸರಿನಲ್ಲಿ ಕಾವೇರಿ ನೀರನ್ನು ಅನ್ಯಾಯವಾಗಿ ಪೋಲು ಮಾಡಲಾಗಿದೆ ಎಂದು ಮಾಜಿ ಶಾಸಕ ಡಾ.ಕೆ. ಅನ್ನದಾನಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗುರುವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಗಗನಚುಕ್ಕಿ ಜಲಪಾತೋತ್ಸವಕ್ಕೆ ನಮ್ಮ ವಿರೋಧ ಇರಲಿಲ್ಲ. ಆದರೆ ನೀರಿದ್ದಾಗ ಮಾಡದೇ ಎರಡು ಟಿಎಂಸಿ ನೀರನ್ನು ಡ್ಯಾಂನಿಂದ ಹರಿಯಲು ಬಿಟ್ಟು ಉತ್ಸವ ಮಾಡಲಾಗಿದೆ. ಗಗನಚುಕ್ಕಿ ಮಾರ್ಗದಿಂದ ಹರಿಯುವ ನೀರು ನಮಗೆ ಸಿಗುವುದಿಲ್ಲ. ಬದಲಾಗಿ ತಮಿಳುನಾಡಿಗೆ ಹೋಗಿದೆ. ಮಳವಳ್ಳಿಯ ಕಡೆ ಭಾಗದ ಜನ ನೀರಿಲ್ಲದೇ ಕಂಗೆಟ್ಟಿರುವಾಗ ಬರದ ಮಧ್ಯೆಯೂ ಇಂತಹ ಉತ್ಸವ ಅವಶ್ಯಕತೆ ಇತ್ತೇ ಎಂದು ಪ್ರಶ್ನಿಸಿದರು.

ಮಳವಳ್ಳಿ ತಾಲೂಕಿನಲ್ಲಿ ಕುಡಿಯಲು ಮತ್ತು ಬೆಳೆ ಬೆಳೆಯಲು ನೀರಿಲ್ಲ. ಜೊತೆಗೆ ಕೆರೆ, ಕಟ್ಟೆಗಳೆಲ್ಲಾ ಬರಿದಾಗಿದೆ. ಇಂತಹ ಸಂದರ್ಭದಲ್ಲಿ ಯಾವ ಪುರುಷಾರ್ಥಕ್ಕೆ ಈ ಜಲಪಾತೋತ್ಸವ ಬೇಕಿತ್ತು. ನೀರಿದ್ದ ಸಂದರ್ಭದಲ್ಲಿ ಪಕ್ಕದ ಭರಚುಕ್ಕಿ ಉತ್ಸವ ಮಾಡಲಾಯಿತು. ಅಲ್ಲಿ ಉತ್ಸವ ನಡೆದಿದೆ ಎಂದ ಮಾತ್ರಕ್ಕೆ ಗಗನಚುಕ್ಕಿಯಲ್ಲೂ ಉತ್ಸವ ಮಾಡಬೇಕೆಂದೇನಿಲ್ಲ. ಜಲಪಾತೋತ್ಸವಕ್ಕೆ ಬಳಕೆಯಾದ ಹಣ ಇದ್ದಿದ್ದರೆ ಅದನ್ನು ಮಳವಳ್ಳಿಯ ಸಣ್ಣಪುಟ್ಟ ನಾಲೆಗಳು ಮತ್ತು ಕೆರೆಗಳ ಅಭಿವೃದ್ಧಿಗೆ ಬಳಸಿಕೊಳ್ಳಬಹುದಿತ್ತು. ಆದರೆ ಕ್ಷೇತ್ರದ ಶಾಸಕರು ಇಂತಹ ಅಭಿವೃದ್ಧಿ ಕೆಲಸಕ್ಕೆ ಹಣ ಮೀಸಲಿಡದೇ ಜನರು ಸಂಕಷ್ಟದಲ್ಲಿದ್ದಾಗ ಉತ್ಸವ ಮಾಡಿದ್ದಾರೆ ಎಂದು ಕಿಡಿಕಾರಿದರು.

ಕುಮಾರಸ್ವಾಮಿ ಅವರು ಮೊದಲ ಬಾರಿಗೆ ಮುಖ್ಯಮಂತ್ರಿಯಾಗಿದ್ದಾಗ ಹಾಗೂ ನಾನು ಶಾಸಕನಾಗಿದ್ದಾಗ ಗಗನಚುಕ್ಕಿ ಜಲಪಾತೋತ್ಸವವನ್ನು ಆಚರಣೆಗೆ ತರಲಾಯಿತು. ಜೊತೆಗೆ ಜಲಾಶಯಕ್ಕೆ ರೋಪ್‌ವೇ ಮಾಡಬೇಕೆಂಬ ಯೋಜನೆಯನ್ನು ನಾವೇ ಮಾಡಬೇಕೆಂದು ಸಿದ್ಧತೆ ಸಹ ಮಾಡಿಸಿದ್ದೆವು. ಆದರೆ ನಮ್ಮ ಸರ್ಕಾರ ಪತನವಾಯಿತು. ಸದ್ಯ ಸಿದ್ದರಾಮಯ್ಯ ಅವರು ಗಗನಚುಕ್ಕಿ ಅಭಿವೃದ್ಧಿಗೆ ನೂರು ಕೋಟಿ ಬಿಡುಗಡೆ ಮಾಡುವುದಾಗಿ ಹೇಳಿದ್ದಾರೆ. ಅದು ಅನುಷ್ಠಾನಕ್ಕೆ ಬಂದರೆ ನಾನು ಸ್ವಾಗತಿಸುವೆ ಎಂದರು.

ಬೆಳೆ ಪರಿಹಾರಕ್ಕೆ ಒತ್ತಾಯ: ಕಳೆದ ಮೂರ್‍ನಾಲ್ಕು ತಿಂಗಳಿನಿಂದ ಮಳವಳ್ಳಿಯ ಕಡೆ ಭಾಗಕ್ಕೆ ನೀರು ಒದಗಿಸುವಂತೆ ಮನವಿ ಮಾಡುತ್ತಾ, ಹೋರಾಟ ಮಾಡುತ್ತಾ ಬಂದರೂ ಸರ್ಕಾರವಾಗಲೀ, ಜಿಲ್ಲಾಡಳಿತವಾಗಲೀ ನಮ್ಮ ಮನವಿಗೆ ಸ್ಪಂದಿಸಿಲ್ಲ. ಜಲಪಾತೋತ್ಸವದ ಸಂದರ್ಭದಲ್ಲಿ ಸಿಎಂಗೆ ಈ ಬಗ್ಗೆ ಮನವಿ ಮಾಡಲು ಹೊರಟಾಗ ನಮ್ಮನ್ನು ಪೊಲೀಸ್ ವಶಕ್ಕೆ ಪಡೆಯಲಾಯಿತು. ಕೆಆರ್‌ಎಸ್ ಸಂಪೂರ್ಣ ಭರ್ತಿಯಾಗಿ ಮಂಡ್ಯ ಜಿಲ್ಲೆಯ ಹಲವು ಪ್ರದೇಶಕ್ಕೆ ಕಾವೇರಿ ಸಮೃದ್ಧಿಯಾಗಿ ಹರಿದರೂ ಮಳವಳ್ಳಿಗೆ ಮಾತ್ರ ನೀರು ಬರಲೇ ಇಲ್ಲ. ಈಗಾಗಲೇ ತಾಲೂಕಿನಲ್ಲಿ ನೂರಾರು ಎಕರೆ ಕೃಷಿ ಭೂಮಿ ನಾಶವಾಗಿದೆ ಎಂದು ಅಳಲು ತೋಡಿಕೊಂಡರು.

ಈ ನಿಟ್ಟಿನಲ್ಲಿ ಈಗ ನೀರು ಕೊಟ್ಟರೂ ಏನು ಪ್ರಯೋಜನವಿಲ್ಲ. ಕೈಗೆ ಬಂದ ಬೆಳೆ ಭಾಗಶ: ಪ್ರಮಾಣ ನಾಶವಾಗಿದ್ದು, ತಾಲೂಕಿನ ರೈತರಿಗೆ ಸರ್ಕಾರ ಬೆಳೆ ಪರಿಹಾರ ಒದಗಿಸಬೇಕು. ಕಾವೇರಿ ನೀರು ನಂಬಿ ಬೆಳೆ ಬೆಳೆದಿದ್ದ ರೈತರಿಗೆ ಎಕರೆಗೆ 30 ಸಾವಿರ ಹಾಗೂ ಮಳೆ ನೀರು ಆಶ್ರಯಿಸಿ ಬೆಳೆ ಬೆಳೆದ ರೈತರಿಗೆ ಎಕರೆಗೆ 25 ಸಾವಿರ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಸದ್ಯ ಗಂಗಾರತಿ ಮಾದರಿಯಲ್ಲಿ ಕಾವೇರಿ ಆರತಿ ಮಾಡಲು ಸಜ್ಜಾಗಿದ್ದಾರೆ. ಆದರೆ ಒಮ್ಮೆಯೂ ಕಡೆ ಭಾಗಕ್ಕೆ ನೀರು ಸಿಗಲಿಲ್ಲ ಎಂದು ಮಳವಳ್ಳಿ ತಾಲೂಕಿನ ಕೃಷಿ ಭೂಮಿಗಳಿಗೆ ಭೇಟಿ ನೀಡಿ, ರೈತರ ಸಮಸ್ಯೆ ಆಲಿಸಿಲ್ಲ. ಸಚಿವರನ್ನು ಕರೆದುಕೊಂಡು ಸಮಸ್ಯೆ ಬಗ್ಗೆ ಅವಲೋಕನ ಮಾಡಲು ಸಹ ಕ್ಷೇತ್ರದ ಶಾಸಕರು ಮುಂದಾಗಲಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಈ ಪರಿ ಬೆಳೆ ನಷ್ಟ, ಬರ ಇದ್ದರೂ ಕಾವೇರಿ ಆರತಿಯಂತಹ ಕಾರ್ಯಕ್ರಮ ಅವಶ್ಯಕತೆ ಇದೆಯೇ ಎಂದು ಪ್ರಶ್ನಿಸಿದರು.

ಮಳವಳ್ಳಿ ಭಾಗದ ಭಾಗಶ: ಕೆರೆಗಳು, ಕೃಷಿ ಭೂಮಿಗಳಿಗೆ ಈಗಾಗಲೇ ನಾನು ಭೇಟಿ ನೀಡಿ ಪರಿಶೀಲನೆ ನಡೆಸಿದ್ದೇನೆ. ತಾಲೂಕಿನ ರೈತರು ಮಳೆ ಹಾಗೂ ಕಾವೇರಿ ನೀರು ಸಿಗದೇ ಕಂಗಾಲಾಗಿದ್ದಾರೆ. ಕೈಗೆ ಬಂದ ಜೋಳ, ರಾಗಿ, ಕಬ್ಬು ಬೆಳೆ ನಾಶವಾಗಿದೆ. ಶೇ.35ರಷ್ಟು ರೈತರು ಮಾತ್ರ ಬೆಳೆಯನ್ನು ನೋಡಿದ್ದಾರೆ. ಇನ್ನುಳಿದ ಮಂದಿ ಬೆಳೆದ ಬೆಳೆಯನ್ನು ಕಳೆದುಕೊಂಡಿದ್ದಾರೆ. ಕೆಲ ರೈತರಂತೂ ಕೃಷಿ ಬೆಳೆಯನ್ನು ಬೆಳೆಯದೇ ರೇಷ್ಮೆ ಬೆಳೆಯತ್ತ ಮುಖ ಮಾಡಿದ್ದಾರೆ. ಈ ನಿಟ್ಟಿನಲ್ಲಿ ಅಗತ್ಯ ಬೆಳೆ ಪರಿಹಾರ ನೀಡಿ, ಮುಂದಿನ ದಿನಗಳಲ್ಲಿ ಮಳವಳ್ಳಿ ಕಡೆ ಭಾಗಕ್ಕೆ ಕಾವೇರಿ ನೀರು ಒದಗಿಸುವ ಕೆಲಸಕ್ಕೆ ಮುಂದಾಗಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜೆಡಿಎಸ್ ಯುವ ಘಟಕದ ಜಿಲ್ಲಾಧ್ಯಕ್ಷ ರವಿ ಕಂಸಾಗರ, ಜಿ.ಪಂ. ಮಾಜಿ ಸದಸ್ಯ ಹನುಮಂತು, ಪುರಸಭೆ ಮಾಜಿ ಉಪಾಧ್ಯಕ್ಷ ನಂದಕುಮಾರ್, ಜೆಡಿಎಸ್ ಎಸ್ಸಿ ಘಟಕದ ಜಿಲ್ಲಾಧ್ಯಕ್ಷ ಸಾತನೂರು ಜಯರಾಂ, ಮುಖಂಡ ಮೆಹಬೂಬ್ ಪಾಷಾ ಉಪಸ್ಥಿತರಿದ್ದರು.

ಸಾಲಕ್ಕೆ ಆತ್ಮಹತ್ಯೆಯೇ ಪರಿಹಾರವಲ್ಲ, ಧೃತಿಗೆಡಬೇಡಿ

ಚಿನಕುರಳಿ: ಸಾಲದ ಸುಳಿಯಲ್ಲಿ ಸಿಲುಕಿರುವ ರೈತರು ಸಾಲ ತೀರಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳುವುದೇ ಪರಿಹಾರವಲ್ಲ, ರೈತರು ಧೃತಿಗೆಡದೆ ಸಾಲ ತೀರಿಸುವ ಪರಿಹಾರಗಳನ್ನು ಕಂಡುಕೊಳ್ಳಬೇಕು ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ರೈತರಲ್ಲಿ ಮನವಿ ಮಾಡಿದರು.



ವಾರ್ಷಿಕ ಸಭೆಯಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿದರು.

ಚಿನಕುರಳಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕೃಷಿ ಬೇಸಾಯಕ್ಕೆ ಮಾಡಿದ್ದ ಸಾಲ ತೀರಿಸಲಾಗದೆ ಅಂಕೇಗೌಡನ ಕೊಪ್ಪಲು ಗ್ರಾಮದಲ್ಲಿ ರೈತರೋರ್ವ ಆತ್ಮಹತ್ಯೆ ಮಾಡಿಕೊಂಡಿರುವ ವಿಷಯ ಕೇಳಿ ಮನಸ್ಸಿನ ತುಂಬಾ ನೋವುಂಟಾಯಿತು. ಮಾಡಿರುವ ಸಾಲ ತೀರಿಸಲಾಗದೆ ರೈತರು ಆತ್ಮಹತ್ಯೆ ಮಾಡಿಕೊಂಡರೆ ನಿಮ್ಮನ್ನೇ ನಂಬಿಕೊಂಡಿರುವ ಹೆಂಡತಿ, ಮಕ್ಕಳು, ಕುಟುಂಬಸ್ಥರ ಗತಿ ಏನು? ರೈತರು ದೇಶದ ಬೆನ್ನೆಲುಬು, ದೇಶಕ್ಕೆ ಅನ್ನ ನೀಡುವ ರೈತರು ಯಾವುದೇ ಕಾರಣಕ್ಕೂ ಆತ್ಮಹತ್ಯೆ ಮಾಡಿಕೊಳ್ಳಬಾರದು, ಎದೆಗುಂದದೆ ಮುನ್ನಡೆಯಬೇಕು, ಸರ್ಕಾರದ ಯಾವುದಾದರು ಸೌಲಭ್ಯಗಳನ್ನು ಬಳಸಿಕೊಂಡು ಸಾಲ ತೀರಿಸುವ ಪರಿಹಾರಗಳನ್ನು ಕಂಡುಕೊಳ್ಳಬೇಕು ಎಂದರು.

ಸಂಘಕ್ಕೆ 9.03 ಲಕ್ಷ ಲಾಭ: ಚಿನಕುರಳಿ ಪ್ರಾಥಮಿಕ ಕೃಷಿಪತ್ತಿನ ಸಹಕಾರ ಸಂಘವು ಯಾವುದೇ ನ್ಯೂನತೆ ಇಲ್ಲದೆ ಉತ್ತಮವಾದ ರೀತಿಯಲ್ಲಿ ಆಡಳಿತ ನಡೆಸುವ ಮೂಲಕ ಈ ಸಾಲಿನಲ್ಲಿ ಸಂಘಕ್ಕೆ 9.03 ನಿವ್ವಳ ಲಾಭ ತಂದಿದ್ದಾರೆ. ಸಭೆಯಲ್ಲಿ ವಿಎಸ್‌ಎಸ್‌ಎನ್‌ಬಿ ಅಧ್ಯಕ್ಷ ಸಿ.ಎಸ್.ಮಂಜುನಾಥ್, ಉಪಾಧ್ಯಕ್ಷ ಮಹದೇವಪ್ಪ, ತಾಪಂ ಮಾಜಿ ಸದಸ್ಯರಾದ ಸಿ.ಎಸ್.ಗೋಪಾಲಗೌಡ, ಗಂಗಾಧರ, ಮುಖಂಡ ಅಂಕೇಗೌಡ, ಡೇರಿ ಅಧ್ಯಕ್ಷ ಸಿ.ಶಿವಕುಮಾರ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಸಿ.ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ಕಾಳೇಗೌಡ, ಸದಸ್ಯ ಸಿ.ಎ. ಲೋಕೇಶ್, ವಿಎಸ್‌ಎಸ್‌ಎನ್‌ಬಿ ನಿರ್ದೇಶಕರಾದ ರಾಮಕೃಷ್ಣೇಗೌಡ, ಸಿ.ಬಿ.ವಾಸುದೇವಯ್ಯ, ಮೊಗ್ಗಣ್ಣೇಗೌಡ ಇತರರು ಇದ್ದರು.

ಪುಟ್ಟರಾಜು ಸೇರಿ ನಾಲ್ವರು ಜಿಲ್ಲಾ ದಿಶಾ ಕಮಿಟಿ ಸದಸ್ಯರಾಗಿ ನೇಮಕ

ಮಂಡ್ಯ,ಸೆ.26– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದ ಜಿಲ್ಲಾ ದಿಶಾ ಕಮಿಟಿ ಸದಸ್ಯರನ್ನಾಗಿ ಮಂಡ್ಯ ಜಿಲ್ಲೆಯ ನಾಲ್ವರನ್ನು ನೇಮಿಸಿ ಕೇಂದ್ರ ಗ್ರಾಮೀಣಾಭಿವೃದ್ಧಿ, ಕೃಷಿ ಹಾಗೂ ರೈತ ಕಲ್ಯಾಣ ಸಚಿವ ಶಿವರಾಜ್‌ಸಿಂಗ್ ಚೌಹಾಣ್ ಆದೇಶ ಹೊರಡಿಸಿದ್ದಾರೆ.

ಕುಮಾರಸ್ವಾಮಿ ಅವರ ಮನವಿಯ ಮೇರೆಗೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕ ಡಾ.ಕೆ.ಅನ್ನದಾನಿ, ಮಂಡ್ಯ ಮುಡಾ ಮಾಜಿ ಅಧ್ಯಕ್ಷ ವಿದ್ಯಾನಾಗೇಂದ್ರ ಹಾಗೂ ಕೆ.ಆರ್.ಪೇಟೆಯ ನರಸನಾಯಕ ಅವರನ್ನು ದಿಶಾ ಕಮಿಟಿ ಸದಸ್ಯರನ್ನಾಗಿ ನೇಮಿಸಲಾಗಿದೆ.

ಈ ನಾಲ್ವರು ಮಂದಿಯೂ ಕುಮಾರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆಯುವ ದಿಶಾ ಸಭೆಯಲ್ಲಿ ಭಾಗವಹಿಸಿ ತಮ್ಮ ಸಲಹೆಗಳನ್ನು ನೀಡಬಹುದಾದ ಅಧಿಕಾರವನ್ನು ಹೊಂದಿರುತ್ತಾರೆ.

ಶೀಘ್ರದಲ್ಲೇ ಪೌರಕಾರ್ಮಿಕರಿಗೆ ನೇರ ವೇತನ ಪಾವತಿ

ಮಂಡ್ಯ,ಸೆ.26– ಪೌರಕಾರ್ಮಿಕರ ಹಿತ ಕಾಪಾಡಲು ಸರ್ಕಾರ ಸದಾ ಸಿದ್ಧವಿದ್ದು, ಶೀಘ್ರದಲ್ಲೇ ಪೌರಕಾರ್ಮಿಕರಿಗೆ ನೇರ ವೇತನ ಪಾವತಿಗೆ ಕ್ರಮವಹಿಸಲಾಗುವುದು ಎಂದು ಮಂಡ್ಯ ಶಾಸಕ ಪಿ.ರವಿಕುಮಾರ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ನಡೆದ ಪೌರಕಾರ್ಮಿಕರ ದಿನಾಚರಣೆ ಹಾಗೂ ಶ್ರಮಜೀವಿ ಪೌರಕಾರ್ಮಿಕರಿಗೆ ಸನ್ಮಾನ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು.

ಹಲವು ದಿನಗಳ ಬೇಡಿಕೆಯಾದ ಪೌರಕಾರ್ಮಿಕರ ನೇರ ವೇತನ ಪಾವತಿ ಸಂಬಂಧ ಕಡತ ಈಗಾಗಲೇ ಸರ್ಕಾರದ ಮುಂದಿದ್ದು, ಶೀಘ್ರದಲ್ಲೇ ಈ ಸಮಸ್ಯೆಗೆ ಬಗೆಹರಿಯಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪೌರಕಾರ್ಮಿಕರಿಲ್ಲದೇ ಹೋದರೆ ನಗರವನ್ನು ಸ್ವಚ್ಛತೆಯಿಂದಿಡಲು ಸಾಧ್ಯವಿಲ್ಲ. ಕೊರೊನಾ ಸಂದರ್ಭದಲ್ಲಿ ಪೌರಕಾರ್ಮಿಕರು ಮಾಡಿದ ಸೇವೆಯನ್ನು ಇಡೀ ದೇಶ ನೋಡಿದೆ. ಪೌರಕಾರ್ಮಿಕರ ಸೇವೆ ಶ್ಲಾಘನೀಯವಾದುದು ಎಂದು ಪ್ರಶಂಸೆ ವ್ಯಕ್ತಪಡಿಸಿದರು. ಸರ್ಕಾರಗಳು ನಿಮ್ಮ ಸೇವೆ ಗುರುತಿಸಿ ಸಾಕಷ್ಟು ಸೌಲಭ್ಯಗಳನ್ನು ಕಲ್ಪಿಸುತ್ತಿದೆ. ಸರ್ಕಾರದಿಂದ ಸಿಗುವ ಎಲ್ಲಾ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕಿವಿಮಾತು ಹೇಳಿದರು.



ಪೌರಕಾರ್ಮಿಕರ ದಿನಾಚರಣೆಯನ್ನು ಉದ್ಘಾಟಿಸುತ್ತಿರುವ ಶಾಸಕ ರವಿಕುಮಾರ್

5000 ಮನೆಗಳ ನಿರ್ಮಾಣಕ್ಕೆ ಗುರಿ: ಸೂರು ಇಲ್ಲದೆ ಇರುವವರಿಗೆ ಮಂಡ್ಯದಲ್ಲಿ 5000 ಮನೆಗಳ ನಿರ್ಮಾಣ ಮಾಡಲು ಗುರಿ ಹೊಂದಲಾಗಿದ್ದು, ಈಗಾಗಲೇ 600 ಮನೆಗಳನ್ನು ನಿರ್ಮಿಸಲಾಗಿದೆ. ಅರ್ಹ ಫಲಾನುಭವಿಗಳನ್ನು ಗುರುತಿಸಿ ಶೀಘ್ರದಲ್ಲೇ ಹಂಚಿಕೆ ಮಾಡಲಾಗುವುದು. ಮಂಡ್ಯ ವ್ಯಾಪ್ತಿಯಲ್ಲಿ ಸರ್ಕಾರಿ ಜಾಗ ಅಥವಾ ಖಾಸಗಿ ಜಾಗ ಖರೀದಿಸಿ ಉಳಿದ 4400 ಮನೆಗಳನ್ನು ಹಂತ ಹಂತವಾಗಿ ನಿರ್ಮಿಸಿ ಹಂಚಿಕೆ ಮಾಡಲು ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಹಕ್ಕುಪತ್ರ ವಿತರಣೆಗೆ ಕ್ರಮ ವಹಿಸಲಾಗುವುದು. ಈಗಾಗಲೇ ಹಾಲಹಳ್ಳಿ ಸ್ಲಂ ನಿವಾಸಿಗಳಿಗೆ 700 ಮಂದಿಗೆ ಹಕ್ಕುಪತ್ರ ವಿತರಣೆ ಮಾಡಲಾಗಿದೆ. 15 ದಿನದೊಳಗೆ ನಗರದ ಆರ್.ಟಿ.ಓ ಸ್ಲಂ ನಿವಾಸಿಗಳಿಗೆ ಹಕ್ಕು ಪತ್ರ ವಿತರಿಸಲಾಗುವುದು ಎಂದರು.

ಮೂರನೇ ಪುಟದಿಂದ

ದಸರಾಗೆ ಅಧಿಕೃತ ಆಹ್ವಾನ

ನಂತರ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಸೇರಿದಂತೆ ಇನ್ನಿತರೆ ನ್ಯಾಯಮೂರ್ತಿಗಳು, ರಾಜ್ಯ ಮುಖ್ಯ ಕಾರ್ಯದರ್ಶಿ, ವಿವಿಧ ಇಲಾಖೆಗಳ ಮುಖ್ಯಸ್ಥರು ಹಾಗೂ ಇನ್ನಿತರ ಗಣ್ಯ ಜನಪ್ರತಿನಿಧಿಗಳನ್ನೂ ಇಂದು ದಸರೆಗೆ ಆಹ್ವಾನಿಸಲಾಯಿತು. ಹೆಚ್ಚುವರಿ ಜಿಲ್ಲಾಧಿಕಾರಿ ಪಿ.ಶಿವರಾಜು, ಮೈಸೂರು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ವಿಷ್ಣುವರ್ಧನ್, ಜಿಪಂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಚಾಮುಂಡಿಬೆಟ್ಟ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ.ಜೆ.ರೂಪಾ ಇತರರು ಉಪಸ್ಥಿತರಿದ್ದರು.

ತನಿಖೆಗೆ ಮುಕ್ತ ಅವಕಾಶವಿಲ್ಲ

ದುರುಪಯೋಗ ಮಾಡಿಕೊಳ್ಳುತ್ತದೆ ಎಂಬ ಹಿನ್ನೆಲೆಯಲ್ಲಿ ತನಿಖೆಗೆ ನೀಡಿದ್ದ ಮುಕ್ತ ಅವಕಾಶವನ್ನು ಸಂಪುಟ ಹಿಂಪಡೆದಿದೆ. ಕಳೆದ 2005ರಲ್ಲಿ ಸಿಬಿಐ ತನಿಖೆಗೆ ಮುಕ್ತ ಅವಕಾಶ ನೀಡಿ ಅಂದಿನ ಸರ್ಕಾರ ತೀರ್ಮಾನಕೈಗೊಂಡಿತ್ತು.

ಇದಾದ ನಂತರ ಸುಮಾರು ಕೆಜೆಜಾರ್ಜ್ ಮತ್ತು ಡಿ.ಕೆ.ಶಿವಕುಮಾರ್ ಪ್ರಕರಣಗಳಿಗೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸುತ್ತಿತ್ತು. ಇತ್ತೀಚೆಗೆ ಮಹರ್ಷಿ ವಾಲ್ಮೀಕಿ ನಿಗಮದಲ್ಲಿ ನಡೆದಿರುವ ಹಗರಣಕ್ಕೆ ಸಂಬಂಧಿಸಿದಂತೆಯೂ ರಾಷ್ಟ್ರೀಕೃತ ಬ್ಯಾಂಕ್ ದೂರನ್ನು ದಾಖಲಿಸಿ ತನಿಖೆ ನಡೆಯುತ್ತಿದೆ. ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ದೂರುದಾರರು ಸಿಬಿಐ ತನಿಖೆಗೆ ನೀಡುವಂತೆ ಕಾನೂನಿನ ಮೊರೆ ಹೋಗುವುದಾಗಿ ತಿಳಿಸಿದ್ದಾರೆ. ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಎಚ್.ಕೆ. ಪಾಟೀಲ್, ಕೇಂದ್ರ ಸರ್ಕಾರ ತನ್ನ ಅಧೀನದ ತನಿಖಾ ಸಂಸ್ಥೆಗಳನ್ನು ನ್ಯಾಯಯುತವಾಗಿ ಬಳಸದ ಕಾರಣ ಸಾರಾಸಗಟಾಗಿ ಇನ್ನು ಮುಂದೆ ಸಿಬಿಐ ಸ್ವತಂತ್ರವಾಗಿ ತನಿಖೆ ನಡೆಸಲು ಅವಕಾಶವಿಲ್ಲ. ಒಂದು ವೇಳೆ ತನಿಖೆ ಅವಶ್ಯವಿದ್ದರೆ ಸರ್ಕಾರ ಅದನ್ನು ಪರಿಶೀಲಿಸಿ ತೀರ್ಮಾನ ಕೈಗೊಳ್ಳಲಿದೆ. ಇನ್ನು ರಾಜಭವನಕ್ಕೆ ಸರ್ಕಾರ ಕಳುಹಿಸಿದ ಶಿಫಾರಸುಗಳನ್ನು ಒಂಭತ್ತು ತಿಂಗಳು ಕಳೆದರೂ ಯಾವುದೇ ನಿರ್ಧಾರ ಕೈಗೊಳ್ಳದೆ, ತಮ್ಮಲ್ಲಿಯೇ ಇಟ್ಟುಕೊಂಡು ಮುಖ್ಯಮಂತ್ರಿ ಮೇಲೆ ಗೂಬೆ ಕೂರಿಸುತ್ತಿದ್ದಾರೆ.

ಸಾರ್ವಜನಿಕರಿಗೆ ವಸ್ತುಸ್ಥಿತಿ ತಿಳಿಸುವ ಉದ್ದೇಶದಿಂದ ಈ ವಿಚಾರಗಳನ್ನು ಮಾಧ್ಯಮಕ್ಕೆ ಹೇಳುತ್ತಿದ್ದೇವೆ. ಇನ್ನು ಮುಂದೆ ರಾಜ್ಯಪಾಲರು ಕೇಳುವ ಸಮಜಾಯಿಷಿಗಳಿಗೆ ಸಂಪುಟದಲ್ಲಿ ಚರ್ಚಿಸಿ ಉತ್ತರ ನೀಡಲಾಗುವುದು ಎಂದರು. ಇದಾದ ಬೆನ್ನಲ್ಲೇ ರಾಜ್ಯ ಸಚಿವ ಸಂಪುಟ ಈ ಎರಡು ಮಹತ್ವದ ತೀರ್ಮಾನಗಳನ್ನು ಕೈಗೊಂಡಿದೆ.

ಪ್ರಕರಣಗಳ ಬಗ್ಗೆ ವರದಿ ನೀಡಿ

ಪ್ರಾಧಿಕಾರದ ಆಸ್ತಿ ಎಂದು ಫಲಕ ಅಳವಡಿಸಿ, ಬೇಲಿ ಹಾಕಬೇಕೆಂದು ಸೂಚಿಸಿದರು.

ಫಲಾನುಭವಿಗಳಿಗೆ ನಿವೇಶನಕ್ಕೆ ಕ್ರಮ: ಈಗಾಗಲೇ ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿ, ಕಾಯುತ್ತಿರುವ ಫಲಾನುಭವಿಗಳಿಗೆ ಜ್ಯೇಷ್ಠತೆ ಪ್ರಕಾರ ನಿವೇಶನ ಹಂಚುವುದು ಪ್ರಾಧಿಕಾರದ ಪ್ರಮುಖ ಉದ್ದೇಶವಾಗಿರುವುದರಿಂದ ರೈತರ ಸಹಭಾಗಿತ್ವದಲ್ಲಿ ಬಡಾವಣೆ ಬಲ್ಲಹಳ್ಳಿ ಹಾಗೂ ಬೊಮ್ಮೇನಹಳ್ಳಿ ವಸತಿ ಬಡಾವಣೆ ಯೋಜನೆಯನ್ನು ತ್ವರಿತವಾಗಿ ಕೈಗೆತ್ತಿಕೊಳ್ಳುವ ಬಗ್ಗೆ ಮಾಹಿತಿ ಕೇಳುವುದು. ಜೊತೆಗೆ ಕೈಗೆಟುಕುವ ದರದಲ್ಲಿ ಗುಂಪು ವಸತಿ ಮನೆ ಯೋಜನೆಗೆ ಸರ್ಕಾರದಿಂದ ಅನುಮೋದನೆ ಪಡೆಯುವ ಬಗ್ಗೆ ಕ್ರಮ ವಹಿಸುವಂತೆಯೂ ಮರೀಗೌಡರು ಅಧಿಕಾರಿಗಳಿಗೆ ಇದೇ ವೇಳೆ ತಾಕೀತು ಮಾಡಿದರು.

ದಸರಾ ನಂತರ ಮುಡಾ ಸಭೆ: 50:50ರ ಅನುಪಾತದಡಿ ಅಕ್ರಮವಾಗಿ ನಿವೇಶನ ಹಂಚಿಕೆ ಹಗರಣದ ತನಿಖೆ ಪ್ರಗತಿಯಲ್ಲಿರುವುದರಿಂದ ಕಾರ್ಯ ಸ್ಥಗಿತಗೊಂಡಿದ್ದ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ ಸಾಮಾನ್ಯ ಸಭೆಗಳನ್ನು ದಸರಾ ಮಹೋತ್ಸವ ಮುಗಿದ ಬಳಿಕ ನಡೆಸಲು ತೀರ್ಮಾನಿಸಲಾಗಿದೆ ಎಂದು ಮರೀಗೌಡ ತಿಳಿಸಿದ್ದಾರೆ. ಪ್ರಕರಣದ ಹಿನ್ನೆಲೆಯಲ್ಲಿ ಶತಮಾನದ ಇತಿಹಾಸವಿರುವ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಇಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳು, ನೌಕರ ವರ್ಗದ ಗೌರವಕ್ಕೆ ಧಕ್ಕೆ ಬಂದಿದಾಗಿದೆ. ಪ್ರತಿನಿತ್ಯ ಮಾಧ್ಯಮಗಳಲ್ಲಿ ವ್ಯತಿರಿಕ್ತ ಮಾಹಿತಿಗಳು ಬಿತ್ತರವಾಗುತ್ತಿರುವುದರಿಂದ ದಸರಾ ಮುಗಿದ ತಕ್ಷಣ ಕಾಲಕಾಲಕ್ಕೆ ಮುಡಾ ಸಾಮಾನ್ಯ ಸಭೆಯನ್ನು ನಡೆಸಲಾಗುವುದು. ಅದಕ್ಕೆ ಅಧಿಕಾರಿಗಳು ಸರ್ವ ಸಿದ್ಧತೆ ಮಾಡಿಕೊಳ್ಳಬೇಕೆಂದು ತಾಕೀತು ಮಾಡಿದರು.

ಇಂದಿನಿಂದ ಜನರ ಕೆಲಸ: ಹಲವು ಸೇವೆಗಳಿಗಾಗಿ ಪ್ರತಿನಿತ್ಯ ಬೆಳಗ್ಗೆಯಿಂದ ಸಂಜೆವರೆಗೆ ಕಚೇರಿಗೆ ನಾನಾ ಕೆಲಸಕ್ಕಾಗಿ ಬಂದಂತಹ ಜನರು ಕಾಯುತ್ತಿರುವುದನ್ನು ಗಮನಿಸಿದ್ದೇನೆ. ಸಾರ್ವಜನಿಕರ ತೊಂದರೆ ಯಾಗುತ್ತಿರುವುದನ್ನು ಪರಿಗಣಿಸಿ, ಇನ್ನು ಮುಂದೆ ಮಧ್ಯಾಹ್ನ 3ರಿಂದ ಸಂಜೆ 5.30ವರೆಗೆ ಸಾರ್ವಜನಿಕರಿಗೆ ಅಧಿಕಾರಿಗಳು ಅವರ ಕೆಲಸ ಕಾರ್ಯಗಳಿಗೆ ಲಭ್ಯವಾಗುವಂತಾಗಬೇಕು. ಅವರ ಅರ್ಜಿಗಳನ್ನು ಪರಿಶೀಲಿಸಿ, ಅಗತ್ಯ ಸೇವೆ ಒದಗಿಸಲು ಸಿದ್ಧರಾಗಿ ಎಂದು ಸೂಚನೆ ನೀಡಿದ ಅಧ್ಯಕ್ಷರು, ಮಾಹಿತಿ ಕೋರಿ ಸಲ್ಲಿಸುತ್ತಿರುವ ಅರ್ಜಿಗಳನ್ನು ನಿಗದಿತ ಸಮಯದೊಳಗೆ ವಿಲೇವಾರಿ ಮಾಡಬೇಕು ಎಂದು ತಿಳಿಸಿದರು.



(ಸಂಗ್ರಹ ಚಿತ್ರ)

ದಸರಾ ವೇಳೆಗೆ ಮೈಸೂರು ರಸ್ತೆ ವಿಭಜಕಗಳಲ್ಲಿ ನಳನಳಿಸಲಿವೆ ಅಲಂಕಾರಿಕ ಸಸ್ಯಗಳು

● ಮೈಸೂರು ಮಹಾನಗರ ಪಾಲಿಕೆಯಿಂದ ನಾಲ್ಕೂವರೆ ಕೋಟಿ ರೂ. ವೆಚ್ಚದಲ್ಲಿ ಯೋಜನೆ ಅನುಷ್ಠಾನ ● ವಿವಿಧ ರಸ್ತೆಗಳ ವಿಭಜಕಗಳಲ್ಲಿ ಒಟ್ಟು 50 ಕಿ.ಮೀ. ವ್ಯಾಪ್ತಿಯಲ್ಲಿ ಅಲಂಕಾರಿಕ ಗಿಡಗಳನ್ನು ನೆಟ್ಟು ಪೋಷಿಸಲು ತಯಾರಿ ● ಬಹುತೇಕ ಸಸ್ಯಗಳಲ್ಲಿ ಅರಳಲಿದೆ ಪುಷ್ಪ ಲೋಕ

● ಎಂ.ಬಿ. ಪವನ್‌ಮೂರ್ತಿ

ಮೈಸೂರು, ಸೆ.26– ದಸರಾ ಮಹೋತ್ಸವಕ್ಕಾಗಿ ಮೈಸೂರು ನಗರ ಶೃಂಗಾರಗೊಳ್ಳುತ್ತಿವೆ. ರಸ್ತೆಗಳು ವಿದ್ಯುತ್ ದೀಪಾಲಂಕಾರದಿಂದ ಕಂಗೊಳಿಸಲಾರಂಭಿಸಿವೆ. ಅಂತೆಯೇ ಈ ಬಾರಿ ದಸರಾ ಮಹೋತ್ಸವದಲ್ಲಿ ಮೈಸೂರು ನಗರದ ರಸ್ತೆಗಳ ವಿಭಜಕಗಳಲ್ಲಿ ಹೊಸದಾಗಿ ಅಲಂಕಾರಿಕ ಗಿಡಗಳು ನಳನಳಿಸಲಿವೆ. ಜೊತೆಗೆ ಈ ಪೈಕಿ ಹಲವು ಸಸ್ಯಗಳು ಪುಷ್ಪ ಲೋಕವನ್ನೂ ಅನಾವರಣ ಮಾಡಲಿವೆ.



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ಗಿಡ ನೆಡಲು ಸಿದ್ಧತೆ ಮಾಡುತ್ತಿರುವುದು.

ಸುಮಾರು 10 ವರ್ಷಗಳ ಹಿಂದೆ ನಗರದ ರಸ್ತೆ ವಿಭಜಕಗಳಲ್ಲಿ ಸಸ್ಯಗಳನ್ನು ನೆಟ್ಟು ಹಸಿರೀಕರಣ ಮಾಡಲಾಗಿತ್ತು. ಇತ್ತೀಚೆಗೆ ಸುದೀರ್ಘ ಅವಧಿಯಾಗಿರುವ ಹಿನ್ನೆಲೆಯಲ್ಲಿ ಅದರಿಂದ ಅನುಕೂಲಕ್ಕಿಂತಲೂ ಅನಾನುಕೂಲವೇ ಹೆಚ್ಚಿತ್ತು. ಹಾಗಾಗಿ ಹೊಸದಾಗಿ ಯೋಜನೆ ರೂಪಿಸಿ, ನಗರ ರಸ್ತೆ ವಿಭಜಕಗಳಲ್ಲಿ ಅಲಂಕಾರಿಕ ಸಸ್ಯಗಳನ್ನು ನೆಡಲಾಗುತ್ತಿದೆ. ಆ ಮೂಲಕ ನಗರದ ಸೌಂದರ್ಯೀಕರಣದ ಜೊತೆಗೆ ಹಸಿರೀಕರಣಕ್ಕೂ ಒತ್ತು ನೀಡಲಾಗುತ್ತಿದೆ. ಹೂ ಬಿಡುವ ಗಿಡಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೆಡುತ್ತಿದ್ದು, ಅದಲ್ಲೂ ಜಾನುವಾರುಗಳು ತಿನ್ನದ ಸಸ್ಯಗಳನ್ನು ಆಯ್ಕೆ ಮಾಡಿಕೊಂಡು ನೆಡಲಾಗುತ್ತಿದೆ.

-ಪಿ.ಕೆ.ಮೋಹನ್‌ಕುಮಾರ್, ಎಇಇ, ತೋಟಗಾರಿಕೆ ವಿಭಾಗ, ಮೈಸೂರು ಮಹಾನಗರ ಪಾಲಿಕೆ.

ವಾಹನಗಳ ಸುಗಮ ಮತ್ತು ಸುರಕ್ಷಿತ ಸಂಚಾರದಲ್ಲೂ ರಸ್ತೆ ವಿಭಜಕದಲ್ಲಿ ನೆಡುವ ಗಿಡಗಳು ಮಹತ್ತ ಪಾತ್ರ ವಹಿಸುತ್ತವೆ. ಎದುರು ದಿಕ್ಕಿನಿಂದ ಎದುರು ಬದುರು ಬರುವ ವಾಹನಗಳ ಹೆಡ್‌ಲೈಟ್‌ನಿಂದ ಸೂಸುವ ಪ್ರಕಾಶಮಾನ ಬೆಳಕನ್ನು ತಡೆದು ಸುಗಮ–ಸುರಕ್ಷಿತ ಸಂಚಾರಕ್ಕೆ ರಸ್ತೆ ವಿಭಜಕದ ಗಿಡಗಳು ಬಹುಮುಖ್ಯವಾಗುತ್ತವೆ. ಎದುರು ಬದುರು ಬರುವ ವಾಹನ ಸವಾರರು ಯಾವುದೇ ಅಡಚಣೆಯಿಲ್ಲದೆ, ಪರಸ್ಪರರೂ ಸರಾಗವಾಗಿ ಸಾಗಲು ಈ ವ್ಯವಸ್ಥೆ ಪೂರಕವಾಗಲಿದೆ.

ಮೈಸೂರು ನಗರದ ವಿವಿಧ ರಸ್ತೆಗಳ ವಿಭಜಕಗಳಲ್ಲಿ ಒಟ್ಟು 50 ಕಿ.ಮೀ. ವ್ಯಾಪ್ತಿಯಲ್ಲಿ ಅಲಂಕಾರಿಕ ಗಿಡಗಳನ್ನು ನೆಡಲು ಮೈಸೂರು ಮಹಾನಗರ ಪಾಲಿಕೆ ಯೋಜನೆ ರೂಪಿಸಿ, ಈಗಾಗಲೇ ಪ್ರಕ್ರಿಯೆ ಆರಂಭಿಸಿದೆ. ವೈವಿಧ್ಯಮಯದಿಂದ ಕೂಡಿದ ಸುಮಾರು 2 ಲಕ್ಷ ಅಲಂಕಾರಿಕ ಸಸ್ಯಗಳನ್ನು ನೆಡಲು ಈಗಾಗಲೇ ರಸ್ತೆ ವಿಭಜಕಗಳಲ್ಲಿ ಈ ಹಿಂದಿನ ಗಿಡ–ಗಂಟಿ ಮತ್ತು ಕಳೆಯನ್ನು ತೆಗೆಯುವ ಕಾರ್ಯ ಭರದಿಂದ ಸಾಗಿದೆ.

15ನೇ ಹಣಕಾಸು ಯೋಜನೆಯಡಿ 3 ಕೋಟಿ ರೂ. ಅನುದಾನ ಮತ್ತು ಸಾಮಾನ್ಯ ಅನುದಾನದಡಿ 1.50 ಕೋಟಿ ರೂ. ಅನುದಾನ ಒಳಗೊಂಡಂತೆ ಒಟ್ಟು ನಾಲ್ಕೂವರೆ ಕೋಟಿ ರೂ. ವೆಚ್ಚದಲ್ಲಿ ಮಹಾನಗರ ಪಾಲಿಕೆ ಈ ಯೋಜನೆ ಅನುಷ್ಠಾನ ಮಾಡುತ್ತಿದೆ. ಒಟ್ಟು 15 ಪ್ಯಾಕೇಜ್ ವಾರು ಟೆಂಡರ್ ನೀಡಲಾಗಿದೆ. ಟೆಂಡರ್‌ದಾರರು ಗಿಡ ನೆಟ್ಟು 2 ವರ್ಷಗಳ ಕಾಲ ನಿರ್ವಹಣೆ ಜವಾಬ್ದಾರಿ ಸಹ ನಿಭಾಯಿಸಲಿದ್ದಾರೆ.

ಅಪಘಾತ ತಡೆಯೊಂದಿಗೆ ಸುಗಮ ಸಂಚಾರಕ್ಕೂ ಪೂರಕವಾಗುವ ಈ ವ್ಯವಸ್ಥೆಯಿಂದ ಇನ್ನೂ ಹತ್ತು ಹಲವು ಪ್ರಯೋಜನಗಳನ್ನು ಒಳಗೊಂಡಿದೆ. ನಗರದ ಸೌಂದರ್ಯೀಕರಣ ವೃದ್ಧಿಗೂ ಇದು ಸಹಕಾರಿಯಾಗಲಿದೆ. ವಾಯು ಮಾಲಿನ್ಯ, ಶಬ್ದ ಮಾಲಿನ್ಯ ನಿಯಂತ್ರಣದ ಜೊತೆಗೆ ಭಾರೀ ಗಾಳಿ ಉಂಟಾದಾಗ ಅದನ್ನು ತಡೆದು ವಾಹನ ಸಂಚಾರ ಸುಗಮವಾಗಿ ಸಾಗಲು ಅನುವು ಕೂಡ ಇದರಿಂದ ಸಾಧ್ಯವಾಗಲಿದೆ.

ತಲೆ ಎತ್ತಲಿರುವ ಅಲಂಕಾರಿಕ ಸಸ್ಯಗಳು: ಸುಮಾರು 7 ವಿಧದ ಅಲಂಕಾರಿಕ ಸಸ್ಯಗಳು ನಗರದ ರಸ್ತೆ ವಿಭಜಕಗಳಲ್ಲಿ ತಲೆ ಎತ್ತಲಿವೆ. ಬೋಗನ್ ವಿಲ್ಲಾ, ಥುಜಾ, ರಿಯಾ ಪಾಡಿಕ, ಕಣಗಲೆ, ಎಮಿಲಿಯಾ, ನಂದಿಬಟ್ಟಲು, ಜಟ್ರೋಫಾ ಮತ್ತು ಫಾಕ್ಸ್‌ಟೈಲ್ ಪಾಮ್ ಸಸ್ಯಗಳನ್ನು ನೆಡಲಾಗುತ್ತಿದೆ.

ಯಾವ್ಯಾವ ವಿಭಜಕದಲ್ಲಿ ಗಿಡಗಳು: ಡಾ.ರಾಜ್‌ಕುಮಾರ್ ರಸ್ತೆಯಲ್ಲಿ ಯರಗನಹಳ್ಳಿ ವೃತ್ತದಿಂದ ಮಹದೇವಪುರ ವೃತ್ತದವರೆಗೆ (3 ಕಿ.ಮೀ.), ವಿಹಾರ ಮಾರ್ಗದಲ್ಲಿ ಕುರುಬಾರಹಳ್ಳಿ ವೃತ್ತದಿಂದ ಹಾಲಿನ ಡೈರಿ ವೃತ್ತದವರೆಗೆ (0.75 ಕಿ.ಮೀ.), ಬನ್ನೂರು-ಮಳವಳ್ಳಿ ರಸ್ತೆಯಲ್ಲಿ ಹಾಲಿನ ಡೈರಿ ವೃತ್ತದಿಂದ ಹೆಚ್.ಡಿ.ದೇವೇಗೌಡ ವೃತ್ತದವರೆಗೆ (3.50 ಕಿ.ಮೀ.), ಗಾಯತ್ರಿಪುರಂ ರಸ್ತೆಯಲ್ಲಿ ಎಸ್‌ಪಿ ಕಚೇರಿ ವೃತ್ತದಿಂದ ಗಾಯತ್ರಿಪುರಂ ಮುಖ್ಯ ರಸ್ತೆಯವರೆಗೆ (0.40), ಮಹದೇವಪುರ ಮುಖ್ಯರಸ್ತೆಯಲ್ಲಿ ಪೋರಂ ಮಾಲ್‌ನಿಂದ ರಾಜೀವ್ ನಗರದವರೆಗೆ (3 ಕಿ.ಮೀ.), ರಾಜೀವ್‌ನಗರ ಮುಖ್ಯರಸ್ತೆಯಲ್ಲಿ ನಾರ್ತ್ ಈಸ್ಟ್ ಆಫ್ ಎನ್ ಮೆಹಲ್ಲಾ ದ್ರಾವಿಡ ಪಾರ್ಕ್‌ನಿಂದ ರಾಜೀವನಗರದ ಸೂರ್ಯನಾರಾಯಣ ದೇವಸ್ಥಾನದವರೆಗೆ (0.60 ಕಿ.ಮೀ.), ಶಿವಾಜಿ ಮುಖ್ಯರಸ್ತೆಯಲ್ಲಿ ಫೌಂಟನ್ ವೃತ್ತದಿಂದ ಶಿವಾಜಿ ಮುಖ್ಯರಸ್ತೆವರೆಗೆ (0.85), ಕೆಆರ್‌ಎಸ್ ರಸ್ತೆಯಲ್ಲಿ ಮೆಟ್ರೋಪೋಲ್ ವೃತ್ತದಿಂದ ಹಿನಕಲ್‌ವರೆಗೆ (6 ಕಿ.ಮೀ.), ದಾಸಪ್ಪ ವೃತ್ತದಿಂದ ರಿಂಗ್ ರಸ್ತೆವರೆಗೆ (5 ಕಿ.ಮೀ.) ಅಲಂಕಾರಿಕ ಸಸ್ಯಗಳನ್ನು ನಡೆಲಾಗುತ್ತಿದೆ.

ಅಂತೆಯೇ ವಾಣಿವಿಲಾಸ ರಸ್ತೆಯಲ್ಲಿ ಕೋರ್ಟ್ ಮುಂಭಾಗದಿಂದ ಅಗ್ರಹಾರ ವೃತ್ತದವರೆಗೆ (3 ಕಿ.ಮೀ.), ಚಾಮರಾಜ ಜೋಡಿ ರಸ್ತೆಯಲ್ಲಿ ಏಕಲವ್ಯ ವೃತ್ತದಿಂದ ಹಾರ್ಡಿಂಗ್ ವೃತ್ತದವರೆಗೆ (4 ಕಿ.ಮೀ.), ಮಾನಂದವಾಡಿ ರಸ್ತೆಯಲ್ಲಿ ಸಿಲ್ಕ್ ಫ್ಯಾಕ್ಟರಿ ವೃತ್ತದಿಂದ ರಿಂಗ್ ರಸ್ತೆವರೆಗೆ (3 ಕಿ.ಮೀ.), ವಿಶ್ವಮಾನವ ಜೋಡಿ ರಸ್ತೆಯಲ್ಲಿ ಕುಕ್ಕರಹಳ್ಳಿ ಸಿಗ್ನಲ್‌ನಿಂದ ದಟ್ಟಗಳ್ಳಿವರೆಗೆ (5 ಕಿ.ಮೀ.), ಜೆಎಲ್‌ಬಿ ರಸ್ತೆಯಲ್ಲಿ ರೈಲ್ವೆ ನಿಲ್ದಾಣ ವೃತ್ತದಿಂದ ರಾಮಸ್ವಾಮಿ ವೃತ್ತದವರೆಗೆ (1.50 ಕಿ.ಮೀ.), ಕೃಷ್ಣರಾಜ ಬುಲೇವಾರ್ಡ್ ರಸ್ತೆಯಲ್ಲಿ ಪೆವಿಲಿಯನ್ ಆಟ ಮೈದಾನದಿಂದ ಕೋರ್ಟ್‌ವರೆಗೆ (1 ಕಿ.ಮೀ.), ಉದಯಗಿರಿ ರಸ್ತೆಯಲ್ಲಿ ಸೌಗಂಧಿಕಾ ಉದ್ಯಾನವನ ಮುಂಭಾಗದಿಂದ ಶಾಂತಿ ಸಾಗರ ಕಾಂಪ್ಲೆಕ್ಸ್‌ವರೆಗೆ (1 ಕಿ.ಮೀ.), ಬೆಂಗಳೂರು–ಮೈಸೂರು ರಸ್ತೆಯಲ್ಲಿ ಫೌಂಟೇನ್ ವೃತ್ತದಿಂದ ಟಿಪ್ಪು ವೃತ್ತದವರೆಗೆ (0.50 ಕಿ.ಮೀ.), ವಿಜಯನಗರ ಜೋಡಿ ರಸ್ತೆಯಲ್ಲಿ ಕೃಷ್ಣದೇವರಾಯ ವೃತ್ತದಿಂದ ರಿಂಗ್ ರಸ್ತೆವರೆಗೆ (1.50 ಕಿ.ಮೀ.), ಟೆಂಪಲ್ ರಸ್ತೆಯಲ್ಲಿ ಒಂಟಿಕೊಪ್ಪಲು ವೃತ್ತದಿಂದ ಹುಣಸೂರು ರಸ್ತೆ ಜಂಕ್ಷನ್‌ವರೆಗೆ (2 ಕಿ.ಮೀ.), ವಿನೋಬಾ ರಸ್ತೆಯಲ್ಲಿ ನಂಜರಾಜ ಬಹದ್ದೂರ್ ಛತ್ರದ ಮುಂಭಾಗದ ರಸ್ತೆ ವಿಭಜಕ (0.50 ಕಿ.ಮೀ.), ಸುಭಾಷ್‌ನಗರದ ದಂಡಿನ ಮಾರಮ್ಮನ ರಸ್ತೆ ವಿಭಜಕ (2 ಕಿ.ಮೀ.) ಹಾಗೂ ಸುಬರ್ಬ್ ಬಸ್ ನಿಲ್ದಾಣದ ಮುಂಭಾಗದ (ಬೆಂಗಳೂರು–ನೀಲಗಿರಿ ರಸ್ತೆ ವಿಭಜಕದಲ್ಲಿ 1 ಕಿ.ಮೀ.) ವಿಭಜಕದಲ್ಲಿ ಗಿಡಗಳನ್ನು ನೆಡಲು ಸಿದ್ಧತೆ ನಡೆದಿದೆ.

ಮಾಜಿ ಮೇಯರ್ ಸಂದೇಶ್‌ಸ್ವಾಮಿಗೆ ಹುಟ್ಟುಹಬ್ಬದ ಅಭಿನಂದನೆ...





ಮಾಜಿ ಮೇಯರ್ ಸಂದೇಶ್‌ಸ್ವಾಮಿ ಅವರಿಗೆ ಆನಂದ ಮತ್ತು ಸ್ನೇಹಿತರು ಹುಟ್ಟುಹಬ್ಬದ ಶುಭಾಶಯ ಕೋರಿದರು. ಮತ್ತೊಂದು ಚಿತ್ರದಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ ಇನ್ನಿತರರು ಅಭಿನಂದಿಸುತ್ತಿರುವುದನ್ನು ಕಾಣಬಹುದು.

ಮೈಸೂರು ಮಿತ್ರ

ಶುಕ್ರವಾರ 27 ಸೆಪ್ಟೆಂಬರ್ 2024

ಇಂದಿನಿಂದ ಮೂರು ದಿನ ಸಿಎಂ ಮೈಸೂರು ಪ್ರವಾಸ



ಮೈಸೂರು,ಸೆ.26(ಆರ್‌ಕೆ)– ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ತನಿಖೆ ಎದುರಿಸಬೇಕಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನಾಳೆ (ಸೆ.27)ಯಿಂದ ಮೂರು ದಿನಗಳ ಕಾಲ ಮೈಸೂರು ಪ್ರವಾಸ ಕೈಗೊಂಡಿದ್ದಾರೆ.

ಶುಕ್ರವಾರ ಬೆಳಗ್ಗೆ 10.25 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣಕ್ಕೆ ಆಗಮಿಸುವ ಅವರು, ಬೆಳಗ್ಗೆ 10.45ಕ್ಕೆ ಅರಮನೆ ಆವರಣದಲ್ಲಿ ಜಿಲ್ಲಾಡಳಿತ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ 'ಪ್ರವಾಸೋದ್ಯಮ ಮತ್ತು ಶಾಂತಿ' ಘೋಷವಾಕ್ಯದಡಿ ಆಯೋಜಿಸಿರುವ ವಿಶ್ವ ಪ್ರವಾಸೋದ್ಯಮ ದಿನಾಚರಣೆ ಕಾರ್ಯಕ್ರಮದಲ್ಲಿ ಭಾಗವಹಿಸುವರು.

ಬೆಳಗ್ಗೆ 11.30ಕ್ಕೆ ಜಿಪಂ ಸಭಾಂಗಣದಲ್ಲಿ ಮೈಸೂರು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆ ನಡೆಸಲಿರುವ ಮುಖ್ಯ ಮಂತ್ರಿಗಳು, ರಾತ್ರಿ ಮೈಸೂರಿನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಸೆ.28ರಂದು ಬೆಳಗ್ಗೆ 10 ಗಂಟೆಗೆ ಸಿದ್ಧಾರ್ಥನಗರದ ವಾಯುವಿಹಾರ ರಸ್ತೆಯಲ್ಲಿ ಆರಂಭವಾಗಿರುವ ಹೋಟೆಲ್ ಮೈಸೂರು ರೇಡಿಯನ್ಸ್ ಅನ್ನು ಉದ್ಘಾಟನೆ ಮಾಡಲಿದ್ದು, 11 ಗಂಟೆಗೆ ಸರ್ಕಾರದ ಗ್ಯಾರಂಟಿ ಯೋಜನೆಗಳಿಗೆ ಸಂಬಂಧಿಸಿದ ಪುಸ್ತಕ ಬಿಡುಗಡೆ ಮಾಡುವರು. ಮಧ್ಯಾಹ್ನ 3 ಗಂಟೆಗೆ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಗ್ರಂಥಾಲಯ ಕಟ್ಟಡದಲ್ಲಿ ಆಯೋಜಿಸಿರುವ ಸಂಸ್ಥೆಯ ಶತಮಾನೋತ್ಸವ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ವಿವಿಧ ಕಾಮಗಾರಿಗಳ ಶಂಕುಸ್ಥಾಪನೆ ನೆರವೇರಿಸುವರು. ಅಂದು ರಾತ್ರಿ ಮೈಸೂರಲ್ಲಿ ವಾಸ್ತವ್ಯ ಹೂಡಲಿರುವ ಸಿದ್ದರಾಮಯ್ಯ, ಸೆ.29ರಂದು ಬೆಳಗ್ಗೆ 11 ಗಂಟೆಗೆ ಹಿಂದುಳಿದ ವರ್ಗಗಳ ವಸತಿ ನಿಲಯಗಳ ಹಳೇ ವಿದ್ಯಾರ್ಥಿಗಳ ಸಂಘದ ಉದ್ಘಾಟನೆ ನೆರವೇರಿಸಿ, ಸಂಜೆ 4 ಗಂಟೆಗೆ ಅಶೋಕಪುರಂ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವರು. ಸಂಜೆ 6 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ಹಿಂದಿರುಗುವರು ಎಂದು ಪ್ರಕಟಣೆ ತಿಳಿಸಿದೆ.

ಕರ್ನಾಟಕ ಬಿಜೆಪಿಯಲ್ಲಿ ಭ್ರಷ್ಟಾಚಾರದ ಕಳಂಕ ಹೊತ್ತಿಲ್ಲದ ಒಬ್ಬ ನಾಯಕನ ತೋರಿಸಿ...!?

• ಪ್ರಧಾನಿ ಮೋದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು • ನಿಮ್ಮ ಕಾರ್ಯಾಲಯದ ವಾಷಿಂಗ್ ಮೆಷಿನ್‌ನಲ್ಲಿ ಭ್ರಷ್ಟಾಚಾರಿಗಳ ಶುದ್ಧ ಮಾಡುವ ಕೆಲಸ ಮಾಡುತ್ತಿದ್ದೀರಾ...!

ಬೆಂಗಳೂರು, ಸೆ.26(ಕೆಎಂಶಿ)–ಕರ್ನಾಟಕ ಬಿಜೆಪಿಯಲ್ಲಿ ಭ್ರಷ್ಟಾಚಾರ ಆರೋಪದ ಕಳಂಕ ಮೆತ್ತಿಕೊಂಡಿಲ್ಲದ ಒಬ್ಬನೇ ಒಬ್ಬ ನಾಯಕನನ್ನು ತೋರಿಸಿದರೆ ನಿಮ್ಮನ್ನು ಗೌರವದಿಂದ ಕರೆಸಿ ಸಾರ್ವಜನಿಕ ಸನ್ಮಾನ ಮಾಡುತ್ತೇವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸವಾಲು ಹಾಕಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಮುಖ್ಯಮಂತ್ರಿ, ದೂರದ ಊರಲ್ಲಿ ಕುಳಿತು ಗಾಳಿಯಲ್ಲಿ ಗುಂಡು ಹೊಡೆಯಬೇಡಿ, ನೇರವಾಗಿ ಚರ್ಚೆಗೆ ಬನ್ನಿ ಎಂದು ಆಹ್ವಾನಿಸಿದ್ದಾರೆ. ಕರ್ನಾಟಕ ಮುಖ್ಯಮಂತ್ರಿ ಹುದ್ದೆ ಎರಡೂವರೆ ಸಾವಿರ ಕೋಟಿ ರೂ.ಗಳಿಗೆ ಹರಾಜು ಹಾಕಲಾಗಿದೆ ಎಂಬ ಆರೋಪ ಸ್ವಪಕ್ಷ ನಾಯಕರಿಂದಲೇ ಕೇಳಿ ಬಂದಿದ್ದು ಭ್ರಷ್ಟಾಚಾರದ ಬಗ್ಗೆ ಮೋದಿ ಅವರಿಗೆ ಮಾತನಾಡುವ ನೈತಿಕತೆ ಇಲ್ಲ.

ಮುಖ್ಯಮಂತ್ರಿ ಹುದ್ದೆ ಮಾರಾಟ ಮಾಡಲಾಗಿದೆ ಎಂಬುದಾಗಿ ಶಾಸಕರೊಬ್ಬರು ಬಹಿರಂಗವಾಗಿ ಆರೋಪಿಸಿದರೂ ಅವರ ಮೇಲೆ ಕ್ರಮ ಇಲ್ಲ. ದಿನ ಬೆಳಗಾದರೆ ಭ್ರಷ್ಟಾಚಾರ ಆರೋಪದ ಕೆಸರೆರಚಾಟದಲ್ಲಿ ತೊಡಗಿರುವ ಬಿಜೆಪಿ ಶಾಸಕರ ವಿರುದ್ಧವೂ ಕ್ರಮ ಇಲ್ಲ. ಈ ಮೌನಕ್ಕೆ, ನಿಷ್ಕ್ರಿಯತೆಗೆ ಏನು ಕಾರಣ, ಭ್ರಷ್ಟಾಚಾರದಲ್ಲಿ ನೀವೂ ಭಾಗಿಯೇ ಎಂದು ಪ್ರಶ್ನಿಸಿದ್ದಾರೆ.

ಗಣಿಗಾರಿಕೆಗೆ ಕಾನೂನುಬಾಹಿರವಾಗಿ ಭೂಮಿ ಮಂಜೂರು ಮಾಡಿ, ನೂರಾರು ಕೋಟಿ ರೂ. ಹಗರಣ ಆರೋಪ ಎದುರಿಸುತ್ತಿರುವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕೇಂದ್ರ ಸಂಪುಟಕ್ಕೆ ಸೇರಿಸಿಕೊಂಡಿರುವ ನಿಮಗೆ ಇತರರ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡುವಾಗ ಆತ್ಮಸಾಕ್ಷಿ ಚುಚ್ಚುವುದಿಲ್ಲವೇ. ಹಗರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಆರೋಪ ಪಟ್ಟಿ ಸಲ್ಲಿಸಲು ಕರ್ನಾಟಕ ಲೋಕಾಯುಕ್ತರು ಅನುಮತಿ ಕೋರಿರುವ ಬಗ್ಗೆ ರಾಜ್ಯಪಾಲರು ಮೌನ ವಹಿಸಿರುವುದೇಕೆ, ಅವರ ಮೇಲೆ ಒತ್ತಡ ಹೇರುತ್ತಿರುವವರು ಯಾರು. ಮೋದಿ ಅವರೇ, ಕಳೆದ 11 ವರ್ಷಗಳಿಂದ ನಿಮ್ಮ ಕಾರ್ಯಾಲಯದ ವಾಷಿಂಗ್ ಮೆಷಿನ್ ಕೆಲಸ ಮಾಡುತ್ತಿರುವುದನ್ನು ದೇಶ ಗಮನಿಸುತ್ತಿದೆ. ಭ್ರಷ್ಟಾಚಾರ ಆರೋಪಕ್ಕೆ ಒಳಗಾಗಿರುವ ಇತರ ಪಕ್ಷಗಳ ನಾಯಕರನ್ನೆಲ್ಲಾ ವಾಷಿಂಗ್ ಮೆಷಿನ್‌ನಲ್ಲಿ ಹಾಕಿ ಪರಮ ಪ್ರಾಮಾಣಿಕರನ್ನಾಗಿ ಮಾಡುತ್ತಿರುವ ನಿಮ್ಮ ಚಾಕಚಕ್ಯತೆಗೆ ಶಹಬ್ಬಾಸ್ ಅನ್ನಲೇ ಬೇಕು.



ಕಳೆದ 2014ರಿಂದ ಇದುವರೆಗೆ ಭ್ರಷ್ಟಾಚಾರ ಆರೋಪ ಹೊತ್ತಿರುವ ಇತರೆ ಪಕ್ಷಗಳ 25 ನಾಯಕರು ಬಿಜೆಪಿ ಸೇರಿದ್ದಾರೆ. ಇವರಲ್ಲಿ 23 ನಾಯಕರನ್ನು ಭ್ರಷ್ಟಾಚಾರ ಆರೋಪಗಳಿಂದ ಕೇಂದ್ರ ತನಿಖಾ ಸಂಸ್ಥೆಗಳು ಮುಕ್ತಗೊಳಿಸಿವೆ. ಹಿಮಂತಾ ಶರ್ಮಾ, ಸುವೇಂದು ಅಧಿಕಾರಿ, ಹೆಚ್.ಡಿ.ಕುಮಾರಸ್ವಾಮಿ, ಅಜಿತ್ ಪವಾರ್, ಅಶೋಕ್ ಚವ್ಹಾಣ್, ನಾರಾಯಣ ರಾಣೆ, ಪ್ರತಾಪ್ ಸರ್‌ನಾಯಕ್ ಅವರಿಂದ ಹಿಡಿದು ಇತ್ತೀಚಿನ ಏಡ್ಸ್ ಟ್ರ್ಯಾಪ್ ಗಿರಾಕಿ ಮುನಿರತ್ನವರೆಗೆ ಎಷ್ಟೊಂದು ಭ್ರಷ್ಟರನ್ನು ವಾಷಿಂಗ್ ಮೆಷಿನ್‌ನಲ್ಲಿ ತೊಳೆದು ನೀವು ಕ್ಲೀನ್ ಮಾಡಿದ್ದೀರಿ, ಇವೆಲ್ಲ ಧರ್ಮಾರ್ಥ ಸೇವೆಯೇ ಎಂದಿದ್ದಾರೆ. ಬಿಜೆಪಿ ಖಜಾನೆಗೆ ಸಂದಾಯವಾಗಿರುವ ಚುನಾವಣಾ ಬಾಂಡ್‌ಗಳ ಹಿಂದಿನ ಕೊಡುಗೈ ದಾನಿಗಳು ಯಾರು, ಅವರು ಕೊಟ್ಟದ್ದೆಷ್ಟು, ಅದಕ್ಕಾಗಿ ಅವರು ಪಡೆದದ್ದು ಎಷ್ಟು. ಎನ್ನುವುದು ದೇಶದ ಜನರ ಕಣ್ಣಮುಂದಿದೆ.

ನಿಮ್ಮ 11 ವರ್ಷಗಳ ಆಡಳಿತಾವಧಿಯಲ್ಲಿ ಬ್ಯಾಂಕ್ ಲೂಟಿ ಮಾಡಿ ದೇಶ ಬಿಟ್ಟು ಓಡಿಹೋಗಲು ದಾರಿ ಮಾಡಿಕೊಟ್ಟವರು ಯಾರು, ಅದಾನಿ, ಅಂಬಾನಿ ಸಂಪತ್ತು ಎಷ್ಟು ಪಟ್ಟು ಹೆಚ್ಚಾಯಿತು. ಬಡವರ ಗಳಿಕೆ ಎಷ್ಟು ಪಟ್ಟು ಕಡಿಮೆಯಾಯಿತು. ಭ್ರಷ್ಟಾಚಾರದ ಬಗ್ಗೆ ನೀವು ಚರ್ಚೆ ಪ್ರಾರಂಭಿಸಿರುವುದನ್ನು ಕಂಡು ಸಂತೋಷವಾಯಿತು. ನನ್ನ ವಿರುದ್ಧ ಭ್ರಷ್ಟಾಚಾರದ ಸುಳ್ಳು ಆರೋಪಗಳನ್ನು ಮಾಡಿ ಕುಣಿದಾಡುತ್ತಿರುವ ಪಾತ್ರಧಾರಿಗಳನ್ನಷ್ಟೇ ರಾಜ್ಯದ ಜನ ನೋಡಿದ್ದಾರೆ. ಈಗ ಇದರ ಹಿಂದಿರುವ ಸೂತ್ರಧಾರಿ ಯಾರು ಎನ್ನುವುದು ಕೂಡಾ ಜನರಿಗೆ ಗೊತ್ತಾಗಲಿ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.

ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್‌ನಿಂದ ಶರನ್ನವರಾತ್ರಿ ಮಹೋನ್ನತ–2024

ಮೈಸೂರು,ಸೆ.26–ಮೈಸೂರಿನ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ವತಿಯಿಂದ ದಸರಾ ಮಹೋತ್ಸವದ ಅಂಗವಾಗಿ ಅ.3ರಿಂದ 12ರವರೆಗೆ ಶರನ್ನವರಾತ್ರಿ ಮಹೋನ್ನತ–2024 ಏರ್ಪಡಿಸಲಾಗಿದೆ.

ಶ್ರೀ ವೇಂಕಟಾಚಲ ಅವಧೂತ ಗುರು ಮಹಾರಾಜರ ಆಶೀರ್ವಾದ ಮತ್ತು ಶ್ರೀ ಅರ್ಜುನ ಅವಧೂತರ ಸಮ್ಮುಖದಲ್ಲಿ ಪ್ರತಿದಿನ ಬೆಳಗ್ಗೆ ಹೋಮ–ಹವನ ಬನ್ನೂರು ರಸ್ತೆ ಹಾರೋಹಳ್ಳಿ ಬಳಿ ಇರುವ ವೇಂಕಟಾರ್ಜುನ ಧ್ಯಾನ ಮಂದಿರದಲ್ಲಿ ಮತ್ತು ಸಂಜೆ ಮೈಸೂರಿನ ಸೋನಾರ್ ಬೀದಿಯಲ್ಲಿರುವ ಗುರು ನಿವಾಸದಲ್ಲಿ ಲಲಿತ ಸಹಸ್ರಾಮ ಪಾರಾಯಣ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ.

ಅ.2ರಂದು ಸಂಜೆ 6 ಗಂಟೆಗೆ ಮಹಾಲಯ ಅಮಾವಾಸ್ಯೆ ಅಂಗವಾಗಿ ಮೈಸೂರು–ಬನ್ನೂರು ರಸ್ತೆ ಹಾರೋಹಳ್ಳಿ ಬಳಿಯಿರುವ ಶ್ರೀ ವೇಂಕಟಾರ್ಜುನ ಧ್ಯಾನ ಮಂದಿರದಲ್ಲಿ ಪ್ರತ್ಯಾಂಗಿರಾ ಹೋಮವನ್ನು ಲೋಕ ಕಲ್ಯಾಣಾರ್ಥವಾಗಿ ಏರ್ಪಡಿಸಲಾಗಿದೆ.

ಅ.3ರಂದು ಗಣಪತಿ ಸಹಿತ ವನದುರ್ಗಾ ಹೋಮದೊಂದಿಗೆ ಶರನ್ನವರಾತ್ರಿ ಕಾರ್ಯಕ್ರಮಗಳು ಆರಂಭವಾಗಲಿದೆ. ಅ.4 ರಂದು ಲಕ್ಷ್ಮೀ ನಾರಾಯಣ ಹೃದಯ ಹೋಮ, ಅ.5ರಂದು ಸ್ವಯಂವರ ಪಾರ್ವತಿ ಹೋಮ, ಅ.6ರಂದು ಬಾಲಾ ತ್ರಿಪುರ ಸುಂದರಿ ಹೋಮ, ಅ.7ರಂದು ಲಲಿತಾ ಹೋಮ, ಅ.8ರಂದು ಶ್ರೀಸೂಕ್ತ ಹೋಮ, ಅ.9ರಂದು ಸರಸ್ವತಿ ಹೋವ , ಅ.10ರಂದು ದುರ್ಗಾ ಹೋವು, ವೇಂಕಟಾರ್ಜುನ ಧ್ಯಾನ ಮಂದಿರದಲ್ಲಿ ಸಂಜೆ 7 ಗಂಟೆಗೆ ದುರ್ಗಾ ದೀಪ ನಮಸ್ಕಾರ, ಅ.11ರಂದು ಚಂಡಿ ಹೋಮ ನಡೆಯಲಿದೆ. ಅ.12ರಂದು ಸಂಜೆ 6 ಗಂಟೆಗೆ ಧ್ಯಾನ ಮಂದಿರದಲ್ಲಿ ದೀಪೋತ್ಸವ ಕಾರ್ಯಕ್ರಮವಿರುತ್ತದೆ . ಹೋಮಗಳು ಪ್ರತಿ ದಿನ ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ನಡೆಯಲಿದೆ.

ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿ ಪಾರದರ್ಶಕ ತನಿಖೆಗೆ ಸಹಕರಿಸಬೇಕು

ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಆಗ್ರಹ

ಮೈಸೂರು, ಸೆ.26(ಜಿಎ)–ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶದಂತೆ ಮುಡಾ ಹಗರಣದಲ್ಲಿ ತನಿಖೆ ಎದುರಿಸಲಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮ ಪದವಿಗೆ ರಾಜೀನಾಮೆ ನೀಡಿ, ಪಾರದರ್ಶಕ ತನಿಖೆಗೆ ಸಹಕರಿಸಬೇಕು ಎಂದು ಕರ್ನಾಟಕ ರಾಷ್ಟ್ರ ಸಮಿತಿ(ಕೆ.ಆರ್.ಎಸ್) ಪಕ್ಷದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ ರವಿಕುಮಾರ್ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಮುಂದುವರಿದರೆ ಲೋಕಾಯುಕ್ತದ ತನಿಖೆಗೆ ಪ್ರಭಾವ ಬೀರುವ ಸಾಧ್ಯತೆಯಿದೆ. ಹಿಂದೆ ಅರ್ಕಾವತಿ ಡಿ–ನೋಟಿಫಿಕೇಷನ್ ಪ್ರಕರಣದಲ್ಲೂ ಲೋಕಾಯುಕ್ತ ಸಿದ್ದರಾಮಯ್ಯ ಅವರಿಗೆ ನೋಟಿಸ್ ನೀಡಿತ್ತು. ಅಂದು ಭ್ರಷ್ಟಾಚಾರ ನಿಗ್ರಹ ದಳ ಸ್ಥಾಪಿಸಿ ಲೋಕಾಯುಕ್ತದ ಶಕ್ತಿಯನ್ನೇ ದುರ್ಬಲಗೊಳಿಸಿದ್ದರು ಎಂದು ಆರೋಪಿಸಿದರು.

ಪ್ರಜಾಪ್ರಭುತ್ವದ ಆಶಯಗಳಿಗೆ ವಿರುದ್ಧವಾಗಿ ಮುಖ್ಯಮಂತ್ರಿ ವರ್ತಿಸಬಾರದು. ತನಿಖೆ ಪೂರ್ಣಗೊಂಡು ನಿರ್ದೋಷಿಯಾದಾಗ ಮತ್ತೆ ಅಧಿಕಾರ ನಡೆಸಲಿ. ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳೂ ಭ್ರಷ್ಟಾಚಾರ ನಡೆಸುವವರೇ ಆಗಿದ್ದು, ಹೊಂದಾಣಿಕೆ ರಾಜಕಾರಣ ಮಾಡಿದ್ದಾರೆ. ಕೆಆರ್‌ಎಸ್ ಪಕ್ಷದಿಂದ ಮಾತ್ರ ಸಮಾಜದಲ್ಲಿ ಬದಲಾವಣೆ ಸಾಧ್ಯ ಎಂದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ನಾಗೇಂದ್ರ, ಜಿಲ್ಲಾ ಕಾರ್ಯದರ್ಶಿಗಳಾದ ಸುಂಕಪ್ಪ, ಆನಂದ್, ರವಿ, ರಾಜೇಂದ್ರ, ಕೆ.ಆರ್. ನಗರ ತಾಲೂಕು ಮಹಿಳಾ ಘಟಕದ ಉಪಾಧ್ಯಕ್ಷೆ ಮಹದೇವಮ್ಮ ಉಪಸ್ಥಿತರಿದ್ದರು.

ಪದವಿ ಸೆಮಿಸ್ಟರ್‌ಗಳ ಮರು ಪರೀಕ್ಷೆಗೆ ಅವಕಾಶ

ಮೈಸೂರು,ಸೆ.26–ಮೈಸೂರು ವಿಶ್ವ ವಿದ್ಯಾನಿಲಯದ ವಿವಿಧ ಸ್ನಾತಕ (UG) ಪದವಿಯ ಸೆಮಿಸ್ಟರ್‌ನ ವಿದ್ಯಾರ್ಥಿಗಳು ತಮ್ಮ ಎರಡು ಪಟ್ಟು ಅವಧಿ ಮುಗಿದ ನಂತರವೂ 1,3,5 ಮತ್ತು 7ನೇ ಸೆಮಿಸ್ಟರ್‌ಗಳ ಪತ್ರಿಕೆಗಳಲ್ಲಿ ಅನುತ್ತೀರ್ಣಗೊಂಡಿದ್ದರೆ ಅಂತಹ ಪತ್ರಿಕೆಗಳ ಪರೀಕ್ಷೆಯನ್ನು ಪುನಃ ತೆಗೆದುಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಹಳೆಯ ಸೆಮಿಸ್ಟರ್ ಸ್ಕೀಂ ವಿದ್ಯಾರ್ಥಿಗಳು ನವೆಂಬರ್/ಡಿಸೆಂಬರ್–2024ರ ಮಾಹೆಯಲ್ಲಿ ಜರುಗುವ ಪರೀಕ್ಷೆಯನ್ನು ತೆಗೆದುಕೊಳ್ಳಲು ಸದ್ಯದಲ್ಲೇ ಪರೀಕ್ಷಾ ಅಧಿಸೂಚನೆಯನ್ನು ಹೊರಡಿಸಲಾಗುವುದು ಎಂದು ಮೈಸೂರು ವಿವಿ ಪ್ರಕಟಣೆ ತಿಳಿಸಿದೆ.

ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಮಹಾಸಭೆ



ಮೈಸೂರಿನ ಪಡುವಾರಹಳ್ಳಿಯ ಮಹದೇಶ್ವರ ದೇವಸ್ಥಾನದಲ್ಲಿ ಜನಹಿತ ವಿವಿಧೋದ್ದೇಶ ಸಹಕಾರ ಸಂಘದ ಮಹಾಸಭೆ ನಡೆಯಿತು. ಅಧ್ಯಕ್ಷ ಎಂ.ಭೈರಪ್ಪ, ಉಪಾಧ್ಯಕ್ಷ ಸಿ.ಸಂತೋಷ್, ನಿರ್ದೇಶಕರಾದ ಟಿ.ಸೋಮು, ಚಂದ್ರಶೇಖರ,ಲೋಕೇಶ್ವರ, ಸೋಮಣ್ಣ, ರಾಘವ್‌ಗೌಡ, ಕೃಷ್ಣಕುಮಾರ್, ಕುಮಾರ್, ಮಹಾಲಕ್ಷ್ಮಿ, ಲಕ್ಷಮ್ಮ, ಪ್ರದೀಪ್ ನಾಯಕ, ಕೆ.ಸುರೇಶ್, ಕಾರ್ಯದರ್ಶಿ ಪ್ರಕಾಶ್ ಉಪಸ್ಥಿತರಿದ್ದರು.

ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜಲ್ಲಿ ತಂತ್ರಜ್ಞಾನ ಉತ್ತೇಜನ ವಿಶೇಷ ಉಪನ್ಯಾಸ



ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಕಾಲೇಜಿನಲ್ಲಿ ತಂತ್ರಜ್ಞಾನ ಉತ್ತೇಜನ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಮೈಸೂರು,ಸೆ.26–ಮೈಸೂರಿನ ವಿದ್ಯಾವರ್ಧಕ ತಾಂತ್ರಿಕ ಕಾಲೇಜಿನಲ್ಲಿ ತಂತ್ರಜ್ಞಾನ ಉತ್ತೇಜನ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ವೇಳೆ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಡಿಆರ್‌ಡಿಓ ಸಂಸ್ಥೆಯ ನಿವೃತ್ತ ವಿಜ್ಞಾನಿ ಹಾಗೂ ಪ್ರಧಾನ ಸಾರ್ವಜನಿಕ ಸಂಪರ್ಕಾಧಿಕಾರಿ ಡಾ.ಜಯಪ್ರಕಾಶ್‌ರಾವ್ ಮಾತನಾಡಿ, ನಮ್ಮ ದೇಶ ನಿಜವಾದ ಸ್ವಾತಂತ್ರ್ಯ ಹೊಂದಬೇಕಾದರೆ ಯುವ ಜನತೆ ಇಲ್ಲಿಯೇ ಉದ್ಯೋಗ ಆಯ್ಕೆ ಮಾಡಿ ಸಂಶೋಧನಾ ಹಾಗೂ ಉತ್ಪಾದನಾ ಕ್ಷೇತ್ರದಲ್ಲಿ ತೊಡಗಿಸಿಕೊಂಡು, ಆಮದು ಪ್ರಮಾಣ ಕಡಿಮೆ ಮಾಡುತ್ತಾ ಸದ್ಯದಲ್ಲಿಯೇ ಭಾರತ, ಜಗತ್ತಿನ ಸೂಪರ್ ಪವರ್ ಆಗುವ ನಿಟ್ಟಿನಲ್ಲಿ ಕಂಕಣಬದ್ಧರಾಗಬೇಕು ಎಂಬುದಾಗಿ ಕರೆ ನೀಡಿದರು. ಭಾರತ ತಂತ್ರಜ್ಞಾನ ಕ್ಷೇತ್ರದಲ್ಲಿ ಆತ್ಮನಿರ್ಭರ ಸಾಧನೆ ಪಡೆದ ಯೋಜನೆಗಳ ಬಗ್ಗೆ ಹೇಳಿ ಹಲವು ವಿನೂತನ ವಿಡಿಯೋ ಪ್ರದರ್ಶಿಸಿದ ಶ್ರೀರಾವ್, ನವ ಸ್ವತಂತ್ರ ಭಾರತ ನಿರ್ಮಾಣ ಸಾಧ್ಯವಾಗಿಸುವಲ್ಲಿ ಯುವ ಜನತೆಯ ಪಾತ್ರ ದೊಡ್ಡದು ಎಂದರು. ಪ್ರಾರಂಭದಲ್ಲಿ ಡಾ.ಸೌಮ್ಯ ಸ್ವಾಗತಿಸಿದರು. ಕೊನೆಯಲ್ಲಿ ಡಾ.ಲತಾ ವಂದಿಸಿದರು.

ಇಂದು ಜಗನ್ಮೋಹನ ಅರಮನೆಯಲ್ಲಿ ಗೀತ್ ಸಂಗಮ್ ಸಂಗೀತ ಸಂಜೆ



ಕವಿತಾ, ನಿತ್ಯಾನಂದ, ಸದಾಶಿವ, ನಾರಾಯಣ್, ಡಾ.ಸೋಮನಾಥ್, ಡಾ.ಸೀತಾಲಕ್ಷ್ಮಿ, ಡಾ.ಭಾರತಿ

ಡಾ.ರವೀಂದ್ರ, ಕುಮಾರಸ್ವಾಮಿ, ಡಾ.ಭರತ್, ಚಂದ್ರಶೇಖರ್, ನಿಖಿಲ್, ಡಾ.ತೇಜಮಣಿ, ಆಕಾಂಕ್ಷಾ

ಮೈಸೂರು, ಸೆ. 26–ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಾಳೆ (ಸೆ.27) ಸಂಜೆ 5.30ರಿಂದ ರಾತ್ರಿ 9 ರವರೆಗೆ ಖ್ಯಾತ ನಟರಾದ ದಿವಂಗತ ಡಾ.ವಿಷ್ಣುವರ್ಧನ್, ಪುನೀತ್ ರಾಜ್ ಕುಮಾರ್ ಮತ್ತು ಪ್ರಸಿದ್ಧ ಗಾಯಕ ಮೊಹಮ್ಮದ್ ರಫಿ ಅವರ ಸ್ಮರಣಾರ್ಥ ಕವಿತಾ ಕಾಮತ್ ಅವರಿಂದ ಜನಪ್ರಿಯ ಕನ್ನಡ ಮತ್ತು ಹಿಂದಿ ಚಿತ್ರಗೀತೆಗಳ 'ಗೀತ್ ಸಂಗಮ್' ಸಂಗೀತ ಸಂಜೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಇದೇ ವೇಳೆ ವಿವಿಧ ಕ್ಷೇತ್ರಗಳ ಸಾಧಕರಾದ ಡಾ.ಆರ್.ಎಲ್.ಜಗದೀಶ್, ರವಿಗೌಡ, ಎಂ.ಆರ್.ಅನಿತಾ ಮತ್ತು ಡಾ.ಎಂ.ಎನ್.ಯದುಗಿರಿ ಅವರನ್ನು ಸನ್ಮಾನಿಸಲಾಗುವುದು.

ಕಾರ್ಯಕ್ರಮದಲ್ಲಿ ಗಾಯಕರಾದ ಜಿ. ಕವಿತಾ ಕಾಮತ್, ಜಿ.ನಿತ್ಯಾನಂದ ಕಾಮತ್, ಸದಾಶಿವ ಶೆಣೈ, ಹೆಡತಲೆ ನಾರಾಯಣ್, ಡಾ.ಸೋಮನಾಥ್ ವಾಸುದೇವ್, ಡಾ.ಸೀತಾಲಕ್ಷ್ಮಿ, ಡಾ.ಭಾರತಿ, ಡಾ.ರವೀಂದ್ರಕುಮಾರ್, ಬಿ.ಎಸ್.ಕುಮಾರಸ್ವಾಮಿ, ಡಾ.ಭರತ್ ರಾಜ್, ಚಂದ್ರಶೇಖರ್, ನಿಖಿಲ್ ಪ್ರಭು, ಡಾ.ತೇಜಮಣಿ ಮತ್ತು ಆಕಾಂಕ್ಷಾ ಸಂಗೀತ ರಸದೌತಣ ನೀಡಲಿದ್ದಾರೆ. ಪ್ರವೇಶ ಉಚಿತವಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಸೆ.29 ದ್ರೋಣಾರ್ಜುನ ಲೀಗ್ ಅಂತಿಮ ಸುತ್ತಿನ ಪಂದ್ಯ

ಮೈಸೂರು, ಸೆ.26(ಜಿಎ)–ಮೈಸೂರಿನ ಕಲಾ ಸೌರಭ ಫೌಂಡೇಷನ್ ವತಿಯಿಂದ ನಗರದ ಶಾರದ ಪ್ರತಿಷ್ಠಾನ ಟ್ರಸ್ಟ್ ಆಶ್ರಯದಲ್ಲಿ ಸೆ.29ರಂದು ಮಧ್ಯಾಹ್ನ 1 ಗಂಟೆಗೆ ನಗರದ ರಾಮಕೃಷ್ಣ ನಗರ ಐ ಬ್ಲಾಕ್‌ನ ಗಣಪತಿ ದೇವಸ್ಥಾನದಲ್ಲಿ ಕಲಾ ಸೌರಭ ದ್ರೋಣಾರ್ಜುನ ಸಂಗೀತ ಗಾಯನ ಲೀಗ್ ಅಂತಿಮ ಸುತ್ತಿನ ಪಂದ್ಯ ಹಾಗೂ ಬಹುಮಾನ ವಿತರಣಾ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಫೌಂಡೇಷನ್‌ನ ಅಧ್ಯಕ್ಷ ವಿದ್ವಾನ್ ದತ್ತಾತ್ರಿ ಈ ವಿಷಯ ತಿಳಿಸಿ, ಉದಯೋನ್ಮುಖ ಕಲಾ ವಿದರಿಗೆ ವೇದಿಕೆ ಅವಕಾಶವನ್ನು ಸ್ಪರ್ಧೆ ಮೂಲಕ ನೀಡುವುದು ಈ ವಿಶಿಷ್ಟ ಕಾರ್ಯ ಕ್ರಮದ ಉದ್ದೇಶವಾಗಿದೆ. ಈ ಪಂದ್ಯಾವಳಿ ಯಲ್ಲಿ ನಗರದ 50ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಪಾಲ್ಗೊಳ್ಳಲಿದ್ದಾರೆ. ಇವರೆಲ್ಲರೂ ವಿದುಷಿ ಸವಿತಾ ಮೋಹನ್ ಅವರ ಶಿಷ್ಯರಾಗಿದ್ದಾರೆ. ಮುಖ್ಯ ಅತಿಥಿಗಳಾಗಿ ಮೃದಂಗ ವಿದ್ವಾನ್ ವಿ.ಎಸ್. ರಮೇಶ್, ತಾವು, ಡಾ.ರಾಜೇಶ್ ನಾಯಕ್, ಮೈಸೂರು ಸುಬ್ರಹ್ಮಣ್ಯ ಕುಮಾರ್, ಮೈಸೂರು ಸವಿತಾ ಮೋಹನ್ ಮತ್ತಿತರರು ಆಗಮಿಸಲಿದ್ದಾರೆ ಎಂದರು.

ನಾಳೆ 'ಏಕಾಂತತೆ' ಮಲೆಯಾಳಂ ಕಿರುಚಿತ್ರ ಪ್ರದರ್ಶನ

ಮೈಸೂರು,ಸೆ.26(ಜಿಎ)–ಉಷಾಸ್ ಪ್ರೊಡಕ್ಷನ್ ಸಂಸ್ಥೆ ವತಿಯಿಂದ ವಿ. ದೇವದಾಸ್ ಅವರ ನಿರ್ದೇಶನದಲ್ಲಿ ಮಲೆಯಾಳಂ ಭಾಷೆಯಲ್ಲಿ 'ಏಕಾಂತತೆ' ಎಂಬ ಕಿರುಚಿತ್ರ ನಿರ್ಮಿಸಿದ್ದು, ಸೆ.28ರಂದು ಸಂಜೆ 6ಗಂಟೆಗೆ ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ ಪ್ರದರ್ಶನ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹಿರಿಯ ರಂಗಕರ್ಮಿ ಹಾಗೂ ಚಿತ್ರ ಪ್ರಮುಖ ಪಾತ್ರಧಾರಿಯಾದ ಇಂದಿರಾ ನಾಯರ್ ಈ ವಿಷಯ ತಿಳಿಸಿ, ಸಾಮಾನ್ಯವಾಗಿ ಬಹಳಷ್ಟು ಮನೆಯಲ್ಲಿ ಹಿರಿಯ ನಾಗರಿಕರು ಇರುತ್ತಾರೆ. ಅವರ ಮಕ್ಕಳು ಎಲ್ಲೆಲ್ಲಿಯೋ ಕೆಲಸ ಮಾಡಲು ಹೋಗಿರುತ್ತಾರೆ. ಹೀಗಾಗಿ ಇವರು ಒಂಟಿತನವನ್ನು ಹೇಗೆ ಎದುರಿಸಬಲ್ಲರು. ಈ ವೇಳೆ ಮಾನಸಿಕ ತುಮುಲ ಮೊದಲಾದ ವಿಷಯವನ್ನು ಕಿರುಚಿತ್ರ ಆಧರಿಸಿದೆ. ಸಂಗೀತ ಕಮಲ್ ತುಳಸಿ ಅವರದ್ದಾಗಿದೆ. ನಂದನ ವಿನೋದ್, ರಾಜೇಶ್ ಮಾಧವ ಹಾಗೂ ಇನ್ನಿತರರು ಸಹಾ ಅಭಿನಯಿಸಿದ್ದಾರೆ ಎಂದರು.

ನಟನದಲ್ಲಿ 'ಅಂಧಯುಗ' ನಾಟಕ ಪ್ರದರ್ಶನ

ಮೈಸೂರು,ಸೆ.26–ಮೈಸೂರಿನ ನಟನ ರಂಗಶಾಲೆಯಲ್ಲಿ ವಾರಾಂತ್ಯ ರಂಗ ಪ್ರದರ್ಶನದ ಅಂಗವಾಗಿ ಸೆ.29ರಂದು ಸಂಜೆ 6.30ಕ್ಕೆ ನಟನ ರಂಗಶಾಲೆಯ ನಟನ ಪಯಣ: ರೆಪರ್ಟರಿ ತಂಡದ ಕಲಾವಿದರಿಂದ ಧರ್ಮವೀರ ಭಾರತಿ ಅವರ 'ಅಂಧಯುಗ' ನಾಟಕವು ಮಂಡ್ಯ ರಮೇಶ್ ನಿರ್ದೇಶನದಲ್ಲಿ ಪ್ರದರ್ಶನಗೊಳ್ಳಲಿದೆ. ಡಾ.ಸಿದ್ಧಲಿಂಗ ಪಟ್ಟಣಶೆಟ್ಟಿ ಮತ್ತು ತಿಪ್ಪೇಸ್ವಾಮಿ ಅವರು ಈ ನಾಟಕವನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ನಾಟಕದ ವಸ್ತ್ರಾಲಂಕಾರ ರಂಜನಾ ಕೇರಾ, ಸಂಗೀತ ಸಂಯೋಜನೆ ನಟನದ ರಂಗ ಕಲಾವಿದೆ, ಉಪನ್ಯಾಸಕರಾದ ದಿಶಾ ರಮೇಶ್, ನಾಟಕದ ದೃಶ್ಯ ಸಂಯೋಜನೆ ಮತ್ತು ವಿನ್ಯಾಸ ನಟನದ ಪ್ರಾಂಶುಪಾಲರಾದ ಮೇಘ ಸಮೀರ ಅವರದ್ದು. ಮಾಹಿತಿಗೆ 7259537777, 9480468327, 9845595505 ಸಂಪರ್ಕಿಸಬಹುದು.

ಅರಮನೆಯಲ್ಲಿ ರಾಜವಂಶಸ್ಥರ ಧಾರ್ಮಿಕ ಕಾರ್ಯಕ್ಕೆ ಸಿದ್ಧತೆ

ಅ.3ರಿಂದ ಖಾಸಗಿ ದರ್ಬಾರ್

ಮೈಸೂರು, ಸೆ.26(ಎಂಟಿವೈ)– ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆಯಲ್ಲಿ ರಾಜವಂಶಸ್ಥರು ನಡೆಸುವ ಧಾರ್ಮಿಕ ಕಾರ್ಯಕ್ಕೆ ದಿನಗಣನೆ ಆರಂಭ ವಾಗಿದ್ದು, ಇದಕ್ಕಾಗಿ ದರ್ಬಾರ್ ಹಾಲ್ ಹಾಗೂ ಕನ್ನಡಿ ತೊಟ್ಟಿಯಲ್ಲಿ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ.

ಅ.3ರಿಂದ ಅರಮನೆಯಲ್ಲಿ ರಾಜವಂಶಸ್ಥರಿಂದ ಖಾಸಗಿ ದರ್ಬಾರ್ ನಡೆಯಲಿದ್ದು, ಅದಕ್ಕಾಗಿ ನಾಳೆ(ಸೆ.27) ಬೆಳಗ್ಗೆ 8ರಿಂದ 1 ಗಂಟೆಯೊಳಗೆ ಅರಮನೆಯ ಸ್ಟ್ರಾಂಗ್ ರೂಮ್‌ನಿಂದ ಚಿನ್ನದ ಸಿಂಹಾಸನದ ಬಿಡಿಭಾಗಗಳನ್ನು ದರ್ಬಾರ್ ಹಾಲ್‌ಗೆ ತಂದು ಜೋಡಿಸಲಾಗುತ್ತದೆ. ಅಲ್ಲದೆ, ಬೆಳ್ಳಿಯ ಭದ್ರಾಸನ ವನ್ನು ಕನ್ನಡಿ ತೊಟ್ಟಿಗೆ ತಂದು ಜೋಡಣೆ ಮಾಡಲಾಗುತ್ತದೆ. ಈ ಹಿನ್ನೆಲೆಯಲ್ಲಿ ನಾಳೆ ಬೆಳಗ್ಗೆ 6 ರಿಂದ ಮಧ್ಯಾಹ್ನ 2 ಗಂಟೆವರೆಗೂ ಅರಮನೆ ವೀಕ್ಷಣೆಗೆ ಪ್ರವಾಸಿಗರಿಗೆ ನಿರ್ಬಂಧ ಹೇರಲಾಗಿದೆ. ಸಿಂಹಾಸನ ಹಾಗೂ ಬೆಳ್ಳಿ ಭದ್ರಾಸನ ಜೋಡಣೆ ಅಂಗವಾಗಿ ಅರಮನೆ ಸಿಬ್ಬಂದಿ ದರ್ಬಾರ್ ಹಾಲ್ ಹಾಗೂ ಕನ್ನಡಿ ತೊಟ್ಟಿಯಲ್ಲಿ ಸ್ವಚ್ಛತಾ ಕಾರ್ಯ ನಡೆಸಿದರು. ಅಲ್ಲದೆ, ದರ್ಬಾರ್ ಹಾಲ್‌ನಲ್ಲಿರುವ ತೂಗುದೀಪಗಳನ್ನು ಸ್ವಚ್ಛಗೊಳಿಸಿದರು. ಈ ಹಿನ್ನೆಲೆಯಲ್ಲಿ ಅರಮನೆ ಆವರಣ ನವರಾತ್ರಿ ಉತ್ಸವಕ್ಕೆ ಸಜ್ಜಾಗಿದೆ.



ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಅರಮನೆಯ ದರ್ಬಾರ್ ಹಾಲ್‌ನಲ್ಲಿ ಅಂತಿಮ ಸಿದ್ಧತೆ ಮಾಡಿಕೊಳ್ಳುತ್ತಿರುವುದು.

ದೇಶ - ವಿದೇಶ


ಸೂಸೈಡ್ ಪಾಡ್ ಬಳಸಿ ಮೊದಲ ಸಾವು: ನಾಲ್ವರ ಬಂಧನ




ಜ್ಯೂರಿಚ್: ಸ್ವಿಟ್ಜರ್ಲೆಂಡ್‌ನಲ್ಲಿ ಭಾರೀ ವಿವಾದಕ್ಕೆ ಕಾರಣವಾಗಿದ್ದ ಸೂಸೈಡ್ ಪಾಡ್‌ನಲ್ಲಿ 64 ವರ್ಷದ ಮಹಿಳೆ ಆತ್ಮಹತ್ಯೆ ಮಾಡಿಕೊಂಡ ಬೆನ್ನಲ್ಲೇ ಪೊಲೀಸರು ನಾಲ್ವರನ್ನು ಬಂಧಿಸಿದ್ದಾರೆ. ಈ ಹಿಂದೆ ಒಂದೇ ನಿಮಿಷದಲ್ಲಿ ನೋವಿಲ್ಲದೆ ಸಾಯಿಸುವ ಯಂತ್ರವನ್ನು ಸ್ವಿಟ್ಜರ್ಲೆಂಡ್‌ನಲ್ಲಿ ಆವಿಷ್ಕರಿಸಲಾಗಿತ್ತು. ಇದಕ್ಕೆ ಅಲ್ಲಿನ ಸರ್ಕಾರ ಕೂಡ ಅನುಮೋದನೆ ನೀಡಿತ್ತು ಎನ್ನಲಾಗಿತ್ತು. ಇದರಿಂದ ಈಗ ಮೊದಲ ಸಾವಾಗಿದ್ದು, ವಿವಿಧ ಅನಾರೋಗ್ಯ ಸಮಸ್ಯೆಗಳಿಂದ ಬಳಲುತ್ತಿದ್ದ 64 ವರ್ಷದ ಅಮೆರಿಕನ್ ಮಹಿಳೆ ಈ ಸೂಸೈಡ್ ಪಾಡ್ ಮೂಲಕ ಸಾವಿಗೆ ಶರಣಾಗಿದ್ದಾರೆ. ಈ ಸೂಸೈಡ್ ಪಾಡ್ ನಿರ್ಮಾಣವಾದ ನಂತರ ಇದರಲ್ಲಿ ಸಾವಿಗೆ ಶರಣಾದ ಮೊದಲ ವ್ಯಕ್ತಿ ಈಕೆಯೇ ಎನ್ನಲಾಗಿದೆ. ಜರ್ಮನಿಯ ಗಡಿಯಲ್ಲಿರುವ ಶಾಫ್‌ಹೌಸೆನ್‌ನ ಉತ್ತರ ಕ್ಯಾಂಟನ್‌ನಲ್ಲಿರುವ ಪೊಲೀಸರು 'ಸಾರ್ಕೊ' ಕ್ಯಾಪ್ಸುಲ್ ಅನ್ನು ಆತ್ಮಹತ್ಯೆ ಮಾಡಿಕೊಳ್ಳಲು ಅನುವು ಮಾಡಿಕೊಟ್ಟ ಆರೋಪದ ಮೇರೆಗೆ 4 ಮಂದಿಯನ್ನು ಬಂಧಿಸಿದ್ದಾರೆ. ಬಂಧಿತರ ವಿರುದ್ಧ ಆತ್ಮಹತ್ಯೆಗೆ ಪ್ರೇರೇಪಣೆ ಮತ್ತು ಕೆಲ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿದ್ದಾರೆ.

ಅಯೋಧ್ಯೆ, ಪ್ರಯಾಗ್ ರಾಜ್ ದೇವಾಲಯಗಳಲ್ಲಿ ಮಿಠಾಯಿ ನೈವೇದ್ಯಕ್ಕೆ ಬ್ರೇಕ್

ಪ್ರಯಾಗ್ ರಾಜ್: ತಿರುಪತಿ ದೇವಾಲಯದ ಲಡ್ಡು ತಯಾರಿಕೆಯಲ್ಲಿ ಕಲಬೆರಕೆ ನಡೆಯುತ್ತಿರುವ ಸುದ್ದಿ ಬಹಿರಂಗವಾಗುತ್ತಿದ್ದಂತೆಯೇ ಎಚ್ಚೆತ್ತುಕೊಂಡಿರುವ ಅಯೋಧ್ಯೆ, ಪ್ರಯಾಗ್‌ರಾಜ್‌ನ ದೇವಾಲಯದ ಅಧಿಕಾರಿಗಳು, ಮಿಠಾಯಿ ನೈವೇದ್ಯಗಳಿಗೆ ಬ್ರೇಕ್ ಹಾಕಿದ್ದಾರೆ. ಸಂಗಮ ನಗರದಲ್ಲಿರುವ ಅಲೋಪ್ ಶಂಕರಿ ದೇವಿ, ಬಡೇ ಹನುಮಾನ್, ಮನ್ ಕಾಮೇಶ್ವರ್ ಸೇರಿದಂತೆ ಪ್ರಮುಖ ದೇವಾಲಯಗಳಲ್ಲಿ ಸಿಹಿ ತಿನಿಸುಗಳು ಹಾಗೂ ಸಂಸ್ಕರಿಸಿದ ಪದಾರ್ಥಗಳನ್ನು ತರುವುದಕ್ಕೆ ನಿರ್ಬಂಧ ವಿಧಿಸಲಾಗಿದೆ. ಪ್ರಯಾಗ್‌ರಾಜ್‌ನ ಪ್ರಸಿದ್ಧ ಲಲಿತಾ ದೇವಿ ದೇವಸ್ಥಾನದ ಪ್ರಧಾನ ಅರ್ಚಕ ಶಿವ ಮುರತ್ ಮಿಶ್ರಾ ಮಾತನಾಡಿ, ದೇವಸ್ಥಾನದ ಆಡಳಿತ ಮಂಡಳಿ ಸಭೆಯಲ್ಲಿ ದೇವಸ್ಥಾನದಲ್ಲಿ ದೇವಿಗೆ ಸಿಹಿ ಪ್ರಸಾದ ನೀಡುವುದನ್ನು ನಿರ್ಬಂಧಿಸಲು ನಿರ್ಧರಿಸಲಾಗಿದ್ದು, ತೆಂಗಿನಕಾಯಿ, ಹಣ್ಣು, ಡ್ರೈಫ್ರೂಟ್ಸ್, ಏಲಕ್ಕಿಯನ್ನು ಅರ್ಪಿಸಲು ಭಕ್ತರಿಗೆ ಮನವಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ಭಕ್ತರು ಹೊರಗಿನಿಂದ ಸಿಹಿತಿಂಡಿ ಮತ್ತು ಪ್ರಸಾದ ತರುವುದನ್ನು ನಿಷೇಧಿಸಲಾಗಿದೆ ಎಂದು ಯಮುನಾ ಪುರಿ ಮಹಾರಾಜ್ ತಿಳಿಸಿದ್ದಾರೆ.



ಭಿಕ್ಷುಕರ ಕಳುಹಿಸಬೇಡಿ; ಪಾಕಿಸ್ತಾನಕ್ಕೆ ಸೌದಿ ಅರೇಬಿಯಾ ಎಚ್ಚರಿಕೆ




ಇಸ್ಲಾಮಾಬಾದ್: ಉಮ್ರಾ ಮತ್ತು ಹಜ್ ವೀಸಾದಡಿ ಭಿಕ್ಷುಕರನ್ನು ಸೌದಿ ಅರೇಬಿಯಾಕ್ಕೆ ಕಳುಹಿಸಬೇಡಿ ಎಂದು ಪಾಕಿಸ್ತಾನಕ್ಕೆ ಸೌದಿ ಅರೇಬಿಯಾ ಗಂಭೀರ ಎಚ್ಚರಿಕೆ ನೀಡಿದೆ. ಉಮ್ರಾ ಮತ್ತು ಹಜ್ ವೀಸಾದಡಿ ಭಿಕ್ಷುಕರು ಬರುತ್ತಿರುವ ಬಗ್ಗೆ ಗಂಭೀರ ಮತ್ತು ತುರ್ತಾಗಿ ಗಮನ ಹರಿಸುವಂತೆ ಸೌದಿ ಅರೇಬಿಯಾ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಿದೆ. ಇಂಥ ಜನರಿಗೆ ವೀಸಾ ನೀಡದಂತೆ ಹಾಗೂ ಇವರು ಭಿಕ್ಷಾಟನೆಗಾಗಿ ತನ್ನ ದೇಶ ಪ್ರವೇಶಿಸದಂತೆ ತಡೆಯಬೇಕು ಎಂದು ಪಾಕಿಸ್ತಾನದ ಧಾರ್ಮಿಕ ವ್ಯವಹಾರಗಳ ಸಚಿವಾಲಯಕ್ಕೆ ಸೌದಿ ಅರೇಬಿಯಾ ಸೂಚನೆ ನೀಡಿದೆ. ಮುಸ್ಲಿಮರ ಪವಿತ್ರ ಹಜ್ ಯಾತ್ರೆಗೆಂದು ಸೌದಿ ಅರೇಬಿಯಾಗೆ ಬರುವ ಕೆಲ ಪಾಕಿಸ್ತಾನಿಯರು ಅಲ್ಲಿ ಭಿಕ್ಷಾಟನೆ ನಡೆಸುತ್ತಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಈ ಸಂಬಂಧ ದೇಶದಲ್ಲಿ ಭಿಕ್ಷೆ ಬೇಡುತ್ತಿದ್ದ ಹಲವಾರು ಪಾಕಿಸ್ತಾನಿ ಪ್ರಜೆಗಳನ್ನು ಬಂಧಿಸಿದ್ದ ಸೌದಿ ಸರ್ಕಾರ ಅವರನ್ನು ಗಡಿಪಾರು ಮಾಡಿದೆ. ಅಲ್ಲದೆ ಪಾಕಿಸ್ತಾನಕ್ಕೆ ಎಚ್ಚರಿಕೆ ಕೂಡ ನೀಡಿದೆ.


ಇನ್ನು, ಪಾಕಿಸ್ತಾನದ ಭಿಕ್ಷುಕರು ಸೌದಿಯಲ್ಲಿ ಭಿಕ್ಷೆ ಬೇಡುವ ವಿಷಯವು ಶೆಹಬಾಜ್ ಷರೀಫ್ ಸರ್ಕಾರಕ್ಕೆ ತೀರಾ ಮುಜುಗರವನ್ನು ಉಂಟು ಮಾಡಿದೆ.

ಆನೇಕಲ್‌ನಲ್ಲಿ ಶಂಕಿತ ಉಗ್ರನನ್ನು ಬಂಧಿಸಿದ ಎನ್‌ಐಎ ಅಧಿಕಾರಿಗಳು

ಬೆಂಗಳೂರು: ಅಸ್ಸಾಂನ ಗುವಾಹಟಿಯಲ್ಲಿ ಐದು ಕಡೆ ಐಇಡಿ ಬಾಂಬ್ ಇಟ್ಟು ಬೆಂಗಳೂರಿಗೆ ಬಂದು ನೆಲೆಸಿದ್ದ ಶಂಕಿತ ಉಗ್ರನೊಬ್ಬನನ್ನು ನಿನ್ನೆ ಅಸ್ಸಾಂನ ಎನ್‌ಐಎ ಅಧಿಕಾರಿಗಳು ಬಂಧಿಸಿದ್ದಾರೆ. ಆನೇಕಲ್ ತಾಲೂಕಿನ ಜಿಗಣಿಯಲ್ಲಿ ನೆಲೆಸಿದ್ದ ಉಲ್ಫಾ ಸಂಘಟನೆಗೆ ಸೇರಿರುವ ಶಂಕಿತ ಉಗ್ರ ಗಿರೀಶ್ ಬೋರಾ ಅಲಿಯಾಸ್ ಗೌತಮ್ ಎಂಬಾತನನ್ನು ಅಧಿಕಾರಿಗಳು ಬಂಧಿಸಿದ್ದಾರೆ. ಆಗಸ್ಟ್‌ನಲ್ಲಿ ಗುವಾಹಟಿಯಲ್ಲಿಯೇ ಐದು ಐಇಡಿ ಬಾಂಬ್ ಇಟ್ಟು ಕುಟುಂಬ ಸಮೇತ ಬೆಂಗಳೂರಿಗೆ ಬಂದು ವಾಸವಾಗಿದ್ದ. ಜಿಗಣಿಯ ಖಾಸಗಿ ಕಂಪನಿಯೊಂದರಲ್ಲಿ ಗೌತಮ್ ಎನ್ನುವ ಹೆಸರಲ್ಲಿ ಗಿರೀಶ್ ಬೋರಾ ಸೆಕ್ಯೂರಿಟಿ ಕೆಲಸ ಮಾಡುತ್ತಿದ್ದನು. ಗಿರೀಶ್ ಬೋರಾನ ಬಗ್ಗೆ ಪಕ್ಕಾ ಮಾಹಿತಿ ಕಲೆಹಾಕಿದ್ದ ಅಸ್ಸಾಂ ಎನ್‌ಐಎ ತಂಡ ಇದೀಗ ಶಂಕಿತ ಉಗ್ರನನ್ನು ಬಂಧಿಸಿದೆ. ಸದ್ಯ ಶಂಕಿತ ಉಗ್ರನ ಮೊಬೈಲ್ ಮತ್ತು ಒಂದಷ್ಟು ದಾಖಲೆಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ. ಅಲ್ಲದೆ ಸ್ಥಳೀಯ ನ್ಯಾಯಾಲಯಕ್ಕೆ ಹಾಜರುಪಡಿಸಿ, ಇದೀಗ ಆತನನ್ನು ಎನ್‌ಐಎ ಅಧಿಕಾರಿಗಳು ಅಸ್ಸಾಂಗೆ ಕರೆದೊಯ್ದಿದ್ದಾರೆ.



ಪವಿತ್ರ ಸ್ನಾನದ ವೇಳೆ ದುರಂತ, ನೀರಿನಲ್ಲಿ ಮುಳುಗಿ 46 ಮಂದಿ ಸಾವು



ಪಾಟ್ನಾ: ಬಿಹಾರದಲ್ಲಿ ಪವಿತ್ರ ಸ್ನಾನದ ವೇಳೆ ದುರಂತ ಸಂಭವಿಸಿದ್ದು, ನೀರಿನಲ್ಲಿ ಮುಳುಗಿ 46 ಮಂದಿ ಸಾವನ್ನಪ್ಪಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬಿಹಾರದಲ್ಲಿ ನಡೆದ 'ಜೀವಿತ್ ಪುತ್ರಿಕ್' ಹಬ್ಬದ ಸಂದರ್ಭದಲ್ಲಿ ಪ್ರತ್ಯೇಕ ಘಟನೆಗಳಲ್ಲಿ ನದಿಗಳು ಮತ್ತು ಕೊಳಗಳಲ್ಲಿ ಪವಿತ್ರ ಸ್ನಾನ ಮಾಡುವಾಗ 37 ಮಕ್ಕಳು ಸೇರಿದಂತೆ ಒಟ್ಟು 46 ಜನರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದು, ಮೂವರು ನಾಪತ್ತೆಯಾಗಿದ್ದಾರೆ ಎಂದು ಬಿಹಾರ ಸರ್ಕಾರ ಹೇಳಿಕೆಯಲ್ಲಿ ತಿಳಿಸಿದೆ.

ಬುಧವಾರ ನಡೆದ ಉತ್ಸವದಲ್ಲಿ ರಾಜ್ಯದ 15 ಜಿಲ್ಲೆಗಳಲ್ಲಿ ಈ ಘಟನೆಗಳು ಸಂಭವಿಸಿದೆ. ಜಿತಿಯಾ ಪರ್ವ್ ಮೂರು ದಿನಗಳ ಹಿಂದೂ ಹಬ್ಬವಾಗಿದ್ದು, ಹಬ್ಬದ ವೇಳೆ ಮಹಿಳೆಯರು ತಮ್ಮ ಮಕ್ಕಳ ಯೋಗಕ್ಷೇಮಕ್ಕಾಗಿ ಉಪವಾಸ ಮಾಡುತ್ತಾರೆ. ಬಳಿಕ ನದಿ, ಕೊಳ, ಅಥವಾ ಇತರೆ ಜಲ ಮೂಲಗಳಲ್ಲಿ ಸಾಮೂಹಿಕ ಪವಿತ್ರ ಸ್ನಾನ ಮಾಡುತ್ತಾರೆ. ಈ ಪವಿತ್ರ ಸ್ನಾನದ ವೇಳೆ ದುರಂತ ಸಂಭವಿಸಿದೆ. ಮೂಲಗಳ ಪ್ರಕಾರ ಬಿಹಾರದ ಪೂರ್ವ ಚಂಪಾರಣ್, ಪಶ್ಚಿಮ ಚಂಪಾರಣ್, ನಳಂದಾ, ಔರಂಗಾಬಾದ್, ಕೈಮೂರ್, ಬಕ್ಸರ್, ಸಿವಾನ್, ರೋಹ್ತಾಸ್, ಸರನ್, ರಾಜಧಾನಿ ಪಾಟ್ನಾ, ವೈಶಾಲಿ, ಮುಜಾಫರ್‌ಪುರ, ಸಮಸ್ತಿಪುರ್, ಗೋಪಾಲ್‌ಗಂಜ್, ಅರ್ವಾಲ್ ಜಿಲ್ಲೆಗಳಲ್ಲಿ ಸಾವುಗಳು ವರದಿಯಾಗಿವೆ.

ನವೆಂಬರ್‌ನಲ್ಲಿ ಗ್ಯಾರಂಟಿ ಅನುಷ್ಠಾನ ಸಪ್ತಾಹ

ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಡಾ.ಪುಷ್ಪಾ ಅಮರನಾಥ್ ಮಾಹಿತಿ



ಮಡಿಕೇರಿ ಜಿಪಂನಲ್ಲಿ ನಡೆದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಡಾ.ಪುಷ್ಪಾ ಅಮರನಾಥ್ ಮಾತನಾಡಿದರು.

ಮಡಿಕೇರಿ, ಸೆ.26-ಸರ್ಕಾರದ ಪ್ರಮುಖ ಕಾರ್ಯಕ್ರಮಗಳಾದ ಗ್ಯಾರಂಟಿ ಯೋಜನೆಗಳನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮೈಸೂರು ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ನವೆಂಬರ್‌ನಲ್ಲಿ ಗ್ಯಾರಂಟಿ ಅನುಷ್ಠಾನ ಜಾಗೃತಿ ಸಪ್ತಾಹ ಹಮ್ಮಿಕೊಳ್ಳಲಾಗುವುದು ಎಂದು ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಮೈಸೂರು ವಿಭಾಗದ ಉಪಾಧ್ಯಕ್ಷೆ ಡಾ.ಪುಷ್ಪಾ ಅಮರನಾಥ್ ಮಾಹಿತಿ ನೀಡಿದರು.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪಂಚ ಗ್ಯಾರಂಟಿ ಯೋಜನೆಗಳ ಪ್ರಗತಿ ಪರಿಶೀಲನೆ ಸಭೆಯಲ್ಲಿ ಮಾತನಾಡಿದ ಅವರು, ಸರ್ಕಾರ ಗೃಹಲಕ್ಷ್ಮಿ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಹಾಗೂ ಯುವನಿಧಿ ಯೋಜನೆಗಳನ್ನು ಜಾರಿಗೊಳಿಸಿದೆ. ಈ ಯೋಜನೆಗಳಿಂದ ಬಿಪಿಎಲ್ ಕುಟುಂಬದವರು ಯಾವುದೇ ಕಾರಣಕ್ಕೂ ವಂಚಿತರಾಗಬಾರದು. ಅರ್ಹರೆಲ್ಲರಿಗೂ ಗ್ಯಾರಂಟಿ ತಲುಪಬೇಕು. ಶೇ.100ರಷ್ಟು ಪ್ರಗತಿ ಸಾಧಿಸಬೇಕು. ಆ ನಿಟ್ಟಿನಲ್ಲಿ ಗ್ಯಾರಂಟಿ ಅನುಷ್ಠಾನ ಸಪ್ತಾಹ ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಜಾಗೃತಿ ಸಪ್ತಾಹ ಸಂಬಂಧ ರಾಜ್ಯಾಧ್ಯಕ್ಷರ ಗಮನಕ್ಕೆ ತಂದು, ರಾಜ್ಯಾದ್ಯಂತ ಈ ಕಾರ್ಯಕ್ರಮ ಆಯೋಜಿಸಲು ಮುಂದಿನ ದಿನಗಳಲ್ಲಿ ಚಿಂತಿಸಲಾಗುವುದು. ತಾಪಂ ಇಓಗಳು, ಪಿಡಿಓಗಳು ಗ್ರಾಮ ಆಡಳಿತ ಅಧಿಕಾರಿಗಳು, ಅಂಗನವಾಡಿ, ಆಶಾ ಕಾರ್ಯಕರ್ತೆಯರು ಸೇರಿದಂತೆ ಹಲವು ಇಲಾಖೆಗಳ ಜೊತೆಗೂಡಿ ಮನೆ ಮನೆ ಸಮೀಕ್ಷೆ ಮಾಡಿ ಗ್ಯಾರಂಟಿ ಯೋಜನೆಯಿಂದ ಯಾರು ದೂರವಿದ್ದಾರೆ. ಯೋಜನೆ ಇದುವರೆಗೆ ಪಡೆಯದಿರಲು ಕಾರಣವೇನು? ಮತ್ತಿತರ ಮಾಹಿತಿ ಪಡೆಯಬೇಕು. ಜೊತೆಗೆ ಅಗತ್ಯ ದಾಖಲೆ ಇಲ್ಲದಿರುವ ಕುಟುಂಬಗಳಿಗೆ ದಾಖಲೆ ಒದಗಿಸುವ ಮೂಲಕ ಗ್ಯಾರಂಟಿ ಪ್ರಗತಿ ಸಾಧಿಸಬೇಕು ಎಂದು ನಿರ್ದೇಶಿಸಿದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿ, ಜಿಲ್ಲೆಯಲ್ಲಿ ಆದಿವಾಸಿ ಕುಟುಂಬಗಳು ಸರ್ಕಾರದ ಯೋಜನೆ ಪಡೆಯಲು ಪರಿತಪಿಸುತ್ತಿದ್ದಾರೆ. ಆದಿವಾಸಿ ಜನರು ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿದ್ದು, ಅಂತಹ ಕುಟುಂಬಗಳಿಗೆ ಅಗತ್ಯ ದಾಖಲೆ ಒದಗಿಸಿ ಗ್ಯಾರಂಟಿ ಯೋಜನೆ ಕಡ್ಡಾಯವಾಗಿ ತಲುಪಿಸುವಂತಾಗಬೇಕು ಎಂದರು.

ಈ ಸಂದರ್ಭದಲ್ಲಿ ಸಾರ್ವಜನಿಕರೊಬ್ಬರು ಮಾತನಾಡಿ, ದಿಡ್ಡಳ್ಳಿ ಜನರನ್ನು ಸ್ಥಳಾಂತರಿಸಲಾಗಿದ್ದು, ಇವರಿಗೆ ಪಡಿತರ ಚೀಟಿ, ಆಧಾರ್ ಕಾರ್ಡ್, ಆದಾಯ ಹಾಗೂ ಜಾತಿ ಪ್ರಮಾಣ ಪತ್ರ ಇಲ್ಲದೆ ಸರ್ಕಾರದ ಸೌಲಭ್ಯ ಪಡೆಯಲು ಸಾಧ್ಯವಾಗುತ್ತಿಲ್ಲ ಎಂದು ಅಳಲು ತೋಡಿಕೊಂಡರು.

ನಂತರ ಮಾತನಾಡಿದ ಐಟಿಡಿಪಿ ಇಲಾಖಾ ಅಧಿಕಾರಿ ಹೊನ್ನೇಗೌಡ ಆದಿವಾಸಿ ಜೇನುಕುರುಬ, ಕಾಡುಕುರುಬ, ಬೆಟ್ಟಕುರುಬ, ಸೋಲಿಗ, ಯರವ ಮತ್ತಿತರ ಆದಿವಾಸಿ ಜನರಿಗೆ ಅಗತ್ಯ ದಾಖಲಾತಿ ಕಲ್ಪಿಸುವ ನಿಟ್ಟಿನಲ್ಲಿ ದಾಖಲಾತಿ ಆಂದೋಲನ ಹಮ್ಮಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಸೆಸ್ಕ್ ಇಇ ಅನಿತಾ ಬಾಯಿ, ಆಹಾರ ಇಲಾಖೆ ಜಂಟಿ ನಿರ್ದೇಶಕಿ ಕುಮುದಾ ಶರತ್, ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕದ ವ್ಯವಸ್ಥಾಪಕ ಮಹಮದ್ ಅಲಿ, ನಟರಾಜು, ರೇಖಾ ಗಣಪತಿ, ಗ್ಯಾರಂಟಿ ಯೋಜನೆಯ ಪ್ರಮುಖರಾದ ಪ್ರಶಾಂತ್, ಶರಿ ಗಿರೀಶ, ಕೆ.ಸಿ. ಭೀಮಯ್ಯ, ನಾಸೀರ್, ಅಣ್ಣಯ್ಯ, ಕೆ.ಎಂ. ಬಸೀರ್, ಮುಸ್ತಫ, ಧನ್ಯ, ಕೆ.ಜಿ.ಪೀಟರ್, ಕಾಂತರಾಜು, ಮಂದ್ರೀರ ಮೋಹನ್ ದಾಸ್, ಜಾನ್ಸನ್ ಅಮು ಹಲವು ವಿಚಾರ ಪ್ರಸ್ತಾಪಿಸಿದರು.

> ನವೆಂಬರ್ ಮೊದಲ ವಾರದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಂಬಂಧ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡು, ನಂತರ ಸಪ್ತಾಹ ಹಮ್ಮಿಕೊಳ್ಳಬೇಕು. ಈ ಕಾರ್ಯಕ್ರಮದಲ್ಲಿ ಎಲ್ಲಾ ಹಂತದ ಇಲಾಖಾ ಅಧಿಕಾರಿಗಳು ಪಾಲ್ಗೊಂಡು ಕಾರ್ಯಕ್ರಮ ಯಶಸ್ಸಿಗೆ ಸಹಕರಿಸಬೇಕು.
>
> -ಡಾ.ಪುಷ್ಪಾ ಅಮರನಾಥ್, ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಮೈಸೂರು ವಿಭಾಗದ ಉಪಾಧ್ಯಕ್ಷೆ.

2 ವರ್ಷದಿಂದ ತಲೆ ಮರೆಸಿಕೊಂಡಿದ್ದ ಕೊಲೆ ಆರೋಪಿ ಬಂಧನ



ರಾಜೇಶ್

ಮಡಿಕೇರಿ: ಆಸ್ತಿ ವಿವಾದ ಸಂಬಂಧ ಟಿ.ಶೆಟ್ಟಿಗೇರಿ ಗ್ರಾಮದಲ್ಲಿ 2022ರಲ್ಲಿ ಮಹಿಳೆ ಕೊಲೆ ಮಾಡಿ, 2 ವರ್ಷಗಳಿಂದ ತಲೆಮರೆಸಿಕೊಂಡಿದ್ದ ಆರೋಪಿಯನ್ನು ಶ್ರೀಮಂಗಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಟಿ.ಶೆಟ್ಟಿಗೇರಿ ನಿವಾಸಿ ರಾಜೇಶ್ (42) ಬಂಧಿತ ಆರೋಪಿ. ವಿಶೇಷ ತನಿಖಾ ತಂಡ ಕಾರ್ಯಾಚರಣೆ ನಡೆಸಿ, ಸೆ.25ರಂದು ದಕ್ಷಿಣಕನ್ನಡ ಜಿಲ್ಲೆಯ ಪುತ್ತೂರು ಸಮೀಪದ ಕುಂಬ್ರ ಎಂಬ ಆರೋಪಿಯನ್ನು ಬಂಧಿಸಿದೆ.

ಟಿ.ಶೆಟ್ಟಿಗೇರಿ ಗ್ರಾಮದ ನಿವಾಸಿ ಪ್ರೇಮಾ ಹಾಗೂ ಅವರ ಸಹೋದರಿ ವೀಣಾ ಅವರು 2022ರ ಫೆ.6ರಂದು ಸಂಜೆ 5 ಗಂಟೆಯಲ್ಲಿ ಪೊನ್ನಂಪೇಟೆ ಕೊಡವ ಸಮಾಜದಲ್ಲಿ ಮದುವೆ ಮುಗಿಸಿ ಮನೆಗೆ ಹಿಂದಿರುಗುವಾಗ ರಸ್ತೆಯಲ್ಲಿ ಪ್ರೇಮಾ ಹಾಗೂ ವೀಣಾ ಅವರ ಮೇಲೆ ಹರಿತವಾದ ಆಯುಧದಿಂದ ತಲೆ ಹಾಗೂ ಕುತ್ತಿಗೆ ಹಲ್ಲೆ ನಡೆಸಲಾಗಿತ್ತು. ಘಟನೆಯಲ್ಲಿ ಪ್ರೇಮಾ ಸ್ಥಳದಲ್ಲೇ ಮೃತಪಟ್ಟರೆ, ವೀಣಾಗೆ ಗಂಭೀರ ಗಾಯಗಳಾಗಿದವು. ಈ ಕುರಿತು ಶ್ರೀಮಂಗಲ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿತ್ತು.

ನಂತರ ಪೊಲೀಸರು ವೀಣಾ ಅವರಿಂದ ಘಟನೆ ಕುರಿತು ವಿವರಣೆ ಪಡೆದಾಗ ಮೃತ ಪ್ರೇಮಾ ಅವರ ಪತಿ ಸೋಮಶೇಖರ್ ಅವರ ಅಕ್ಕನ ಮಗ ರಾಜೇಶ್ ಆಸ್ತಿ ವಿಚಾರಕ್ಕಾಗಿ ಕೊಲೆ ಮಾಡಿರುವುದು ಪತ್ತೆಯಾಗಿತ್ತು.

ತಲೆಮರೆಸಿಕೊಂಡಿದ್ದ ಆರೋಪಿ ರಾಜೇಶ್ ಪತ್ತೆಗಾಗಿ ವಿರಾಜಪೇಟೆ ಡಿವೈಎಸ್‌ಪಿ ಮೋಹನ್ ಕುಮಾರ್, ಕುಟ್ಟ ಠಾಣಾಧಿಕಾರಿ ಸಿ.ಎ.ಮಂಜಪ್ಪ ಶ್ರೀಮಂಗಲ ಠಾಣಾಧಿಕಾರಿಗಳಾದ ರವೀಂದ್ರ, ಪ್ರಮೋದ್, ಮಹದೇವಸ್ವಾಮಿ, ಪೊನ್ನಂಪೇಟೆ ಠಾಣೆ ಸಿಬ್ಬಂದಿ ವಿಶೇಷ ತಂಡ ರಚಿಸಿ ತನಿಖೆ ಕೈಗೊಳ್ಳಲಾಗಿತ್ತು. ಆರೋಪಿ ಪತ್ತೆಗಾಗಿ ಸತತ 2 ವರ್ಷಗಳಿಂದ ವಿಶೇಷ ತನಿಖಾ ತಂಡ ಕಾರ್ಯಾಚರಣೆ ನಡೆಸುತ್ತಿತ್ತು. ಈ ನಡುವೆ ಆರೋಪಿ ಪುತ್ತೂರು ಸಮೀಪದ ಕುಂಬ್ರದಲ್ಲಿ ಪತ್ತೆ ಹಚ್ಚಿ ಬಂಧಿಸಲಾಗಿದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್ ತಿಳಿಸಿದ್ದಾರೆ.

ಚೌಟಿಮಾರಿಯಮ್ಮ ವಾರ್ಷಿಕೋತ್ಸವ ಪೂಜೆ



ಕುಂದುರುಮೊಟ್ಟೆ ಚೌಟಿಮಾರಿಯಮ್ಮ ದೇವಾಲಯದಲ್ಲಿ ವಾರ್ಷಿಕೋತ್ಸವ ಪೂಜೆ ನೆರವೇರಿಸಲಾಯಿತು.

ಮಡಿಕೇರಿ, ಸೆ.26-ನಗರದ ನಾಲ್ಕು ಶಕ್ತಿ ದೇವತೆಗಳಲ್ಲಿ ಒಂದಾದ ಕುಂದುರುಮೊಟ್ಟೆ ಶ್ರೀ ಚೌಟಿಮಾರಿಯಮ್ಮ ದೇವಾಲಯದ ಪುನರ್ ಪ್ರತಿಷ್ಠಾಪನೆ 21ನೇ ವಾರ್ಷಿಕೋತ್ಸವ ಗುರುವಾರ ಭಕ್ತಿಯಿಂದ ಜರುಗಿತು.

ವಾರ್ಷಿಕೋತ್ಸವ ಪ್ರಯುಕ್ತ ಗುರು ಗಣಪತಿ ಪೂಜೆ, ಪುಣ್ಯಾಹ, ಸಂಕಲ್ಪ, ಕಳಶ ಸ್ಥಾಪನೆ, ದೀಪಾರಾಧನೆ, ಅಷ್ಠಾವಧಾನ ಸೇವೆ ಹಾಗೂ ತೀರ್ಥ ಪ್ರಸಾದ ವಿತರಿಸಲಾಯಿತು. ನಂತರ ಅನ್ನದಾನ ನಡೆಯಿತು. ಇದೇ ವೇಳೆ ದೇವಾಲಯವನ್ನು ಹೂಗಳಿಂದ ಅಲಂಕರಿಸಲಾಗಿತ್ತು.

ಸೆ.30ರಿಂದ ಭೂ ಪರಿವರ್ತನೆ ವಿರೋಧಿಸಿ ಜನಜಾಗೃತಿ

ಮಡಿಕೇರಿ: ಬೃಹತ್ ಭೂ ಪರಿವರ್ತನೆ ಮತ್ತು ಭೂ ವಿಲೇವಾರಿ ವಿರೋಧಿಸಿ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ಸೆ.30ರಂದು ಶ್ರೀಮಂಗಲ, ಅ.5ರಂದು ತಿತಿಮತಿ ಮತ್ತು ಅ.9ರಂದು ಅಮ್ಮತ್ತಿಯಲ್ಲಿ ಶಾಂತಿಯುತ ಜನಜಾಗೃತಿ ಮಾನವ ಸರಪಳಿ ಕಾರ್ಯಕ್ರಮ ನಡೆಯಲಿದೆ ಎಂದು ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ತಿಳಿಸಿದ್ದಾರೆ.

ಗ್ರಾಮ ಆಡಳಿತಾಧಿಕಾರಿಗಳ ಪ್ರತಿಭಟನೆ

ಮಡಿಕೇರಿ, ಸೆ.26-ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಕೊಡಗು ಜಿಲ್ಲಾ ಘಟಕ ನಗರದಲ್ಲಿ ಗುರುವಾರ ಪ್ರತಿಭಟನೆ ನಡೆಸಿತು.

ಜಿಲ್ಲಾಧಿಕಾರಿ ಕಚೇರಿ ಎದುರು ಕಪ್ಪು ಪಟ್ಟಿ ಧರಿಸಿ ಘೋಷಣೆ ಕೂಗಿದ ಪ್ರತಿಭಟನಾಕಾರರು, ಇಲಾಖೆಯಿಂದ ಅಭಿವೃದ್ಧಿಪಡಿಸಲಾಗಿರುವ 17 ಅಧಿಕ ತಂತ್ರಾಂಶಗಳ ಮೊಬೈಲ್, ಲ್ಯಾಪ್‌ಟಾಪ್, ಇಂಟರ್ನೆಟ್ ಹಾಗೂ ಕಾರ್ಯನಿರ್ವಹಣೆಗೆ ಅಗತ್ಯವಿರುವ ಸೌಲಭ್ಯಗಳನ್ನು ನೀಡಬೇಕು. ಇವುಗಳನ್ನು ಸಮರ್ಪಕವಾಗಿ ನೀಡದೆ ಕರ್ತವ್ಯದ ಮೇಲೆ ಒತ್ತಡ ಹೇರುತ್ತಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮೂಲ ಸೌಲಭ್ಯ, ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಸೂಕ್ತ ವ್ಯವಸ್ಥೆ ನೀಡಬೇಕು, ಗ್ರಾಮ ಸಹಾಯಕರಿಗೆ ಸೇವಾ ಭದ್ರತೆ ಸೇರಿದಂತೆ ವಿವಿಧ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿದರು. ಸರ್ಕಾರ ಬೇಡಿಕೆಗಳಿಗೆ ಸೂಕ್ತ ರೀತಿ ಸ್ಪಂದಿಸದ ಕಾರಣ ಕರ್ತವ್ಯ ಸ್ಥಗಿತಗೊಳಿಸಿ ಪ್ರತಿಭಟನೆ ಮುಂದುವರಿಸುವುದಾಗಿ ಎಚ್ಚರಿಸಿದರು. ನಂತರ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಗ್ರಾಮ ಆಡಳಿತಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷೆ ಅಕ್ಷತಾ ಬಿ.ಶೆಟ್ಟಿ, ಉಪಾಧ್ಯಕ್ಷ ಹರೀಶ್ ಕುಮಾರ್, ಪ್ರಧಾನ ಕಾರ್ಯದರ್ಶಿ ಸಂತೋಷ್ ಪಾಟೀಲ್, ಗೌರವಾಧ್ಯಕ್ಷ ಗೋಪಿನಾಥ್, ಖಜಾಂಚಿ ರವಿಚಂದ್ರ ಮಡಿಕೇರಿ ತಾಲೂಕು ಅಧ್ಯಕ್ಷ ಸಂದೀಪ್ ಶೆಣೈ, ವಿರಾಜಪೇಟೆ ಕೃಷ್ಣ, ಪೊನ್ನಂಪೇಟೆ ನಿತಿನ್, ಕುಶಾಲನಗರ ಗುರುದರ್ಶನ್, ಸೋಮವಾರಪೇಟೆ ಸಂತೋಷ್, ಕೊಡಗು ಜಿಲ್ಲಾ ಗ್ರಾಮ ಸಹಾಯಕರ ಸಂಘದ ಅಧ್ಯಕ್ಷ ಸುರೇಶ್, ಉಪಾಧ್ಯಕ್ಷ ಜನಾರ್ಧನ, ತಾಲೂಕು ಅಧ್ಯಕ್ಷ ಪ್ರಸಾದ್ ಪೂಜಾರಿ, ಲೋಕೇಶ್, ನಾಗರಾಜ್, ಸುರೇಶ್, ಜನಾರ್ಧನ, ಆಡಳಿತ ಅಧಿಕಾರಿಗಳು ಪಾಲ್ಗೊಂಡಿದ್ದರು.



ಮಡಿಕೇರಿ ಜಿಲ್ಲಾಧಿಕಾರಿ ಕಚೇರಿ ಎದುರು ರಾಜ್ಯ ಗ್ರಾಮ ಆಡಳಿತ ಅಧಿಕಾರಿಗಳ ಸಂಘದಿಂದ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಲಾಯಿತು.

ಗುಂಡಿಕೆರೆಯಲ್ಲಿ ಆರೋಗ್ಯ ತಪಾಸಣೆ



ಗುಂಡಿಕೆರೆ ಮದ್ರಸಾ ಸಭಾಂಗಣದಲ್ಲಿ ಆರೋಗ್ಯ ತಪಾಸಣೆ ನಡೆಸಲಾಯಿತು.

ವಿರಾಜಪೇಟೆ: ಸಮೀಪದ ಗುಂಡಿಕೆರೆ ಶಾಫಿ ಜಮಾಅತ್ ಮದ್ರಸಾ ಸಭಾಂಗಣದಲ್ಲಿ ವಿರಾಜಪೇಟೆ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ಅಮ್ಮತ್ತಿ ಆರ್‌ಐಹೆಚ್‌ಪಿ ಆಸ್ಪತ್ರೆ ಹಾಗೂ ಕೆದಮುಳ್ಳೂರು ಗ್ರಾಪಂ ವತಿಯಿಂದ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು.

ಶಿಬಿರದಲ್ಲಿ ಆರ್‌ಐಹೆಚ್‌ಪಿ ಆಸ್ಪತ್ರೆ ಸ್ತ್ರೀರೋಗ ತಜ್ಞೆ ಡಾ.ಎಸ್.ನಿಶ್ಚಲ, ಮಕ್ಕಳ ತಜ್ಞ ಡಾ.ಕೃಷ್ಣ ಪ್ರಸಾದ್, ಆಡಳಿತಾಧಿಕಾರಿ ಡಾ.ಶುಭಾ ಅವರು ಆರೋಗ್ಯ ತಪಾಸಣೆ ಮಾಡಿದರು. ಹೆಚ್ಚಿನ ಗ್ರಾಮಸ್ಥರು ಹಾಗೂ ಸಾರ್ವಜನಿಕರು ಪಾಲ್ಗೊಂಡಿದ್ದರು. ಅಮ್ಮತ್ತಿ ಆರ್‌ಐಹೆಚ್‌ಪಿ ಆಸ್ಪತ್ರೆ ಮುಖ್ಯ ವೈದ್ಯಾಧಿಕಾರಿ ಚಂದ್ರು ಮಾತನಾಡಿ, ವ್ಯಾಯಾಮ ಹಾಗೂ ಮಿತ ಆಹಾರ ಸೇವನೆಯಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಬಹುದು. ಇತ್ತೀಚಿನ ದಿನಗಳಲ್ಲಿ ಅನಾರೋಗ್ಯಗಳು ಹೆಚ್ಚುತ್ತಿರುವುದರಿಂದ ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಬೇಕು ಎಂದರು.

ಕೆದಮುಳ್ಳೂರು ಗ್ರಾಪಂ ಸದಸ್ಯ ಮಾಳೇಟಿರ ಪ್ರಶಾಂತ್ ಉತ್ತಪ್ಪ ಮಾತನಾಡಿ, ಹಿಂದಿನ ಕಾಲದಲ್ಲಿ ರಾಸಾಯನಿಕ ರಹಿತ ಆಹಾರ ಸೇವನೆ ಹಾಗೂ ಕೃಷಿ ಕೆಲಸ ಮಾಡಿಕೊಂಡು ಆರೋಗ್ಯ ಕಾಪಾಡಿಕೊಳ್ಳುತ್ತಿದ್ದರು. ಇತ್ತೀಚೆಗೆ ತಂತ್ರಜ್ಞಾನ ಹೆಚ್ಚಾಗುತ್ತಿದ್ದಂತೆ ರೋಗಗಳು ಹೆಚ್ಚುತ್ತಿವೆ ಎಂದರು.

ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ರೆಜಿತ್ ಕುಮಾರ್ ಗುಹ್ಯ, ಗ್ರಾಪಂ ಅಧ್ಯಕ್ಷ ಮಾಳೇಟಿರ ಜಪ್ಪಿ ಉತ್ತಪ್ಪ ಮಾತನಾಡಿದರು. ಸದಸ್ಯರಾದ ಎಂ.ಎಂ. ಇಸ್ಮಾಯಿಲ್, ಹೆಚ್.ಆರ್.ವನಿತಾ, ಮುಖ್ಯ ಶಿಕ್ಷಕಿ ಸೀತಾ, ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘದ ಉಪಾಧ್ಯಕ್ಷ ಪುತ್ತಂ ಪ್ರದೀಪ್, ಸದಸ್ಯರು ಇದ್ದರು.

ನಿಟ್ರೆಯಲ್ಲಿ ವಿಜೃಂಭಣೆಯ ಪಾರ್ವತಾಂಬೆ ಜಾತ್ರೆ



ನಿಟ್ರೆ ಗ್ರಾಮದ ಪಾರ್ವತಾಂಬೆ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಿತು.

ಬೇಗೂರು, ಸೆ.26-ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ನಿಟ್ರೆ ಗ್ರಾಮದ ಪಾರ್ವತಾಂಬೆ ಜಾತ್ರಾ ಮಹೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ವಾದ್ಯ ಮೇಳ, ನಂದಿಕಂಬ, ಛತ್ರಿ, ಚಾಮರ, ತಮಟೆ, ಡೋಲು ಕುಣಿತ, ನಗಾರಿ, ಬಿರುದುಗಳು ಮುಂದೆ ಸಾಗಿದರೆ, ಅಲಂಕೃತಗೊಂಡ ತೇರಿನ ಮುಂದೆ ಭಕ್ತರು ಜೈಕಾರ ಹಾಕಿ ಮೆರವಣಿಗೆಯಲ್ಲಿ ಸಾಗಿದರು. ದೇಶಿಪುರ ಅರಣ್ಯದ ಮೂಲದೇವತೆಗೆ ಪೂಜೆ ಸಲ್ಲಿಸಿ, ಗ್ರಾಮಕ್ಕೆ ಆಗಮಿಸಿದ ನಂತರ ಹರಕೆ ಹೊತ್ತ ಭಕ್ತರ ಬಾಯಿಬೀಗ ಮೆರವಣಿಗೆ ಪಾರ್ವತಾಂಬೆ ದೇವಾಲಯದವರೆಗೆ ನಡೆಯಿತು. ದೇವಿಯ ಉತ್ಸವ ಮೂರ್ತಿ ಮತ್ತು ರಥವನ್ನು ಬಸರಿ ಮರದ ಆವರಣಕ್ಕೆ ಎಳೆದು ತಂದು ತೀರ್ಥದಿಂದ ಶುದ್ಧಿಕರಿಸಲಾಯಿತು. ವಿದ್ಯುತ್ ದೀಪ, ಹೂ ಮತ್ತು ವಿವಿಧ ಹಣ್ಣುಗಳಿಂದ ಅಲಂಕರಿಸಿ, ಪೂಜೆ ಸಲ್ಲಿಸಿದ ನಂತರ ಜಾತ್ರೆಗೆ ಚಾಲನೆ ನೀಡಲಾಯಿತು.

ಜಾತ್ರಾ ಮಹೋತ್ಸವ ಅಂಗವಾಗಿ ಗ್ರಾಮದ ಗಣಪತಿ, ಲಕ್ಷ್ಮಿದೇವಿ, ಮಲ್ಲಿಕಾರ್ಜುನಸ್ವಾಮಿ ದೇವಾಲಯಗಳಲ್ಲಿ ವಿಶೇಷ ಪೂಜೆ ನಡೆದವು. ಸುತ್ತಮುತ್ತಲ ಗ್ರಾಮಸ್ಥರು ರಥೋತ್ಸವ ಸ್ಥಳಕ್ಕೆ ಜಾನುವಾರುಗಳನ್ನು ಕರೆತಂದು ಪಂಜಿನ ಸೇವೆ ನಡೆಸಿ, ಜಾನುವಾರುಗಳಿಗೆ ಯಾವುದೇ ರೋಗ ಬಾರದಿರಲಿ ಎಂದು ಪ್ರಾರ್ಥಿಸಿದರು.

ಸೇವಂತಿಗೆಯನ್ನು ಹರಕೆಯ ಹೂವೆಂದು ರಥಕ್ಕೆ ಹೆಚ್ಚಾಗಿ ಅರ್ಪಿಸುವುದರಿಂದ ಇಡೀ ರಥ ಸೇವಂತಿಗೆ ಹೂವಿನಿಂದ ಕಂಗೊಳಿಸುತ್ತಿತ್ತು. ಸಾವಿರಾರು ಸೇಬಿನ ಹಾರ ಮತ್ತು ಚಿನ್ನದ ತಾಳಿಯನ್ನು ರಥಕ್ಕೆ ಭಕ್ತರು ಅರ್ಪಿಸಿದರು.

ಅ.1ಕ್ಕೆ 657 ಫಲಾನುಭವಿಗಳಿಗೆ ಸಲಕರಣೆ ವಿತರಣೆ

ಕಾರ್ಯಕ್ರಮ ಸಿದ್ಧತೆಗೆ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅಧಿಕಾರಿಗಳಿಗೆ ಸೂಚನೆ



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಮಾತನಾಡಿದರು.

ಚಾಮರಾಜನಗರ, ಸೆ.26-ಜಿಲ್ಲೆಯ ವಿಕಲಚೇತನರು ಹಾಗೂ ಹಿರಿಯ ನಾಗರಿಕರಿಗೆ ಅ.1ರಂದು ನಗರದಲ್ಲಿ ಉಚಿತ ಸಾಧನ ಸಲಕರಣೆ ವಿತರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಕಾರ್ಯಕ್ರಮಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಗುರುವಾರ ಅಲಿಂಕೋ ಶಿಬಿರದಲ್ಲಿ ಆಯ್ಕೆಯಾಗಿರುವ ಫಲಾನುಭವಿಗಳಿಗೆ ಉಚಿತ ಸಾಧನ ಸಲಕರಣೆ ವಿತರಣೆ ಸಂಬಂಧ ವಿವಿಧ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ನಡೆದ ಪೂರ್ವಭಾವಿ ಸಭೆಯಲ್ಲಿ ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ಅಲಿಂಕೋ ಸಂಸ್ಥೆ ರಾಷ್ಟ್ರೀಯ ವಯೋಶ್ರೀ ಯೋಜನೆ (ಆರ್‌ವಿವೈ) ಹಾಗೂ ವಿಶೇಷ ಚೇತನರಿಗೆ ಸಹಾಯ (ಎಡಿಐಪಿ) ಯೋಜನೆಯಡಿ ಜೂನ್‌ನಲ್ಲಿ ಆರೋಗ್ಯ ಶಿಬಿರ ಏರ್ಪಡಿಸಲಾಗಿತ್ತು. ಶಿಬಿರದಲ್ಲಿ ಆಯ್ಕೆಯಾದ ಫಲಾನುಭವಿಗಳಿಗೆ ಅ.1ರಂದು ನಗರದ ಅಂಬೇಡ್ಕರ್ ಭವನದಲ್ಲಿ ಸಾಧನ ಸಲಕರಣೆಗಳನ್ನು ಉಚಿತವಾಗಿ ವಿತರಿಸಲಾಗುವುದು ಎಂದು ತಿಳಿಸಿದರು.

ಈಗಾಗಲೇ 417 ವಿಶೇಷ ಚೇತನರು ಹಾಗೂ 240 ಹಿರಿಯ ನಾಗರಿಕರು ಸೇರಿದಂತೆ ಒಟ್ಟು 657 ಫಲಾನುಭವಿಗಳಿಗೆ ಸಾಧನ ಸಲಕರಣೆ ವಿತರಿಸಲಾಗುವುದು. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ವತಿಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.

ಫಲಾನುಭವಿಗಳನ್ನು ಕಾರ್ಯಕ್ರಮಕ್ಕೆ ಕರೆತರುವ ಹಾಗೂ ಬಳಿಕ ವಾಪಸ್ ಕಳುಹಿಸುವ ವ್ಯವಸ್ಥೆಯಲ್ಲಿ ಯಾವುದೇ ಗೊಂದಲ ಹಾಗೂ ಲೋಪಗಳಾಗದಂತೆ ಎಚ್ಚರ ವಹಿಸಬೇಕು. ಕಾರ್ಯಕ್ರಮ ಸ್ಥಳದಲ್ಲಿ ಕುಡಿಯುವ ನೀರು, ಶೌಚಾಲಯ ಹಾಗೂ ಸ್ವಚ್ಛತೆ ವ್ಯವಸ್ಥೆಗಳು ಸಮರ್ಪಕವಾಗಿರುವಂತೆ ನೋಡಿಕೊಳ್ಳಬೇಕು ಎಂದು ನಗರಸಭೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಸಭೆಯಲ್ಲಿ ವಿಕಲಚೇತನರು ಹಾಗೂ ಹಿರಿಯ ನಾಗರಿಕ ಕಲ್ಯಾಣಾಧಿಕಾರಿ ಸಕಲೇಶ್ವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ ಮಂಜುನಾಥ್, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಅಲಿಂಕೋ ಸಂಸ್ಥೆಯ ಕಿರಿಯ ವ್ಯವಸ್ಥಾಪಕ ರಿಷಬ್ ಮಲ್ಹೋತ್ರ, ಜಿಲ್ಲಾ ಪಂಚಾಯಿತಿ ಸಹಾಯಕ ಕಾರ್ಯದರ್ಶಿ ಶ್ರೀಕಂಠರಾಜೇ ಅರಸ್, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿ ಪೂರ್ಣಿಮಾ, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕಾಮಗಾರಿ ಪರಿಶೀಲಿಸಿದ ಶಾಸಕ ಪುಟ್ಟರಂಗಶೆಟ್ಟಿ



ನಗರಸಭೆ ವ್ಯಾಪ್ತಿಯ ಅಭಿವೃದ್ಧಿ ಕಾಮಗಾರಿಗಳನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಇಂಜಿನಿಯರ್‌ಗಳೊಂದಿಗೆ ಪರಿಶೀಲಿಸಿದರು.

ಚಾಮರಾಜನಗರ, ಸೆ.26-ನಗರಸಭೆ ವ್ಯಾಪ್ತಿ ನಡೆಯುತ್ತಿರುವ ನಗರೋತ್ಥಾನ ಯೋಜನೆಯಡಿ 4ನೇ ಹಂತದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಶಾಸಕ ಸಿ.ಪುಟ್ಟರಂಗಶೆಟ್ಟಿ ಇಂಜಿನಿಯರ್‌ಗಳೊಂದಿಗೆ ಪರಿಶೀಲಿಸಿದರು.

ಮೊದಲಿಗೆ ನಗರಸಭೆ 17ನೇ ವಾರ್ಡ್‌ನಲ್ಲಿ ನಡೆಯುತ್ತಿರುವ 50 ಲಕ್ಷ ರೂ. ವೆಚ್ಚದ ರಸ್ತೆ, ಚರಂಡಿ ಕಾಮಗಾರಿ ವೀಕ್ಷಿಸಿದರು. ನಂತರ 24 ಮತ್ತು 25ನೇ ವಾರ್ಡ್‌ನಲ್ಲಿ 1.50 ಕೋಟಿ ರೂ. ವೆಚ್ಚದ ರಸ್ತೆ, ಚರಂಡಿ, ಸೇತುವೆ ಕಾಮಗಾರಿ ಪರಿಶೀಲಿಸಿದರು. ಇದೇ ವೇಳೆ ಮಾತನಾಡಿದ ಶಾಸಕರು, ನಗರದ ನಿವಾಸಿಗಳ ಸಂಚಾರಕ್ಕೆ ಉತ್ತಮ ರಸ್ತೆ ಇರಲಿಲ್ಲ. ಇದನ್ನು ಮನಗಂಡು ನಗರೋತ್ಥಾನ ಯೋಜನೆಯ 4ನೇ ಹಂತದ ಅನುದಾನದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ. ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು. ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಬೇಕು ಎಂದು ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ನಗರಸಭೆ ಮಾಜಿ ಸದಸ್ಯ ಮಹದೇವು, ಎಇಇ ನಟರಾಜು ಹಾಜರಿದ್ದರು.

ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ ಇಬ್ಬರ ಬಂಧನ

ಚಾಮರಾಜನಗರ, ಸೆ.26-ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದ ಇಬ್ಬರನ್ನು ಬಂಧಿಸಿರುವ ಮಲೆಮಹದೇಶ್ವರಬೆಟ್ಟ ಠಾಣೆ ಪೊಲೀಸರು, ಮದ್ಯದ ಬಾಟಲ್ ಹಾಗೂ ಸ್ಕೂಟರ್ ಅನ್ನು ವಶಪಡಿಸಿಕೊಂಡಿದ್ದಾರೆ.

ಮಹದೇಶ್ವರಬೆಟ್ಟ-ತಾಳಬೆಟ್ಟ ಮುಖ್ಯ ರಸ್ತೆಯ ಆನೆತಲೆದಿಂಬದ ಬಳಿ ಇಬ್ಬರು ಅಕ್ರಮವಾಗಿ ಮದ್ಯ ಸಾಗಿಸುತ್ತಿದ್ದರು. ಈ ವೇಳೆ ಇನ್ಸ್‌ಪೆಕ್ಟರ್ ಜಗದೀಶ್ ಮಾರ್ಗದರ್ಶನದಲ್ಲಿ ದಾಳಿ ನಡೆಸಿದ ಸಬ್‌ಇನ್ಸ್‌ಪೆಕ್ಟರ್ ಬಸವರಾಜ ಎಸ್.ಉಪ್ಪಲದಿನ್ನಿ ಹಾಗೂ ಸಿಬ್ಬಂದಿ 1840 ರೂ. ಮೌಲ್ಯದ ಮದ್ಯ ಹಾಗೂ ಸ್ಕೂಟರ್ ಅನ್ನು ವಶಪಡಿಸಿಕೊಂಡಿದ್ದಾರೆ.

ಲಾಟರಿ ಮಾರುತ್ತಿದ್ದ ಇಬ್ಬರ ಬಂಧನ: ಲಾಟರಿ ಮಾರುತ್ತಿದ್ದ ಇಬ್ಬರನ್ನು ಬಂಧಿಸಿರುವ ರಾಮಾಪುರ ಠಾಣೆ ಪೊಲೀಸರು, 3 ಮೊಬೈಲ್ ಮತ್ತು 11,370 ರೂ. ವಶಪಡಿಸಿಕೊಂಡಿದ್ದಾರೆ. ಬುಧವಾರ ಇಬ್ಬರು ರಾಮಾಪುರ-ಕೌದಳ್ಳಿ ಗ್ರಾಮದ ಮುಖ್ಯ ರಸ್ತೆಯ ಚಿಕ್ಕಾಲತ್ತೂರು ಬಸ್ ನಿಲ್ದಾಣದ ಬಳಿ ಆನ್‌ಲೈನ್ ಮೂಲಕ ಲಾಟರಿ ಟಿಕೆಟ್ ಮಾರುತ್ತಿದ್ದರು. ಈ ವೇಳೆ ದಾಳಿ ನಡೆಸಿದ ರಾಮಾಪುರ ಪೊಲೀಸ್ ಠಾಣೆ ಆರಕ್ಷಕ ಉಪನಿರೀಕ್ಷಕ ಎಂ.ಎನ್.ಈಶ್ವರ್ ಹಾಗೂ ಸಿಬ್ಬಂದಿ ಆರೋಪಿಗಳನ್ನು ಬಂಧಿಸಿದರು.

ಪಿಕಾರ್ಡ್‌ನಿಂದ ಶೇ.73ರಷ್ಟು ಸಾಲ ವಸೂಲಿ



ಗುಂಡ್ಲುಪೇಟೆ ಪಿಕಾರ್ಡ್ ಬ್ಯಾಂಕ್‌ನ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷ ಎಸ್.ಬಸವಣ್ಣ ಉದ್ಘಾಟಿಸಿದರು.

ಗುಂಡ್ಲುಪೇಟೆ, ಸೆ.26- ರೈತರಿಗೆ ನೀಡಿದ ಬೆಳೆಸಾಲ ಸೇರಿದಂತೆ ಇತರೆ ಸಾಲಗಳ ಶೇ.73ರಷ್ಟು ವಸೂಲಾತಿ ಮೂಲಕ ಚಾಮರಾಜನಗರ ಜಿಲ್ಲೆಯಲ್ಲೇ ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ (ಪಿಕಾರ್ಡ್) ಎರಡನೇ ಸ್ಥಾನದಲ್ಲಿದೆ ಎಂದು ಬ್ಯಾಂಕ್ ಅಧ್ಯಕ್ಷ ಎಸ್.ಬಸವಣ್ಣ ಹೇಳಿದರು.

ಪಟ್ಟಣದ ಸಿಎಂಎಸ್ ಕಲಾಮಂದಿರದಲ್ಲಿ ನಡೆದ ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್‌ನ 2023-2024ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ ಹಲವಾರು ವರ್ಷಗಳಿಂದ ರೈತರೊಂದಿಗೆ ಉತ್ತಮ ಒಡನಾಟ ಇಟ್ಟುಕೊಂಡು ಕೃಷಿಕರಿಗೆ ಬೆಳೆ, ಕೃಷಿ ಪರಿಕರಗಳ ಖರೀದಿಸಲು ಸಾಲ ನೀಡಲಾಗುತ್ತಿದೆ. ಈ ಮೂಲಕ ಉತ್ತಮ ವಹಿವಾಟು ನಡೆಸುತ್ತಿದೆ ಎಂದರು.

ಸಕಾಲದಲ್ಲಿ ಸಾಲ ಪಡೆದವರು ಮರುಪಾವತಿ ಮಾಡಿದಾಗ ಮಾತ್ರ ಬ್ಯಾಂಕಿನ ಸರ್ವತೋಮುಖ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ರೈತರಿಗೆ ಸಾಲ ವಿತರಿಸಲು ಗುರಿ ಹೊಂದಲಾಗಿದೆ ಎಂದು ಹೇಳಿದರು. ಸಭೆಯಲ್ಲಿ ಬ್ಯಾಂಕ್‌ನ ವ್ಯವಸ್ಥಾಪಕ ಎಂ.ಅನಂದ್, ಆಡಳಿತ ಮಂಡಳಿ ಸದಸ್ಯರು ಹಾಗೂ ಸಿಬ್ಬಂದಿ ಹಾಜರಿದ್ದರು.

ಇಂದಿನಿಂದ ಏಳು ದಿನ ಸಾಂಸ್ಕೃತಿಕ ಕಾರ್ಯಕ್ರಮ



ಚಾಮರಾಜನಗರ, ಸೆ.26- ನಗರದ ರಥಬೀದಿಯ ಶ್ರೀ ವಿದ್ಯಾಗಣಪತಿ ಮಂಡಳಿ 62ನೇ ವರ್ಷದ ವಿದ್ಯಾಗಣಪತಿ ಪೂಜಾ ಮಹೋತ್ಸವ ಅಂಗವಾಗಿ ಸೆ.27ರಿಂದ ಏಳು ದಿನಗಳ ಕಾಲ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಿದೆ.

ಶುಕ್ರವಾರ ಸಂಜೆ 6.30ಕ್ಕೆ ಅಯೋಧ್ಯೆ ಶ್ರೀ ರಾಮಚಂದ್ರ ಪ್ರಭು ವೇದಿಕೆಯಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮವನ್ನು ಮೂಡುಗೂರು ವಿರಕ್ತ ಮಠಾಧ್ಯಕ್ಷರಾದ ಶ್ರೀ ಇಮ್ಮಡಿ ಉದ್ದಾನ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಹಿಂದು ಜಾಗರಣಾ ವೇದಿಕೆಯ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯಕಾರಣಿ ಸದಸ್ಯ ಕೆ.ಪಿ.ಉಲ್ಲಾಸ್ ಗಣೋತ್ಸವ ಕುರಿತು ಮಾತನಾಡಲಿದ್ದಾರೆ. ನಂತರ ಚರಿತಾ ಎನ್.ನಾಯಕ್ ತಂಡದಿಂದ ಭರತನಾಟ್ಯ ಪ್ರದರ್ಶನ ಹಾಗೂ ಚಾ.ನಗರದ ಕದಳಿ ಮಹಿಳಾ ವೇದಿಕೆಯಿಂದ ಭಜನಾ ಕಾರ್ಯಕ್ರಮ ನಡೆಯಲಿದೆ ಎಂದು ಮಂಡಳಿ ಅಧ್ಯಕ್ಷ ಸುಂದರ್‌ರಾಜ್, ಪ್ರಧಾನ ಕಾರ್ಯದರ್ಶಿಗಳಾದ ವಿರಾಟ್ ಶಿವು, ಮಹೇಶ್ ತಿಳಿಸಿದ್ದಾರೆ.



'ಭೈರಾದೇವಿ' ಚಿತ್ರದಲ್ಲಿ ರಾಧಿಕಾ ಕುಮಾರಸ್ವಾಮಿ

ಭೈರಾದೇವಿ ನನ್ನ ಸಿನಿಮಾ ಭವಿಷ್ಯ ನಿರ್ಧರಿಸುತ್ತದೆ: ರಾಧಿಕಾ ಕುಮಾರಸ್ವಾಮಿ

ಅ.3ರಂದು ಬಿಡುಗಡೆಯಾಗುತ್ತಿರುವ ಭೈರಾದೇವಿ ಚಿತ್ರದ ಟ್ರೇಲರ್ ಲಾಂಚ್ ಸಂದರ್ಭದಲ್ಲಿ ಚಿತ್ರದ ನಿರ್ಮಾಪಕಿಯೂ ಆದ ರಾಧಿಕಾ ಕುಮಾರಸ್ವಾಮಿ ಸ್ವಲ್ಪ ಭಾವುಕರಾಗೇ ಮಾತನಾಡಿದ್ದಾರೆ. ಹೆಣ್ಣು ಅಘೋರಿಯ ಕಥೆ ಇರುವ ಈ ಚಿತ್ರದ ಪಾತ್ರ ಮಾಡುವಾಗ ಅವರು ಸಾಕಷ್ಟು ತೊಂದರೆಗಳನ್ನು ಎದುರಿಸಿದ್ದಾರೆ, ಸಿನಿಮಾ ಆರಂಭಿಸಿದಾಗಿನಿಂದ ತುಂಬಾ ಅಡೆತಡೆಗಳಾಗಿದೆ. ಹಾಗಾಗಿ ಈ ಚಿತ್ರದ ಬಿಡುಗಡೆ ಯೋಚನೆ ಮಾಡಿರಲಿಲ್ಲ. ತಿಂಗಳ ಹಿಂದೆ ವಿಮಾನ ನಿಲ್ದಾಣದಲ್ಲಿ ಸಿಕ್ಕ ಗಂಡ ಹೆಂಡತಿ ಹೇಳಿದ ಮಾತೊಂದರ ಸ್ಫೂರ್ತಿಯಿಂದ ತಿಂಗಳೊಳಗೆ ಬಿಡುಗಡೆ ಮಾಡಬೇಕೆಂದು ಅಣ್ಣನಿಗೆ ಹೇಳಿದೆ. ಭೈರಾದೇವಿ ಚಿತ್ರ ಪ್ರೇಕ್ಷಕರಿಗೆ ಇಷ್ಟವಾದರೆ, ಮುಂದೆ ನಾನು ಇನ್ನೊಂದು ಸಿನಿಮಾ ಮಾಡುತ್ತೇನೆ. ಇಷ್ಟವಾಗಲಿಲ್ಲ ಅಂದರೆ, ಚಿತ್ರರಂಗದಿಂದ ದೂರ ಆಗಿಬಿಡುತ್ತೇನೆ. ಚಿತ್ರ ದೊಡ್ಡಮಟ್ಟದಲ್ಲಿ ಯಶಸ್ಸಾಗುತ್ತದೆ ಎಂಬ ನಂಬಿಕೆ ನನಗಿದೆ ಎಂಬ ಭರವಸೆ ವ್ಯಕ್ತಪಡಿಸಿದ್ದಾರೆ.

ರಮೇಶ್ ಅರವಿಂದ್ ಅವರು ಈ ಚಿತ್ರದಲ್ಲಿ ಖಡಕ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿದ್ದಾರೆ, ಅವರು ಮಾತನಾಡಿ, ಇದರಲ್ಲಿ ನನ್ನ ವೈರಿಗಳು ಈ ರಾಜ್ಯದವರಲ್ಲ, ಈ ದೇಶದವರಲ್ಲ, ಈ ಲೋಕದವರಂತೂ ಅಲ್ಲವೇ ಅಲ್ಲ. ಬೇರೆ ಲೋಕದಿಂದ ಬಂದ ಒಂದು ಶಕ್ತಿಯ ವಿರುದ್ಧ ನಾನಿಲ್ಲಿ ಹೋರಾಡಬೇಕಾಗಿತ್ತು, ಈ ಟ್ರೇಲರ್ ನೋಡಿದಾಗ, ನನಗೆ ಆಪ್ತಮಿತ್ರ ಸಿನಿಮಾ ನೆನಪಾಯಿತು. ರಾಧಿಕಾ ಕುಮಾರಸ್ವಾಮಿ ಅವರು ಕಾಳಿಯ ಪಾತ್ರದಲ್ಲಿ ಮನೋಜ್ಞವಾಗಿ ಅಭಿನಯಿಸಿದ್ದಾರೆ, ಆಗ ಅವರೊಂದಿಗೆ ಮಾತನಾಡಲಿಕ್ಕೆ ನಮಗೆಲ್ಲ ಭಯವಾಗುತ್ತಿತ್ತು ಎಂದು ಹೇಳಿದರು. ಭೈರಾದೇವಿ ಚಿತ್ರಕ್ಕೆ ಶ್ರೀಜೈ ಕಥೆ ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳಿದ್ದಾರೆ. ಮತ್ತೊಬ್ಬ ನಟಿ ಅನು ಪ್ರಭಾಕರ್ ಚಿತ್ರದ ಮತ್ತೊಂದು ಮುಖ್ಯ ಪಾತ್ರದಲ್ಲಿದ್ದಾರೆ. ನಾನೀಗ ನನ್ನ ಸಿನಿಜರ್ನಿಯ ರಜತ ಮಹೋತ್ಸವ ಆಚರಿಸುತ್ತಿದ್ದೇನೆ. ಮೊದಲ ಚಿತ್ರದಲ್ಲೂ ರಮೇಶ್ ಜೊತೆ ಅಭಿನಯಿಸಿದ್ದೆ. ಈಗ ಈ ಚಿತ್ರದಲ್ಲೂ ಅವರ ಜೊತೆ ನಟಿಸಿದ್ದೇನೆ ಎಂದು ಹೇಳಿದರು.



'ಸಂಜು' ಚಿತ್ರದಲ್ಲಿ ಮನ್ವಿತ್, ಸಾತ್ವಿಕ

ಮಂಜಿನ ಮರೆಯಲಿ 'ಸಂಜು' ಬದುಕಿನ ಕಥೆ

ಪ್ರೀತಿ, ಪ್ರೇಮದ ಕಥೆಗಳಿಗೆ ಕೊನೆಯೆಂಬುದಿಲ್ಲ... ಭಾವನಾತ್ಮಕ ಸಂಬಂಧಗಳಿಗೆ ಎಂದೂ ಸಾವಿಲ್ಲ... ಎಂದರಿತಿರುವ ನಿರ್ದೇಶಕ ಯತಿರಾಜ್, ಸಂಜು ಚಿತ್ರದ ಮೂಲಕ ಈ ಎಲ್ಲಾ ಅಂಶಗಳನ್ನು ಒಂದೇ ಫ್ರೇಮ್‌ನಲ್ಲಿ ತರಲು ಪ್ರಯತ್ನಿಸಿದ್ದಾರೆ. ಈ ಸುಂದರ ದೃಶ್ಯಕಾವ್ಯ ಇಂದಿನಿಂದ ತೆರೆಮೇಲೆ ಮೂಡಿಬರಲಿದೆ. ಪತ್ರಕರ್ತರೂ ಆದ ಯತಿರಾಜ್ ತಮ್ಮೆಲ್ಲ ಅನುಭವವನ್ನು ಒಟ್ಟುಗೂಡಿಸಿ ಒಂದೊಳ್ಳೆ ಪ್ರೇಮಕಥೆಗೆ ಸಿನಿಮಾರೂಪ ನೀಡಿದ್ದಾರೆ. ಮೈಸೂರಿನ ಸಂತೋಷ್ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಟೀನೇಜಿನಲ್ಲಿ ಬಹಳಷ್ಟು ಏರಿಳಿತಗಳು, ಸೋಲು, ಹತಾಶೆ ಅವಮಾನ ಘಟಿಸುತ್ತವೆ. ಕೆಲವರು ಅದನ್ನು ಸುಲಭವಾಗಿ ಮೆಟ್ಟಿ ಮುಂದೆ ಸಾಗುತ್ತಾರೆ. ಇನ್ನೂ ಕೆಲವರು ಅಂಜಿ ಎದೆಗುಂದುತ್ತಾರೆ. ಅಂಥ 2 ಪ್ರಸಂಗಗಳನ್ನು ಪ್ರೀತಿಯ ಚೌಕಟ್ಟಿನಲ್ಲಿ ಹೇಳಿದ್ದೇನೆ. ನನ್ನ ಸಿನಿಮಾನ ಎಲ್ಲರೂ ಮೆಚ್ಚುತ್ತಾರೆಂದು ನಾನು ಹೇಳಲಾರೆ. ಆದರೆ, ಬದುಕನ್ನು ಮತ್ತು ಸಂಬಂಧಗಳನ್ನು ಆಳದ ದೃಷ್ಟಿಯಿಂದ ನೋಡುವವರು ಖಂಡಿತ ಅಪ್ಪಿಕೊಳ್ಳುತ್ತಾರೆ ಎನ್ನುವ ನಂಬಿಕೆಯಿದೆ ಎನ್ನುವುದು ಯತಿರಾಜ್ ವಿಶ್ವಾಸ.


ಸಂಜು ಚಿತ್ರದ ಹೈಲೈಟ್ ಅಂದರೆ ಸುಂದರ ಲೊಕೇಷನ್. ಮಡಿಕೇರಿಯ ಮೂರ್ನಾಡುವಿನಲ್ಲಿ ಹಾಕಲಾಗಿದ್ದ ಬಸ್‌ಸ್ಟಾಪ್ ಸೆಟ್, ನಾಯಕಿಯ ಮನೆ, ನಾಯಕನ ಮನೆ ಮತ್ತು ಅಲ್ಲಿನ ಪರಿಸರ ಚಿತ್ರಕ್ಕೆ ಮೆರುಗು ತಂದುಕೊಟ್ಟಿದೆ. ನಾಯಕಿ ಸಾತ್ವಿಕ ಅವರದು ಅವಾರ್ಡ್ ಗಳಿಸುವಂಥ ಸೂಕ್ಷ್ಮ ಅಭಿನಯ. ನಾಯಕ ಮನ್ವಿತ್ ಕೂಡ ಪಾತ್ರಕ್ಕೆ ಜೀವ ತುಂಬಿದ್ದಾರೆ ಎಂದು ಹೇಳಿದರು. ವಿದ್ಯಾ ನಾಗೇಶ್ ಅವರ ಛಾಯಾಗ್ರಹಣ, ವಿಜಯ್ ಹರಿತ್ಸ ಅವರ ಸಂಗೀತ ಚಿತ್ರಕ್ಕೆ ಬೇರೆಯದೇ ಆಯಾಮ ತಂದುಕೊಟ್ಟಿದೆ ಎಂದು ಹೇಳಿದ್ದಾರೆ. ಮಸಾಲಾ ಸಿನಿಮಾಗಳ ನಡುವೆ ಮನಸಿಗೆ ಮುದ ನೀಡುವ ಪ್ರೇಮಕಥೆಯುಳ್ಳ ಸಂಜು ಚಿತ್ರವನ್ನು ಕನ್ನಡ ಪ್ರೇಕ್ಷಕ ಹೇಗೆ ಸ್ವೀಕರಿಸುತ್ತಾನೆ ಎಂಬುದನ್ನು ಕಾದು ನೋಡಬೇಕಿದೆ.

ಸಿನಿಪದಬಂಧ-544



ಉಮ್ಮತ್ತೂರು ಇಂದುಶೇಖರ್

ಮೊ.9880820462



ಹೆಸರು ______

ವಿಳಾಸ ______

ದೂರವಾಣಿ ಸಂಖ್ಯೆ ______

ಎಡದಿಂದ ಬಲಕ್ಕೆ

1.ಮುಯ್ಯಿಗೆ ಮುಯ್ಯಿ ಎನ್ನುವರ್ಥದ ಚಿತ್ರವಿದು	4
3.ಅರ್ಜುನ್ ಸರ್ಜಾ – ಖುಷ್ಬುವಿನ ಪ್ರೀತಿಯ ಜ್ವಾಲೆ !	3
5.ಮನದ ನಡುವೆ ಆದಿತ್ಯ ಮನ್ಮಥನಾಗಿದ್ದಾನೆ	3
6.ವಿಷ್ಣುವರ್ಧನ್ ಶ್ರೀಮಂತ	4
7.ಪುನೀತ್ ಅರಸನಾಗಿ ಮೆರೆದ ಚಿತ್ರ	5
8.ಇರುಳಿನಲ್ಲಿ ಕಾಣಿಸಿಕೊಂಡ ನಟಿ	3
10.ಕಿಚ್ಚ ಸುದೀಪ್ ಬೆಲೆಬಾಳುವ ವ್ಯಕ್ತಿ !	3
11.ಗಿರೀಶ್ ಕಾರ್ನಾಡ್ ನಾಟಕಕ್ಕೂ ಸಂಚಾರಿ ವಿಜಯ್ ಚಿತ್ರಕ್ಕೂ ಏನೀ ಸಂಬಂಧ!	4
13.ಹೋರಿಯ ಮೇಲೆ ಕಣ್ಣಿಟ್ಟವಳ ನಡುವೆ ನಟಿಯೊಬ್ಬಳು ಪ್ರತ್ಯಕ್ಷ!	3
14.ಹೆಸರಿನ ಮಧ್ಯದಲ್ಲಿ ಆಂಗ್ಲದ ದಾರಿಯಲ್ಲಿ ಸಾಗಿದ ಕಾದಂಬರಿಗಾರ್ತಿ	3
15.ಹರೀಶ್ ರಾಜ್ ಹಿಡಿದ ಇಂಗ್ಲೀಷಿನ ಬಂದೂಕು	2
16.ರಾಜ್, ಆಳ್ವ, ಪ್ರಭಾಕರ್ ಹೆಸರಿನ ಹಿಂದೆ ಇರುವುದು	3
17.ನೀನು ನಕ್ಕರೆ ಹಾಲು _ _ _	3

ಮೇಲಿನಿಂದ ಕೆಳಕ್ಕೆ

1.ರಾಜ್ ಕುಮಾರ್ = ಆರತಿ ಅಭಿನಯಕ್ಕೆ ದೊರೆ ಭಗವಾನ್ ನಿರ್ದೇಶಕರು	4
2.ಪ್ರಭಾಕರ್ ಅರಣ್ಯದ ಅರಸ	5
3.ಎಸ್. ಕೆ. ಎ. ಚಾರಿ ನಿರ್ದೇಶನದಲ್ಲಿ ರಾಜ್ ಕುಮಾರ್–ಭಾರತಿ ಅಭಿನಯವಿದೆ	4
4.ಶಬ್ಧವೇದಿ ಚಿತ್ರದ ಹಾಡೊಂದರಲ್ಲಿ ಭಾರತದ ಪ್ರೀತಿಯ ಭೂಶಿರ	5
5.ವಿಷ್ಣುವರ್ಧನ್, ಆರತಿ, ದ್ವಾರಕೀಶ್, ಜೈಜಗದೀಶ್ ಅಭಿನಯದ ಚಿತ್ರ	10
7."ತುಪ್ಪ ಬೇಕಾ ತುಪ್ಪ.... ", ಹಾಡಿನ ನಟಿ	6
9."ಓ ಮಗು ನೀ ನಗು ಅಳದಿರು ಎಂದಿಗೂ...", ಗೀತೆಯ ಚಿತ್ರ	4
12.ಕಳ್ಳರ ಕಳ್ಳ ಕೃಷ್ಣ ಕದ್ದ ಹೆಣ್ಣಿನ ಉಡುಪು	5

ಸಿನಿ ಪದಬಂಧ 543ರ ಉತ್ತರ

ವಿ	ಶ್ವ	ರೂ	ಪ			ವೀ	ರ	ಸಂ	ಕ	ಲ್ಪ
ಷ		ಪ		ಮ	ಯೂ	ರ		ಸಾ		
ಕ		ಗಂ		ಧು		ಬಾ	ಗೀ	ರ	ಥಿ	
ನ್ಯೆ		ಗೂ		ರ		ಹು		ನೌ		
	ಹಾ	ಲಿ	ನ	ಮ	ಳೆ			ಕಿ	ಸ	ರು
	ಡು			ಧು			ಶಾಂ			
ಕುಂ	ಬಾ	ರ		ರ	ಘು	ಪ	ತಿ		ಶಂ	
	ಕೋ			ವೀ			ಕೃ	ಷಿ	ಕ	
ನಾ	ಗಿ	ಣಿ		ಮಂ		ಕೃ	ಷ್ಣ		ರ್	
	ಲೆ		ಮಂ	ಜು	ಳ				ಗು	
				ಳ			ವೈ	ಸೂ	ರು	

ವಿಜೇತರು: ಐಶ್ವರ್ಯರವಿ ಕಲಬುರಗಿ C/o ಸಿದ್ದರಾಜು, ನಂ. 10-ಎ, ಆಲನಹಳ್ಳಿ, ಮೈಸೂರು-570028

ವಿಳಾಸ: 'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು–570 015

ಬಾಬಾ ಸನ್ನಿಧಿಯಲ್ಲಿ 'ತಾಯಿನೇ ದೇವರ?' ಮತ್ತೆ ಪೊಲೀಸ್ ವರ್ದಿ ತೊಟ್ಟ ಮಾಲಾಶ್ರೀ



ಹೆತ್ತ ತಾಯಿಯನ್ನು ದೇವರಿಗೆ ಹೋಲಿಸುತ್ತಾರೆ. ಇಂಥ ತಾಯಿ–ಮಗನ ಕಥೆ ಇಟ್ಟುಕೊಂಡು 'ತಾಯಿನೇ ದೇವರ?' ಎಂಬ ಚಿತ್ರವೊಂದು ನಿರ್ಮಾಣವಾಗುತ್ತಿದೆ, ಬೆಂಗಳೂರಿನ ಶಿರಡಿ ಶ್ರೀಸಾಯಿ ಮಂದಿರದಲ್ಲಿ ಈ ಚಿತ್ರದ ಚಿತ್ರೀಕರಣಕ್ಕೆ ಚಾಲನೆ ನೀಡಲಾಯಿತು.

ಚಿತ್ರದ ಕಥೆಗಾರ, ನಿರ್ಮಾಪಕ ಡಾ. ಸಾಯಿ ಸತೀಶ್ ತೋಟಯ್ಯ ಮಾತನಾಡಿ, ಮನೆಯಲ್ಲಿ ವಾಸ್ತವವಾಗಿ ಎಲ್ಲರ ಮನೆಗಳಲ್ಲಿ ಏನು ನಡೆಯುತ್ತದೆಯೋ ಅದನ್ನೇ ಇಟ್ಟುಕೊಂಡು ಈ ಕಥೆ ಬರೆದಿದ್ದೇನೆ. ನಿರ್ದೇಶಕರಿಗೆ ಒಳ್ಳೇ ಪ್ರತಿಭೆ ಇದೆ. ಹಾಗಾಗಿ ಅವರಿಗೆ ಅವಕಾಶ ಕೊಡುತ್ತಿದ್ದೇನೆ. ಮೂವರು ತಾಯಂದಿರ ಹಾಗೂ ಮಕ್ಕಳ ಸುತ್ತ ನಡೆಯುವ ಕಥೆ ಈ ಚಿತ್ರದಲ್ಲಿದೆ. ಹಿರಿಯ ನಟಿ ಭವ್ಯ ಪ್ರಮುಖ ಪಾತ್ರದಲ್ಲಿ ನಟಿಸುತ್ತಿದ್ದಾರೆ. ನಟಿ ಮಾಲಾಶ್ರೀ ಅವರು ಒಬ್ಬ ಪವರ್‌ಫುಲ್ ಪೊಲೀಸ್ ಅಧಿಕಾರಿಯಾಗಿ ನಟಿಸುತ್ತಿದ್ದಾರೆ. ಮಾಜಿ ಸಚಿವ ಹೆಚ್.ಎಂ. ರೇವಣ್ಣ ತಮ್ಮನ ಮಗಳು ಅನ್ವಿತಾಮೂರ್ತಿ ನಾಯಕಿಯರಲ್ಲೊಬ್ಬರು ಎಂದು ವಿವರಿಸಿದರು.

ತಾಯಿನೇ ದೇವರು ಅಂತ ಯಾಕೆ ಹೇಳುತ್ತಾರೆ ಅಂತ ಚಿತ್ರದಲ್ಲಿ ಹೇಳಲಿಕ್ಕೆ ಹೊರಟಿದ್ದೇವೆ. ಚಿತ್ರದಲ್ಲಿ ಮೂವರು ನಾಯಕ, ನಾಯಕಿಯರಿದ್ದಾರೆ. ದೊಡ್ಡಣ್ಣ, ಡಿಂಗ್ರಿ ನಾಗರಾಜ್, ಹೊನ್ನವಳ್ಳಿ ಕೃಷ್ಣ, ಬಲ ರಾಜ್‌ವಾಡಿ, ಸ್ವಾತಿ ಗುರುದತ್, ರೇಖಾದಾಸ್, ಅಪೂರ್ವ, ಜೀವಿತ ಪ್ರಕಾಶ್, ಗಿಚ್ಚಿ ಗಿಲಿಗಿಲಿ ಶಿವು ಮತ್ತು ರಾಘವೇಂದ್ರ ಅಭಿನಯಿಸುತ್ತಿದ್ದಾರೆ. ಚಿತ್ರದಲ್ಲಿ ನಾಲ್ಕು ಹಾಡುಗಳಿದ್ದು, ಬೆಂಗಳೂರು, ಮಂಗಳೂರು, ಚಿಕ್ಕಮಗಳೂರು ಸುತ್ತಮುತ್ತ ಚಿತ್ರೀಕರಿಸಲು ಯೋಜನೆ ಹಾಕಲಾಗಿದೆ ಎಂದು ನಿರ್ದೇಶಕ ಅಭಿಮಾನ್.ಹೆಚ್. ಕಾಗಿನಲ್ಲಿ ಹೇಳಿದರು. ನಟಿ ಮಾಲಾಶ್ರೀ ಮಾತನಾಡಿ, ನಾನು ಇಷ್ಟು ವರ್ಷ ಪೊಲೀಸ್ ಆಫೀಸರ್ ಆಗಿ ವಿಲನ್‌ಗಳೊಂದಿಗೆ ಸೆಣಸಾಡುತ್ತಿದ್ದೆ. ಆದರೆ ಈ ಚಿತ್ರದಲ್ಲಿ ಮಹಿಳೆಯರೊಂದಿಗೇ ಹೆಚ್ಚಾಗಿ ನನ್ನ ಪಾತ್ರ ಬರಲಿದೆ. ಹೃದಯ ಹಾಡಿತು, ಸೋಲಿಲ್ಲದ ಸರದಾರ ಚಿತ್ರಗಳ ನಂತರ ಭವ್ಯ ಅವರೊಂದಿಗೆ ತೆರೆ ಹಂಚಿಕೊಳ್ಳುತ್ತಿರುವುದು ಹಳೆ ನೆನಪುಗಳನ್ನು ಮರುಕಳಿಸಿದೆ ಎಂದು ಹೇಳಿದರು.

ಗೋಪಿಲೋಲ ನೈಸರ್ಗಿಕ ಕೃಷಿ ಆಧಾರಿತ ಕಥೆ

'ಗೋಪಿಲೋಲ' ಚಿತ್ರದಲ್ಲಿ ಮಂಜುನಾಥ ಅರಸ್, ನಿಮಿಷ



ರೈತ ನಮ್ಮ ದೇಶದ ಬೆನ್ನೆಲುಬು, ರೈತರ ಬದುಕು, ಬವಣೆ ಕುರಿತಂತೆ ಸಾಕಷ್ಟು ಚಿತ್ರಗಳು ನಿರ್ಮಾಣವಾಗಿವೆ. ಇದೀಗ ನೈಸರ್ಗಿಕ ಕೃಷಿಯ ಪ್ರಾಮುಖ್ಯತೆಯ ಜೊತೆಗೆ ಪ್ರೇಮಕಥೆಯೊಂದು ಬೆಸೆದುಕೊಂಡಿರುವ ಚಿತ್ರ ಗೋಪಿಲೋಲ ಬಿಡುಗಡೆ ಹಂತದಲ್ಲಿದೆ. ಆರ್.ರವೀಂದ್ರ ಈ ಚಿತ್ರಕ್ಕೆ ಆಕ್ಷನ್ ಕಟ್ ಹೇಳಿದ್ದಾರೆ. ಅ.4ಕ್ಕೆ ತೆರೆಗೆ ಬರಲಿರುವ ಈ ಚಿತ್ರದ ಟ್ರೇಲರ್ ಇತ್ತೀಚೆಗೆ ರಿಲೀಸಾಯಿತು, ಎಸ್.ಆರ್. ಸನತ್‌ಕುಮಾರ್ ಕಥೆ ಬರೆದು ನಿರ್ಮಾಣ ಮಾಡಿರೋ ಈ ಚಿತ್ರಕ್ಕೆ ಮಂಜುನಾಥ್ ಅರಸು ಸಹ ನಿರ್ಮಾಣದ ಜೊತೆಗೆ ಪ್ರಮುಖ ಪಾತ್ರದಲ್ಲೂ ನಟಿಸಿದ್ದಾರೆ. ನಿಮಿಷ ಚಿತ್ರದ ನಾಯಕಿಯಾಗಿ ಅಭಿನಯಿಸಿದ್ದಾರೆ. ನಿರ್ಮಾಪಕ ಸನತ್‌ಕುಮಾರ್ ಮಾತನಾಡುತ್ತ, ರೈತರ ಬದುಕಿನ ಬಗ್ಗೆ, ಅವರ ಕೃಷಿ ಕಾರ್ಯಕ್ಕೆ ಸಂಬಂಧಿಸಿದಂತೆ ಒಂದಷ್ಟು ಅಂಶಗಳನ್ನು ನಮ್ಮ ಚಿತ್ರದ ಮೂಲಕ ಹೇಳಹೊರಟಿದ್ದೇವೆ, ನಮ್ಮದು ಕೃಷಿಕ ಕುಟುಂಬ. ನೈಸರ್ಗಿಕ ಕೃಷಿ ಹಾಗೂ ಅದರ ಸಾಧಕ ಬಾಧಕಗಳ ಬಗ್ಗೆ ನಮ್ಮ ಚಿತ್ರ ಹೇಳುತ್ತದೆ, ಮಿಥುನ್ ಅಶೋಕನ್ ಚಿತ್ರದ 6 ಹಾಡುಗಳಿಗೆ ಮ್ಯೂಸಿಕ್ ಮಾಡಿದ್ದಾರೆ ಎಂದು ಹೇಳಿದರು. ನಿರ್ದೇಶಕ ಆರ್.ರವೀಂದ್ರ ಮಾತನಾಡುತ್ತ, ಗೋಪಿಲೋಲ ನೈಸರ್ಗಿಕ ಕೃಷಿಯ ಮಹತ್ವ ಹೇಳುವ ಜೊತೆಗೆ ಸುಂದರ ಪ್ರೇಮಕಥೆ ಇರುವ ಚಿತ್ರ. ಜನರಿಗೆ ಒಂದೊಳ್ಳೆ ಸಂದೇಶ ಕೂಡ ಚಿತ್ರದಲ್ಲಿದೆ ಎಂದು ಹೇಳಿದರು. ಚಿತ್ರದ ನಾಯಕ ಮಂಜುನಾಥ್ ಅರಸ್ ಮಾತನಾಡಿ, ಮೆಸೇಜ್ ಜೊತೆಗೆ ಚಿತ್ರದಲ್ಲಿ ಆಕ್ಷನ್, ಲವ್, ಸಸ್ಪೆನ್ಸ್‌ನಂಥ ಎಂಟರ್‌ಟೈನಿಂಗ್ ಅಂಶಗಳೂ ಇವೆ, ಎಲ್ಲಕ್ಕಿಂತ ಹೆಚ್ಚಾಗಿ ಒಳ್ಳೆಯ ಕಂಟೆಂಟ್ ಇದ್ದು, ಅದೇ ಚಿತ್ರದ ಹೀರೋ ಎಂದು ಹೇಳಿದರು. ನಾಯಕಿ ನಿಮಿಷ, ಹಿರಿಯನಟಿ ಪದ್ಮಾ ವಾಸಂತಿ, ನಟ ಕೆಂಪೇಗೌಡ ಗೋಪಿಲೋಲ ಚಿತ್ರದ ಕುರಿತಂತೆ ಮಾತನಾಡಿದರು.

ಮೈಸೂರು ಮಿತ್ರ ಶುಕ್ರವಾರ 27 ಸೆಪ್ಟೆಂಬರ್ 2024

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಗ್ರಾಮ ಆಡಳಿತ ಅಧಿಕಾರಿಗಳ(ವಿಎ) ಸಂಘದ ಪದಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ನಂಜನಗೂಡು, ಸೆ.26– ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ತಾಂತ್ರಿಕ ಹುದ್ದೆಗೆ ನೀಡುವ ವೇತನ ಶ್ರೇಣಿ ನಿಗದಿಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಗ್ರಾಮ ಆಡಳಿತ ಅಧಿಕಾರಿಗಳ(ವಿಎ) ಸಂಘದ ಪದಾಧಿಕಾರಿಗಳು ಗುರುವಾರ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಿದರು.

ನಗರದ ತಾಲೂಕು ಕಚೇರಿ ಎದುರು ಜಮಾಯಿಸಿದ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ಪದಾಧಿಕಾರಿಗಳು, ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಂಘದ ತಾಲೂಕು ಅಧ್ಯಕ್ಷ ನಿಂಗಯ್ಯ ಮಾತನಾಡಿ, ಗ್ರಾಮ ಆಡಳಿತ ಅಧಿಕಾರಿಗಳು ನಿರ್ವಹಿಸುವ ಕೆಲಸಗಳು ತಾಂತ್ರಿಕ ಹುದ್ದೆಗಳಿಗಿಂತ 10 ಪಟ್ಟು ಹೆಚ್ಚಾಗಿದ್ದು, ಮೊಬೈಲ್ ಆ್ಯಪ್‌ಗಳ ಮೂಲಕ ನಿರ್ವಹಿಸುವ ಎಲ್ಲಾ ಕೆಲಸಗಳು ತಾಂತ್ರಿಕ ಹುದ್ದೆಗೆ ಸಮಾನವಾಗಿವೆ. ಆದರೆ ನಮ್ಮನ್ನು 7ನೇ ವೇತನ ಆಯೋಗದಲ್ಲಿ ತಾಂತ್ರಿಕ ಹುದ್ದೆಯಿಂದ ಕೈ ಬಿಡಲಾಗಿದೆ. ಜೊತೆಗೆ ಗ್ರಾಮ ಆಡಳಿತ ಅಧಿಕಾರಿಗಳಿಗೆ ಸುಸಜ್ಜಿತ ಕಚೇರಿಗಳಾಗಲೀ, ಗುಣಮಟ್ಟದ ಮೊಬೈಲ್, ಟೇಬಲ್, ಕುರ್ಚಿ, ಪ್ರಿಂಟರ್, ಸ್ಕ್ಯಾನರ್ ಸೇರಿದಂತೆ ಮೂಲಸೌಕರ್ಯಗಳನ್ನು ಒದಗಿಸುತ್ತಿಲ್ಲ. ಇನ್ನು ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಸರ್ಕಾರಿ ರಜಾ ದಿನಗಳಲ್ಲೂ ಕೂಡ ಕರ್ತವ್ಯಕ್ಕೆ ಹಾಜರಾಗುವಂತೆ ಮೆಮೋ ಹಾಕಲಾಗುತ್ತದೆ. ಅಲ್ಲದೆ ವಂಶವೃಕ್ಷ, ಜಾತಿ ಪ್ರಮಾಣ ಪತ್ರ, ಇತರೆ ಪ್ರಮಾಣ ಪತ್ರಗಳ ವಿತರಣೆಯಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಗ್ರಾಮ ಆಡಳಿತ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸಿ ಎಫ್‌ಐಆರ್ ದಾಖಲಾಗುವಂತೆ ಮಾಡುತ್ತಾರೆ. ಬಹಳಷ್ಟು ಒತ್ತಡದ ನಡುವೆ ಕೆಲಸ ನಿರ್ವಹಿಸುವ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಯನ್ನು ಮೇಲ್ದರ್ಜೆಗೇರಿಸಿ ತಾಂತ್ರಿಕ ಹುದ್ದೆಗೆ ನೀಡುವ ವೇತನ ಶ್ರೇಣಿ ನಿಗದಿಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುತ್ತಿದ್ದು, ನಮ್ಮ ಬೇಡಿಕೆ ಈಡೇರುವವರೆಗೂ ಸಹ ಎಲ್ಲಾ ಮೊಬೈಲ್ ಆ್ಯಪ್ ಹಾಗೂ ವೆಬ್ ಅಪ್ಲಿಕೇಶನ್ ಅನ್ನು ಸ್ಥಗಿತಗೊಳಿಸಿ ಹೋರಾಟ ನಡೆಸಲಾಗುವುದು ಎಂದರು.

ವಿಎ ಪ್ರೀತಂ ಮಾತನಾಡಿ, ಪದೋನ್ನತಿ ವಿಷಯಗಳಲ್ಲಿ ಸಕಾಲ ಮಾದರಿ ವಿಧಾನ ಅನುಸರಿಸಬೇಕು. ಗ್ರಾಮ ಆಡಳಿತಾಧಿಕಾರಿಗಳಿಗೆ ಕಚೇರಿ ಸೇರಿದಂತೆ ಅಗತ್ಯ ಮೂಲ ಸೌಕರ್ಯ ಒದಗಿಸಬೇಕು. ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ಮೊಬೈಲ್ ತಂತ್ರಾಂಶದ ಕೆಲಸ ವಿಚಾರವಾಗಿ ಆಗಿರುವ ಎಲ್ಲಾ ಅಮಾನತುಗಳನ್ನು ತಕ್ಷಣವೇ ರದ್ದು ಪಡಿಸಬೇಕು. ರಜಾ ದಿನಗಳಲ್ಲಿ ಕರ್ತವ್ಯಕ್ಕೆ ಹಾಜರಾಗುವಂತೆ ಮೆಮೋ ಹಾಕುವುದನ್ನು ನಿಲ್ಲಿಸಬೇಕು. ಅಂತರ್ ಜಿಲ್ಲಾ ವರ್ಗಾವಣೆ ಮರು ಸ್ಥಾಪಿಸಬೇಕು. ಮನೆ ಹಾನಿ ಪ್ರಕರಣಗಳ ಜವಾಬ್ದಾರಿಯಿಂದ ಗ್ರಾಮ ಆಡಳಿತ ಅಧಿಕಾರಿಗಳನ್ನು ಕೈ ಬಿಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಸಂಘದ ಉಪಾಧ್ಯಕ್ಷೆ ಗಿರಿಜಾ, ಕಾರ್ಯದರ್ಶಿ ಶಿವಶಂಕರ್, ಗ್ರಾಮ ಲೆಕ್ಕಾಧಿಕಾರಿಗಳಾದ ವಿನಯ್, ಗಣೇಶ್, ಅನಿಲ್, ವರುಣ್, ಮಂಜುಳಾ, ರಂಜನಾ, ಪ್ರೀತಮ್, ಸೇರಿದಂತೆ ಗ್ರಾಮ ಲೆಕ್ಕಾಧಿಕಾರಿಗಳು ಇದ್ದರು.

ಕಸಾಯಿಖಾನೆಗೆ ಸಾಗಿಸುತ್ತಿದ್ದ 23 ಜಾನುವಾರು ರಕ್ಷಣೆ



ಕೇರಳದ ಕಸಾಯಿ ಖಾನೆಗೆ ಸಾಗಿಸುತ್ತಿದ್ದ ಜಾನುವಾರುಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ರಕ್ಷಿಸಿದರು.

"ಕೇರಳದ ಕಸಾಯಿಖಾನೆಗೆ ಜಾನುವಾರುಗಳ ಸಾಗಾಣೆ ನಡೆಯುತ್ತಿದ್ದರೂ ಇದುವರೆಗೂ ತಡೆಗಟ್ಟಲು ಸಾಧ್ಯವಾಗಿಲ್ಲ. ಅರಣ್ಯ ಇಲಾಖೆಯವರು ಈಗಾಗಲೇ 3 ಬಾರಿ ಜಾನುವಾರುಗಳ ರಕ್ಷಣೆ ಮಾಡಿದ್ದಾರೆ. ಆದರೂ ಕೂಡ ಸಾಗಾಣಿಕೆ ತಪ್ಪಿಲ್ಲ. ಹ್ಯಾಂಡ್‌ಪೋಸ್ಟ್ ಸರ್ಕಲ್‌ನಲ್ಲಿ ಅರಣ್ಯ ಇಲಾಖೆ ಚೆಕ್‌ಪೋಸ್ಟ್, ಬೀಚನಹಳ್ಳಿಯಲ್ಲಿ ಉಪ ಪೊಲೀಸ್ ಠಾಣೆ ಇದ್ದರೂ ಕೂಡ ಕೇರಳಿಗರು ಜಾನುವಾರುಗಳ ಸಾಗಾಣಿಕೆ ಮಾಡುತ್ತಿರುವುದು ಸಂಶಯಕ್ಕೆ ಎಡೆಯಾಗಿದೆ.
- ಎನ್.ಬೇಗೂರು ಗ್ರಾಮಸ್ಥರು.

ಹೆಚ್.ಡಿ.ಕೋಟೆ, ಸೆ.26– ಕೇರಳದ ಕಸಾಯಿಖಾನೆಗೆ ಸಾಗಿಸುತ್ತಿದ್ದ 23 ಜಾನುವಾರುಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ರಕ್ಷಿಸಿದ್ದಾರೆ.

ತಾಲೂಕಿನ ಬಂಡೀಪುರ ರಾಷ್ಟ್ರೀಯ ಉದ್ಯಾನವನದ ಗುಂಡ್ರೆ ಅರಣ್ಯ ವಲಯದ ಆನೆಕಾಲು ದಾರಿ ಮಾರ್ಗವಾಗಿ ಅಕ್ರಮವಾಗಿ ಜಾನುವಾರುಗಳನ್ನು ಕೇರಳದ ಕಸಾಯಿ ಖಾನೆಗೆ ಸಾಗಾಣಿಕೆ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಗುಂಡ್ರೆ ಅರಣ್ಯ ಇಲಾಖೆ ಸಿಬ್ಬಂದಿಗಳು ದಾಳಿ ನಡೆಸಿ ಜಾನುವಾರುಗಳನ್ನು ರಕ್ಷಣೆ ಮಾಡಿ ಗುರುವಾರ ಮೈಸೂರಿನ ಪಿಂಜರ್ ಪೋಲ್‌ಗೆ ಕಳುಹಿಸಿದ್ದಾರೆ.

ತಾಲೂಕಿನ ಹ್ಯಾಂಡ್‌ಪೋಸ್ಟ್‌ನಲ್ಲಿ ಭಾನುವಾರ ನಡೆಯುವ ಜಾನುವಾರುಗಳ ಸಂತೆಯಲ್ಲಿ ಕೇರಳ ಮೂಲದವರು ಪ್ರತಿವಾರ ಜಾನುವಾರುಗಳನ್ನು ಖರೀದಿಸಿ, ನಂತರ ಸ್ಥಳೀಯ ಕೂಲಿ ಕಾರ್ಮಿಕರ ಮೂಲಕ ಕಾಲುನಡಿಗೆ, ಗೂಡ್ಸ್ ವಾಹನಗಳ ಮೂಲಕ 30 ಕಿಮೀ ಪ್ರಯಾಣಿಸಿ ಕಾಡಂಚಿನ ಗ್ರಾಮಗಳಲ್ಲಿ ನೆಲೆಸಿ ನಂತರ ಅರಣ್ಯದಂಚಿನ ಜನರ ಸಹಾಯದೊಂದಿಗೆ ಎಲ್ಲಾ ಜಾನುವಾರುಗಳನ್ನು ಒಂದೆಡೆ ಸೇರಿಸಿ ಸಂದರ್ಭ ನೋಡಿಕೊಂಡು ಜಾನುವಾರುಗಳನ್ನು ನಾಲ್ಕರಿಂದ ಐದು ಮಂದಿ ಕಾಡಿನ ಕಾಲುದಾರಿ ಮೂಲಕ ಅರಣ್ಯದಲ್ಲಿ ಹರಿಯುವ ಕನ್ನೇಗಾಲ ಹೊಳೆ ಮೂಲಕ ಕೇರಳಕ್ಕೆ ಕೊಂಡೊಯ್ಯುವ ಕಾರ್ಯ ನಿರಂತರವಾಗಿ ನಡೆಯುತ್ತಿರುವ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಬಂಡೀಪುರ ಹುಲಿ ಯೋಜನೆ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕ ಪ್ರಭಾಕರನ್, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಎ.ವಿ.ಸತೀಶ್ ಅವರ ಮಾರ್ಗದರ್ಶನದಲ್ಲಿ ಗುಂಡ್ರೆ ಅರಣ್ಯ ವಲಯ ಅಧಿಕಾರಿ ಅಮೃತೇಶ್ ಹಾಗೂ ಸಿಬ್ಬಂದಿ ದಾಳಿ ನಡೆಸಿ 23 ಜಾನುವಾರುಗಳನ್ನು ರಕ್ಷಿಸಿದ್ದಾರೆ. ಈ ವೇಳೆ ಜಾನುವಾರುಗಳನ್ನು ಸಾಗಿಸುತ್ತಿದ್ದ ಐವರು ಪರಾರಿಯಾಗಿದ್ದು, ಆರೋಪಿಗಳ ಬಂಧನಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಬಲೆ ಬೀಸಿದ್ದಾರೆ. ಕಾರ್ಯಾಚರಣೆಯಲ್ಲಿ ಗುಂಡ್ರೆ ವಲಯದ ಅರಣ್ಯ ಇಲಾಖೆ ಎಆರ್‌ಎಫ್‌ಓ ಎನ್.ಮಧುನಾಯ್ಕ, ಗಸ್ತು ವನಪಾಲಕ ಮಹೇಶ್, ಹೊರಗುತ್ತಿಗೆ ನೌಕರರಾದ ಹೊರಗುತ್ತಿಗೆ ನೌಕರರಾದ ಬಿ.ಸಿ.ರಾಜೇಶ್, ರಾಜಣ್ಣಶಿ, ಸಿಂಗರಾಜು, ಶ್ರೀಜೇಶ್ ಇದ್ದರು.

ಹೊಸೂರಲ್ಲಿ ಪೌಷ್ಟಿಕ ಆಹಾರ ಸಪ್ತಾಹ ಮಾಸಾಚರಣೆ



ಪೌಷ್ಟಿಕ ಆಹಾರ ಸಪ್ತಹ ಮಾಸಾಚರಣೆ ಕಾರ್ಯಕ್ರಮದಲ್ಲಿ ಅಂಗನವಾಡಿಗಳಿಗೆ ಸೊಳ್ಳೆ ಪರದೆಗಳನ್ನು ವಿತರಿಸಲಾಯಿತು.

ಚುಂಚನಕಟ್ಟೆ, ಸೆ.26– ಉತ್ತಮ ಪರಿಸರ, ಆರೋಗ್ಯಯುತ ಸಮಾಜದಿಂದ ದೇಶವನ್ನು ಸುಭೀಕ್ಷವಾಗಿ ರೂಪಿಸಲು ಸಾಧ್ಯ ಎಂದು ಹಿರಿಯ ಸಿವಿಲ್ ನ್ಯಾಯಾಧೀಶ ಅರವಿಂದ ತಿಳಿಸಿದರು.

ಸಾಲಿಗ್ರಾಮ ತಾಲೂಕಿನ ಹೊಸೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಇಲಾಖೆ ಮತ್ತು ತಾಲೂಕು ಕಾನೂನು ಸೇವಾ ಸಮಿತಿ ಸಂಯುಕ್ತಾಶ್ರಯದಲ್ಲಿ ಪೌಷ್ಟಿಕ ಆಹಾರ ಸಪ್ತಾಹ ಮಾಸಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಉತ್ತಮ ಆಹಾರ ಕ್ರಮಗಳು, ದೈಹಿಕ ವ್ಯಾಯಾಮ, ಉತ್ತಮ ಚಿಂತನೆಗಳು ಇಂದಿನ ಸಮಾಜಕ್ಕೆ ಅವಶ್ಯಕವಾಗಿದ್ದು, ಮಕ್ಕಳಿಗೆ ಒಳಿತು ಕೆಡುಕನ್ನು ಪೋಷಕರು ತಿಳಿಸುವ ಅಗತ್ಯವಿದೆ ಎಂದು ಹೇಳಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ನಟರಾಜ್ ಮಾತನಾಡಿ, ಹಣ್ಣು, ತರಕಾರಿಗಳು, ಮೊಟ್ಟೆ ಮಾನವನ ಆರೋಗ್ಯಕ್ಕೆ ಹಾಗೂ ಮಕ್ಕಳ ದೈಹಿಕ ಬೆಳವಣಿಗೆಗೆ ಪೂರಕ ಪೋಷಕಾಂಶಗಳನ್ನು ನೀಡಲಿದ್ದು, ಮಾಂಸ ತಿಂದರೆ ಮಾತ್ರ ಶಕ್ತಿ ಬರಲಿದೆ ಎನ್ನುವುದು ತಪ್ಪು ಕಲ್ಪನೆ ಎಂದರು.

ಈ ವೇಳೆ ಪ್ರಧಾನ ಸಿವಿಲ್ ನ್ಯಾಯಾಧೀಶ ಚಂದನ್, ಹೆಚ್ಚುವರಿ ಸಿವಿಲ್ ನ್ಯಾಯಾಧೀಶ ಆಸ್ರಿನಾ ಮಾತನಾಡಿದರು. ಕಾರ್ಯಕ್ರಮ ನಿಮಿತ್ತ ಅಂಗನವಾಡಿ ಮಕ್ಕಳಿಗೆ ಸೊಳ್ಳೆ ಪರದೆ ವಿತರಿಸಲಾಯಿತು. ಸೀಮಂತ ಮತ್ತು ಅಕ್ಷರಾಭ್ಯಾಸ ಕಾರ್ಯಕ್ರಮ ಮಾಡಲಾಯಿತು.

ಕಾರ್ಯಕ್ರಮದಲ್ಲಿ ವಕೀಲ ಗೋವಿಂದ ರಾಜು, ಪಿಡಿಓ ಚಿದಾನಂದ, ಶಿಶು ಅಭಿವೃದ್ಧಿ ಯೋಜನಾಧಿಕಾರಿ ಅಣ್ಣಯ್ಯ, ಸಿಬ್ಬಂದಿಗಳಾದ ಹೇಮೇಶ್, ಪಾರ್ವತಿ, ಭವ್ಯ, ಸಚಿನ್, ಸಹನಾ, ತಮರಿನ್, ಆಶಾ ಕಾರ್ಯಕರ್ತರು ಹಾಜರಿದ್ದರು.

ಆಸ್ಪತ್ರೆ ಕಾವಲ್ ಕೊಯಮತ್ತೂರು ಪಿಎಸಿಎಸ್‌ಗೆ 20.91 ಲಕ್ಷ ಲಾಭ



ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷ ಎ.ಶಿವಲಿಂಗಪ್ಪ ಉದ್ಘಾಟಿಸಿದರು.

ಹುಣಸೂರು, ಸೆ.26– ತಾಲೂಕಿನ ಆಸ್ಪತ್ರೆ ಕಾವಲ್ ಕೊಯಮತ್ತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 2023–24ನೇ ಸಾಲಿನಲ್ಲಿ 20,91,322 ರೂ. ನಿವ್ವಳ ಲಾಭ ಬಂದಿದೆ ಎಂದು ಸಂಘದ ಅಧ್ಯಕ್ಷ ಎ.ಶಿವಲಿಂಗಪ್ಪ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಎಲ್ಲಾ ನಿರ್ದೇಶಕರು ಹಾಗೂ ಸದಸ್ಯರ ಸಹಕಾರದಿಂದ ಸಂಘವು ಉತ್ತಮವಾಗಿ, ರೈತರ ಪರವಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು. ಈ ಬಾರಿ ರೈತರು ಕೃಷಿ ಚಟುವಟಿಕೆ ಕೈಗೊಳ್ಳಲು ಈಗಾಗಲೇ ಸಾಲಕ್ಕಾಗಿ ಅರ್ಜಿ ಸಲ್ಲಿಸಿದ್ದಾರೆ. ಎಲ್ಲರಿಗೂ ಹಂತ ಹಂತವಾಗಿ ಶೂನ್ಯ ಬಡ್ಡಿ ದರದಲ್ಲಿ ಸಾಲ ನೀಡಲಾಗುವುದು. ಸಾಲ ಪಡೆದ ಸದಸ್ಯರು ಸಕಾಲಕ್ಕೆ ಮರು ಪಾವತಿ ಮಾಡಬೇಕು. ಇದರಿಂದ ಸಂಘದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದರು.

ರೈತರು ಸಕಾಲಕ್ಕೆ ಸಾಲ ಮರು ಪಾವತಿಸದಿದ್ದರೇ ಶೂನ್ಯ ಬಡ್ಡಿಗೆ ಬದಲಾಗಿ ಶೇ.14ರಷ್ಟು ಬಡ್ಡಿ ಕಟ್ಟಬೇಕಾಗುತ್ತದೆ. ಸಂಘದಲ್ಲಿ 1462 ಸದಸ್ಯರಿದ್ದು ಇಲ್ಲಿವರೆಗೆ 5.45 ಕೋಟಿ ಸಾಲ ನೀಡಲಾಗಿದೆ. ಸಂಘದ ವಾರ್ಷಿಕ ಸಭೆ ಹಾಗೂ ಇತರೆ ಕಾರ್ಯಕ್ರಮಗಳಲ್ಲಿ ಪ್ರತಿವರ್ಷ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಊಟದ ವ್ಯವಸ್ಥೆ ಮಾಡುತ್ತಿರುವುದು ಹೆಮ್ಮೆಯ ವಿಷಯ ಎಂದರು.


ಸಂಘದ ನಿರ್ದೇಶಕನ ಹಾಗೂ ಹುಣಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಹುಡಾ) ಅಧ್ಯಕ್ಷ ಹೆಚ್.ಪಿ.ಅಮರ್‌ನಾಥ್ ಮಾತನಾಡಿ, ನಮ್ಮ ಕೊಯಮತ್ತೂರು ಸಹಕಾರ ಸಂಘ ರಾಜಕೀಯದಿಂದ ದೂರವಿದ್ದು, ಪಾರದರ್ಶಕ ಆಡಳಿತ ನೀಡುತ್ತಿದೆ. ನಮ್ಮ ಸಂಘದ ಬೆಳವಣಿಗೆ ಜಿಲ್ಲೆಗೆ ಮಾದರಿಯಾಗಿದೆ. ನಮ್ಮ ಸಂಘದ ಪಾರದರ್ಶಕ ಆಡಳಿತ ನೋಡಿ ಅಪೆಕ್ಸ್ ಬ್ಯಾಂಕ್ ವತಿಯಿಂದ 10 ಸಾವಿರ ಬಹುಮಾನ ಮತ್ತು ಅವಾರ್ಡ್ ನೀಡಿರುವುದು ನಮ್ಮ ಸಂಘದ ಎಲ್ಲಾ ಅಧ್ಯಕ್ಷರು, ನಿರ್ದೇಶಕರಿಗೆ ಹೆಮ್ಮೆ ಎಂದರು.

ಮಾಜಿ ನಿರ್ದೇಶಕ ಕುಪ್ಪಸ್ವಾಮಿ ಮಾತನಾಡಿ, ಈ ಹಿಂದೆ ಸಂಘ ಶಿಥಿಲ ಕಟ್ಟಡದಲ್ಲಿ ನಡೆಯುತಿತ್ತು. ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್ ಸಹಕಾರದಿಂದ ಸುಭದ್ರ ನೂತನ ಕಟ್ಟಡ ನಿರ್ಮಿಸಲಾಗಿದೆ. ಮಾಜಿ ಶಾಸಕರ ಸಹೋದರ ಹೆಚ್.ಪಿ.ಅಮರ್‌ನಾಥ್ ಮಂಜಣ್ಣನವರಂತೆ ಹೆಚ್ಚಿನ ಸಹಕಾರ ನೀಡುತ್ತಿರುವುದು ಸಂತೋಷದ ವಿಚಾರ. ನಮ್ಮಲ್ಲಿ ಹೆಚ್ಚಿನ ಜಾಗ ಇರುವುದರಿಂದ ಸಂಘಕ್ಕೆ ಬಂದ ಲಾಭಾಂಶದಲ್ಲಿ ಕಟ್ಟಡ ನಿರ್ಮಾಣಕ್ಕೆ ಒತ್ತು ನೀಡಿ ಉತ್ತಮ ಆದಾಯ ಗಳಿಸಬಹುದು ಎಂದು ಸಲಹೆ ನೀಡಿದರು.

ಈ ವೇಳೆ ಸಂಘದ ಉಪಾಧ್ಯಕ್ಷ ವಿ.ರವಿ, ನಿರ್ದೇಶಕರಾದ ಗೌರಮ್ಮ, ಚಿನ್ನಸ್ವಾಮಿ, ಮಾದನಾಯಕ, ಮಹದೇವ, ಪಿ.ರಾಜೇಂದ್ರ, ಆರ್.ರಾಮಸ್ವಾಮಿ, ವಸಂತ, ಶಂಕರಪ್ಪ ಮಾಜಿ ಸದಸ್ಯರಾದ ನಾರಾಯಣ್, ಪಳನಿಸ್ವಾಮಿ, ಚಿಕ್ಕಣ್ಣೇಗೌಡ, ಚಿಕ್ಕಸ್ವಾಮಿ, ಸಿಇಓ ಬಿ.ಸೆಂದಿಲ್ ಕುಮಾರ್, ಸಹಾಯಕ ಮಾಣಿಕ್ಯ ಹಾಗೂ ಸದಸ್ಯರು ಹಾಜರಿದ್ದರು.

ಡೈರಿ ಅಭಿವೃದ್ಧಿಗೆ ಸದಸ್ಯರು ಸಹಕಾರ ನೀಡಿ

ಹೆಮ್ಮಿಗೆ ಡೈರಿ ಅಧ್ಯಕ್ಷ ಹೆಚ್.ವಿ.ಶೇಷಾದ್ರಿ ಮನವಿ



ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷ ಹೆಚ್.ವಿ.ಶೇಷಾದ್ರಿ ಉದ್ಘಾಟಿಸಿದರು.

ತಲಕಾಡು, ಸೆ.26– ಸರ್ವ ಸದಸ್ಯರ ಸಹಕಾರದಿಂದ ಸಂಘವು ಪ್ರಸಕ್ತ ಸಾಲಿನಲ್ಲಿ 30,122 ರೂ. ನಿವ್ವಳ ಲಾಭ ಗಳಿಸಿದೆ ಎಂದು ಹೆಮ್ಮಿಗೆ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಹೆಚ್.ವಿ.ಶೇಷಾದ್ರಿ ಹೇಳಿದರು.

ಗ್ರಾಮದ ಡೈರಿ ಆವರಣದಲ್ಲಿ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಷೇರುದಾರರ ಸಹಕಾರದಿಂದ ಸಂಘ ಲಾಭ ಗಳಿಸುತ್ತಿದ್ದು, ಮುಂದಿನ ದಿನಗಳಲ್ಲಿ ಸಂಘವನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ಸದಸ್ಯರು ನಮಗೆ ಸಹಕಾರ ನೀಡಬೇಕಿದೆ. ಸಂಘದ ಸದಸ್ಯರಿಗೆ ಒಕ್ಕೂಟದಿಂದ ಬರಬಹುದಾದ ಯಾವುದೇ ಸವಲತ್ತುಗಳನ್ನು ಕೊಡಿಸಲು ತಾವು ಶಕ್ತಿ ಮೀರಿ ಪ್ರಯತ್ನ ಪಡುವುದಾಗಿ ತಿಳಿಸಿದ ಅವರು ಮೈಮುಲ್ ಅಧ್ಯಕ್ಷರು ನಮ್ಮ ತಾಲೂಕಿನವರೇ ಆಗಿರುವುದರಿಂದ ಸಂಘಕ್ಕೆ ಹೆಚ್ಚಿನ ಅನುದಾನ ನಿರೀಕ್ಷಿಸಲಾಗುತ್ತಿದೆ. ಆದರೆ ಸಂಘಕ್ಕೆ ಕಟ್ಟಡ ಬೇಕಾಗಿರುವುದರಿಂದ ರೈತರು ಜಾಗ ನೀಡಿದರೆ ನೂತನ ಕಟ್ಟಡವನ್ನು ನಿರ್ಮಾಣ ಮಾಡುತ್ತೇವೆ ಎಂದರು.

ರೈತರು ಗುಣಮಟ್ಟದ ಹಾಲನ್ನು ಸರಬರಾಜು ಮಾಡುವುದರಿಂದ ಸಹಕಾರ ಸಂಘಗಳ ಅಭಿವೃದ್ಧಿ ಸಾಧ್ಯ. ಇದರಿಂದ ರೈತರಿಗೂ ಹೆಚ್ಚಿನ ಅನುಕೂಲವಾಗಲಿದೆ ಎಂದರು. ಕಾರ್ಯದರ್ಶಿ ಸೋಮಣ್ಣ ವಾರ್ಷಿಕ ವರದಿ ಮಂಡಿಸಿ, ಮುಂದಿನ ದಿನಗಳಲ್ಲಿ ಹೆಚ್ಚು ಹಾಲು ಸರಬರಾಜು ಮಾಡಿದ ಹಾಲು ಉತ್ಪಾದಕರಿಗೆ ಉಡುಗೊರೆ ನೀಡುವುದಾಗಿ ಭರವಸೆ ನೀಡಿದರು.

ಮೈಮುಲ್ ವಿಸ್ತರಣಾಧಿಕಾರಿ ಶಿವಕುಮಾರ್, ಉಪಾಧ್ಯಕ್ಷೆ ರತ್ನಮ್ಮ, ನಿರ್ದೇಶಕರಾದ ಚಿಕ್ಕಹೊನ್ನಯ್ಯ, ಹೆಚ್.ಎನ್.ರವಿಚಂದ್ರ, ಸರಸಮ್ಮ, ಚೌಡಶೆಟ್ಟಿ, ಚಂದ್ರಶೇಖರ, ರಾಜಶೇಖರ, ಹೆಚ್.ಎಸ್.ಪ್ರಜ್ವಲ್, ಹೆಚ್.ಸಿ.ಚಿಕ್ಕಚೌಡಯ್ಯ,ಸಿದ್ದಯ್ಯ, ಶ್ರೀನಿವಾಸ, ಹಾಲು ಪರೀಕ್ಷಕ ಪುಟ್ಟಯ್ಯ, ಸಹಾಯಕ ರಂಜನ್ ಕುಮಾರ್, ರೈತರು ಷೇರುದಾರರು ಹಾಜರಿದ್ದರು.

ಅಕ್ಕಮಹಾದೇವಿ ಅಭಿವೃದ್ಧಿ ಸಂಘಕ್ಕೆ 1.32 ಲಕ್ಷ ಲಾಭ

ಸಂಘದ ಅಧ್ಯಕ್ಷ ಕೆ.ಜಿ.ಶಿವಪ್ರಸಾದ್



ಸಭೆಯಲ್ಲಿ ಬಿಇಓ ಶಿವಮೂರ್ತಿ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸುಬ್ಬಣ್ಣ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಸೆ.26– ಅಕ್ಕಮಹಾದೇವಿ ಅಭಿವೃದ್ಧಿ ಸಂಘವನ್ನು ತಾಲೂಕಿನಲ್ಲೇ ಮಾದರಿ ಸಂಘ ಮಾಡುವ ಮಹದಾಸೆ ಹೊಂದಿರುವ ನನ್ನ ಆಶಯಕ್ಕೆ ಸದಸ್ಯರು, ನಿರ್ದೇಶಕರು ಸ್ಪಂದಿಸಬೇಕು ಎಂದು ಸಂಘದ ಅಧ್ಯಕ್ಷ ಕೆ.ಜಿ.ಶಿವಪ್ರಸಾದ್ ಮನವಿ ಮಾಡಿದರು.

ಪಟ್ಟಣದ ಸಂಘದ ಕಚೇರಿಯಲ್ಲಿ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಹಕಾರ ಸಂಘ 2017–18ನೇ ಸಾಲಿನಲ್ಲಿ ಆರಂಭಗೊಂಡಿದ್ದು, ಉತ್ತಮ ಲಾಭಾಂಶದೊಂದಿಗೆ ಮುನ್ನಡೆದಿದೆ. ಸಂಘದಲ್ಲಿ 886 ಷೇರುದಾರರಿದ್ದು, ಮುಂಬರುವ ವಾರ್ಷಿಕ ಮಹಾಸಭೆ ವೇಳೆಗೆ ಷೇರುದಾರರ ಸಂಖ್ಯೆಯನ್ನು 1500ಕ್ಕೆ ಹೆಚ್ಚಿಸಲು ಸರ್ವ ಸದಸ್ಯರು ಸಹಕಾರ ನೀಡಬೇಕು. ಆ ಮೂಲಕ ಸಂಘವನ್ನು ತಾಲೂಕಿನಲ್ಲಿಯೇ ಮಾದರಿ ಸಂಘ ಮಾಡುವ ಗುರಿ ಹೊಂದಿರುವ ನನ್ನ ಆಶಯಕ್ಕೆ ಸದಸ್ಯರು, ನಿರ್ದೇಶಕರು ಸಾಥ್ ನೀಡಬೇಕು ಎಂದು ಮನವಿ ಮಾಡಿದರು.

ಸಂಘವು ಪ್ರಸಕ್ತ ಸಾಲಿನಲ್ಲಿ 1,32,150 ರೂ. ನಿವ್ವಳ ಲಾಭ ಗಳಿಸಿದ್ದು, ಇದು ಮತ್ತಷ್ಟು ಹೆಚ್ಚಲು ಸಾಲ ಪಡೆದವರು ಸಕಾಲಕ್ಕೆ ಮರು ಪಾವತಿಸಬೇಕು ಎಂದು ಮನವಿ ಮಾಡಿದ ಅವರು ಸಂಘದಿಂದ ಮುಂದಿನ ದಿನಗಳಲ್ಲಿ ಇ–ಸ್ಟ್ಯಾಂಪ್ ಹಾಗೂ ಪಿಗ್ಮಿ ಸಂಗ್ರಹ ಸೇರಿದಂತೆ ವಿವಿಧ ಯೋಜನೆಗಳನ್ನು ಜಾರಿಗೆ ತರಲು ಚಿಂತಿಸಲಾಗಿದೆ ಎಂದರು. ಇದೇ ವೇಳೆ ಬಿಇಓ ಶಿವಮೂರ್ತಿ ಹಾಗೂ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷರ ಸಂಘದ ಅಧ್ಯಕ್ಷ ಸುಬ್ಬಣ್ಣ ಅವರನ್ನು ಸನ್ಮಾನಿಸಲಾಯಿತು. ಸಂಘದ ಗೌರವಾಧ್ಯಕ್ಷ ಹಲವಾರ ಮಠಾಧ್ಯಕ್ಷ ಮುಡುಕನಪುರ ಷಡಕ್ಷರ ದೇಶಿಕೇಂದ್ರ ಶ್ರೀಗಳು ಸಾನಿಧ್ಯ ವಹಿಸಿ ಮಾತನಾಡಿದರು.

ಸಭೆಯಲ್ಲಿ ಉಪಾಧ್ಯಕ್ಷೆ ಜಾಲಹಳ್ಳಿ ಸುಧಾ, ನಿರ್ದೇಶಕರಾದ ಯಡಹಳ್ಳಿ ಮಹದೇವಮ್ಮ, ಮಾಡ್ರಹಳ್ಳಿ ಎಂ.ಎಸ್. ಶಿವಮೂರ್ತಿ ಸಿ.ಬಿ.ಹುಂಡಿ ಚಿನ್ನಸ್ವಾಮಿ, ಎನ್.ಲೋಕೇಶ್, ಸೋಸಲೆ ನಾಗೇಂದ್ರ, ತುರುಗನೂರು ಮಲ್ಲೇಶ್, ಶಿಕ್ಷಕ ಸಿದ್ದರಾಜು, ಬೆನಕನಹಳ್ಳಿ ಮಹೇಶ್, ಕುರುಬೂರು ಕೆ.ಎಂ.ಶಾಂತಕುಮಾರ್, ಜೆಸಿಬಿ ರುದ್ರಸ್ವಾಮಿ, ತೊಟ್ಟವಾಡಿ ರವಿ, ಕಳ್ಳೀಪುರ ಮಹದೇವಸ್ವಾಮಿ, ಸಂಘದ ಕಾರ್ಯದರ್ಶಿ ಎಂ.ಮಹದೇವಸ್ವಾಮಿ ಮತ್ತಿತರಿದ್ದರು.

ಸೆ.29, ವಾರಾಂತ್ಯ ನಾಟಕ

ಮೈಸೂರು, ಸೆ.26– ರಂಗಾಯಣದ ವಾರಾಂತ್ಯ ರಂಗ ಪ್ರದರ್ಶನದಲ್ಲಿ ರಾಯಚೂರಿನ ಸಮುದಾಯ ರಂಗತಂಡದಿಂದ ಡಾ.ವಿಕ್ರಮ್ ವಿಸಾಜಿ ಅವರ ರಚನೆಯ ಪ್ರವೀಣ್ ರೆಡ್ಡಿ ಗುಂಜಹಳ್ಳಿ ನಿರ್ದೇಶನದ 'ರಕ್ತ ವಿಲಾಪ' ನಾಟಕದ ಪ್ರದರ್ಶನವನ್ನು ಹವ್ಯಾಸಿ ರಂಗ ಪ್ರಯೋಗವಾಗಿ ಸೆ.29 ರಂದು ಸಂಜೆ 6.30 ಗಂಟೆಗೆ ಭೂಮಿಗೀತ ರಂಗಮಂದಿರದಲ್ಲಿ ಏರ್ಪಡಿಸಲಾಗಿದೆ ಎಂದು ರಂಗಾಯಣದ ನಿರ್ದೇಶಕ ಸತೀಶ್ ತಿಪಟೂರು ತಿಳಿಸಿದ್ದಾರೆ.

ಹೆಚ್.ಡಿ.ಕೋಟೆ ಬಳಿ ಬೋನಿಗೆ ಬಿದ್ದ ಚಿರತೆ


ಹೆಚ್.ಡಿ.ಕೋಟೆ, ಸೆ.26– ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಗುರುವಾರ 7 ವರ್ಷದ ಗಂಡು ಚಿರತೆ ಬಿದ್ದಿದೆ.



ಪಟ್ಟಣದ ಡ್ರೈವರ್ ಕಾಲೋನಿ ಸಮೀಪವಿರುವ ರೈತ ಗುಂಟಮಲ್ಲು ಅವರ ಜಮೀನಿನ ಬಳಿ 2 ಚಿರತೆಗಳು ಓಡಾಡುತ್ತಿದ್ದವು. ಈ ಸಂಬಂಧ ಚಿರತೆ ಸೆರೆ ಹಿಡಿಯುವಂತೆ ರೈತರು ಅರಣ್ಯ ಇಲಾಖೆ ಆರ್‌ಎಫ್‌ಓ ಪೂಜಾ ಅವರಿಗೆ ಮನವಿ ಸಲ್ಲಿಸಿದ್ದರು. ಈ ಹಿನ್ನಲೆಯಲ್ಲಿ ಅಧಿಕಾರಿಗಳು ಜಮೀನಿನಲ್ಲಿ ಬೋನು ಇರಿಸಿದ್ದರು. ಆದರೆ ಗುರುವಾರ ಮುಂಜಾನೆ 7 ವರ್ಷದ ಗಂಡು ಚಿರತೆ ಬೋನಿಗೆ ಬಿದ್ದಿದೆ. ವಿಷಯ ತಿಳಿದು ಚಿರತೆ ನೋಡಲು ಭಾರೀ ಜನಸಾಗರವೇ ಹರಿದು ಬಂದಿತ್ತು. ಸ್ಥಳಕ್ಕಾಗಮಿಸಿದ ಅರಣ್ಯ ಇಲಾಖೆ ಅಧಿಕಾರಿಗಳು ಪರಿಶೀಲನೆ ನಡೆಸಿ ಚಿರತೆಯನ್ನು ವಶಕ್ಕೆ ಪಡೆದರು.

ಆರ್‌ಎಫ್‌ಓ ಪೂಜಾ ಮಾತನಾಡಿ, ಈ ಭಾಗದಲ್ಲಿ 2 ಚಿರತೆಗಳು ಓಡಾಡುತ್ತಿದ್ದು, ಅವುಗಳನ್ನು ಸೆರೆ ಹಿಡಿಯುವಂತೆ ರೈತರು ಮನವಿ ಸಲ್ಲಿಸಿದ ಹಿನ್ನೆಲೆಯಲ್ಲಿ ಚಿರತೆ ಸೆರೆಗೆ ಬೋನಿಡಲಾಗಿತ್ತು. ಇದೀಗ ಒಂದು ಚಿರತೆ ಬೋನಿಗೆ ಬಿದ್ದಿದೆ. ಮತ್ತೊಂದು ಚಿರತೆ ಸೆರೆಗೆ ಮತ್ತೋಮ್ಮೆ ಬೋನಿಡಲಾಗುವುದು. ಸೆರೆಯಾದ ಚಿರತೆಯನ್ನು ನಾಗರಹೊಳೆ ಅಭಯಾರಣ್ಯಕ್ಕೆ ಬಿಡಲಾಗುವುದು ಎಂದು ತಿಳಿಸಿದರು.

ಹುಳಿಮಾವು ಗ್ರಾಪಂಗೆ ನೀಲಮ್ಮ ಪ್ರಭಾರ ಅಧ್ಯಕ್ಷೆ



ನಂಜನಗೂಡು ತಾಲೂಕಿನ ಹುಳಿಮಾವು ಗ್ರಾಪಂ ಅಧ್ಯಕ್ಷ ಶಿವರಾಮ್ ನಿಧನರಾದ ಹಿನ್ನೆಲೆಯಲ್ಲಿ ಉಪಾಧ್ಯಕ್ಷೆ ನೀಲಮ್ಮ ಪ್ರಭಾರ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ. ಅವರಿಗೆ ಪಿಡಿಓ ಪ್ರಕಾಶ್ ಹೂಗುಚ್ಛ ನೀಡಿ ಅಧಿಕಾರ ಹಸ್ತಾಂತರಿಸಿದರು. ಗ್ರಾಪಂ ಎಲ್ಲಾ ಸದಸ್ಯರು, ಸಿಬ್ಬಂದಿ ವರ್ಗ ಹಾಜರಿದ್ದರು.

ಸಾಮಾಜಿಕ ಬಹಿಷ್ಕಾರವನ್ನು ಬುಡ ಸಮೇತ ಕಿತ್ತು ಹಾಕಬೇಕು

ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಶ್ಯಾಂಭಟ್



ನಂಜನಗೂಡಿನ ಪ್ರವಾಸಿ ಮಂದಿರಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಶ್ಯಾಂಭಟ್ ಅಧಿಕಾರಿಗಳ ಸಭೆ ನಡೆಸಿದರು.

ನಂಜನಗೂಡು, ಸೆ.26– ಸಾಮಾಜಿಕ ಬಹಿಷ್ಕಾರದಂತಹ ಅನಿಷ್ಟ ಪದ್ಧತಿಯನ್ನು ಬುಡ ಸಮೇತ ಕಿತ್ತು ಹಾಕಬೇಕು ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷ ಶ್ಯಾಂಭಟ್ ತಿಳಿಸಿದರು.

ತಾಲೂಕಿನ ಕಂದೇಗಾಲ ಗ್ರಾಮಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲಿಸಿದ ನಂತರ ನಗರದ ಪ್ರವಾಸಿ ಮಂದಿರದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ಕಂದೇಗಾಲ ಗ್ರಾಮದಲ್ಲಿ 1994ರಲ್ಲಿ ರತ್ನಮ್ಮ ಎಂಬುವರ ಕುಟುಂಬಕ್ಕೆ ಸಾಮಾಜಿಕ ಬಹಿಷ್ಕಾರ ಹಾಕಿ ಕಿರುಕುಳ ನೀಡಲಾಗಿದೆ ಎಂದು ಆಯೋಗಕ್ಕೆ ದೂರು ನೀಡಲಾಗಿತ್ತು. ದೂರನ್ನು ಆಧರಿಸಿ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರನ್ನು ವಿಚಾರಿಸಿದಾಗ ಗ್ರಾಮದಲ್ಲಿ ಅಂತಹ ಯಾವುದೇ ಘಟನೆಗಳು ನಡೆದಿಲ್ಲ ಎಂದು ತಿಳಿದು ಬಂದಿದೆ. ಗ್ರಾಮಗಳಲ್ಲಿ ಬಹಿಷ್ಕಾರದಂತಹ ಘಟನೆಗಳು ನಡೆದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ತಾಲೂಕಿನಲ್ಲಿ ಕಂಡು ಬರುತ್ತಿರುವ ಸಾಮಾಜಿಕ ಬಹಿಷ್ಕಾರದ ಪಿಡುಗು ತೊಲಗಬೇಕು. ಈ ಪದ್ಧತಿಯನ್ನು ಅಧಿಕಾರಿಗಳು ಬುಡ ಸಮೇತ ಕಿತ್ತು ಹಾಕಬೇಕು. ತಹಸೀಲ್ದಾರ್, ಸಿಡಿಪಿಓ ಮತ್ತು ಪೊಲೀಸರು ಹೆಚ್ಚಾಗಿ ಗಮನ ವಹಿಸಬೇಕು. ಇಂತಹ ಘಟನೆ ಸಂಭವಿಸಿದಲ್ಲಿ ಕೂಡಲೇ ಕ್ರಮ ವಹಿಸಿ ನಮ್ಮ ಗಮನಕ್ಕೆ ತರಬೇಕು ಎಂದು ಸೂಚಿಸಿದರು.

ಈ ವೇಳೆ ಮಾನವ ಹಕ್ಕು ಆಯೋಗದ ಉಪ ವಿಭಾಗೀಯ ಸದಸ್ಯ ವಂಟಿಗೋಡಿ, ಡಿವೈಎಸ್‌ಪಿ ರಘು, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರ್, ತಾಪಂ ಇಓ ರಾಜೇಶ್, ನಗರಸಭೆ ಆಯುಕ್ತ ನಂಜುಂಡಸ್ವಾಮಿ, ಸಿಡಿಪಿಓ ಭವ್ಯಶ್ರೀ, ಮಂಜುಳಾ ಉಪಸ್ಥಿತರಿದ್ದರು.


ಕೃಷ್ಣ ನಿಧನ



ಸರಗೂರು, ಸೆ.26– ಪಟ್ಟಣದ ವಿನಾಯಕ ರಸ್ತೆ ನಿವಾಸಿ, ಬೀದಿ ಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಕೃಷ್ಣ(60) ಬುಧವಾರ ನಿಧನರಾದರು. ಮೃತರು ನಾಲ್ವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಆದಿ ಕರ್ನಾಟಕ ರುದ್ರಭೂಮಿಯಲ್ಲಿ ಗುರುವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ತಿಂಗಳೊಳಗೆ ಸಹಕಾರ ಸಂಘಕ್ಕೆ ಸಿಇಓ ನೇಮಕ

ರಂಗಸಮುದ್ರ ಪಿಎಸಿಎಸ್ ಅಧ್ಯಕ್ಷ ಆರ್.ಜಿ.ರಮೇಶ್ ಭರವಸೆ



ಸಭೆಯನ್ನು ಸಂಘದ ಅಧ್ಯಕ್ಷ ಆರ್.ಜಿ.ರಮೇಶ್, ಉಪಾಧ್ಯಕ್ಷ ವೆಂಕಟೇಶ್, ಟಿ.ವಾಸುದೇವ್ ಉದ್ಘಾಟಿಸಿದರು.

ತಿ.ನರಸೀಪುರ, ಸೆ.26– ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಚರ್ಚಿಸಿ ಸಂಘಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೇಮಿಸಲಾಗುವುದು ಎಂದು ರಂಗಸಮುದ್ರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಆರ್.ಜಿ.ರಮೇಶ್ ತಿಳಿಸಿದರು.

ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಡೆದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೇಮಕ ಮಾಡದಿರುವುದರಿಂದ ಯಾವುದೇ ಕೆಲಸಗಳು ಆಗುತ್ತಿಲ್ಲ. ಹಿಂದಿನ ಸಿಇಓ ನಿಧನದ ಹಿನ್ನೆಲೆಯಲ್ಲಿ ಅವರಿಂದ ತೆರವಾದ ಸ್ಥಾನಕ್ಕೆ ನೂತನ ಸಿಇಓ ನೇಮಕ ಮಾಡಲು ವಿಳಂಬ ನೀತಿ ಅನುಸರಿಸಲಾಗುತ್ತಿದೆ ಎಂದು ಸಭೆಯಲ್ಲಿ ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಶೀಘ್ರದಲ್ಲೇ ಸಹಕಾರ ಸಂಘದ ಆಡಳಿತ ಮಂಡಳಿ ಸಭೆ ಕರೆದು ತಿಂಗಳೊಳಗೆ ನೇಮಕ ಮಾಡಲಾಗುವುದು ಎಂದು ಭರವಸೆ ನೀಡಿದರು. ಅಲ್ಲದೇ ಸಿಇಓ ಆಗಿ ನೇಮಕಗೊಳ್ಳುವವರಿಂದ ಭದ್ರತೆಗಾಗಿ 2 ಎಕರೆ ಜಮೀನು ಹಾಗೂ 5 ಲಕ್ಷ ರೂ.ಗಳ ಠೇವಣಿ ಸಂಗ್ರಹಿಸಲಾಗುವುದು ಎಂದರು.


ಸಂಘದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿದ್ದು, ಪ್ರತಿವರ್ಷ ನಿವ್ವಳ ಲಾಭಗಳಿಸಿ ಯಶಸ್ವಿಯಾಗಿ ಮುನ್ನಡೆಯುತ್ತಿದೆ. ಸಾಲ ಪಡೆದ ಸಂಘದ ಸದಸ್ಯರು ಸುಸ್ತಿದಾರರಾಗದೇ ಸಕಾಲಕ್ಕೆ ಮರುಪಾವತಿ ಮಾಡುವ ಮೂಲಕ ಸಂಘದ ಬೆಳವಣಿಗೆಗೆ ಮತ್ತಷ್ಟು ಸಹಕಾರ ನೀಡಬೇಕೆಂದು ಮನವಿ ಮಾಡಿದರು. ಮುಂಬರುವ ದಿನಗಳಲ್ಲಿ ಕೆಸಿಸಿ ಹಾಗೂ ಬೆಳೆ ಸಾಲವನ್ನು ಹೆಚ್ಚಿನ ರೈತರಿಗೆ ನೀಡುವ ಉದ್ದೇಶ ಹೊಂದಲಾಗಿದ್ದು, ಸುಸ್ತಿದಾರರಲ್ಲದ ರೈತರು ಮಾತ್ರ ಮುಂಬರುವ ಸಹಕಾರ ಸಂಘದ ಚುನಾವಣೆಯಲ್ಲಿ ಮತ ಚಲಾಯಿಸಲು ಅರ್ಹರಾಗಿರುತ್ತಾರೆ ಎಂದರು.

ಪ್ರಭಾರ ಸಿಇಓ ಹಾಗೂ ಜಿಲ್ಲಾ ಬ್ಯಾಂಕ್ ಪ್ರತಿನಿಧಿ ರಾಜಪ್ಪ ಸಂಘದ ವರದಿ ಮಂಡಿಸಿ ಮಾತನಾಡಿ, ಪ್ರಸಕ್ತ ಸಾಲಿನಲ್ಲಿ ಸಂಘವು 7,36,292 ರೂ. ನಿವ್ವಳ ಲಾಭಗಳಿಸಿದೆ. 500 ರೂ.ಗಳಿದ್ದ ಸಂಘದ ಷೇರು ಮೊತ್ತವನ್ನು 1000 ರೂ.ಗಳಿಗೆ ಹೆಚ್ಚಿಸಲಾಗಿದ್ದು, ಸದಸ್ಯರು ಉಳಿಕೆ 500 ರೂ.ಗಳನ್ನು ಪಾವತಿಸಿ ಷೇರು ಪತ್ರ ನವೀಕರಣ ಮಾಡಿಸಿಕೊಳ್ಳುವಂತೆ ತಿಳಿಸಿದರು. ರಸಗೊಬ್ಬರ ಮಾರಾಟ ಮಾಡುವ ಸಂಬಂಧ ಸಂಘದಿಂದ ಮನವಿ ಸಲ್ಲಿಸಿದ್ದು ಪರವಾನಗಿಗಾಗಿ ಕಾಯಲಾಗುತ್ತಿದೆ. ಪಡಿತರ ಆಹಾರವನ್ನು ಸಮರ್ಪಕವಾಗಿ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತದೆ. ಸಂಘದಿಂದ ಯಶಸ್ವಿನಿ ಕಾರ್ಡ್ ಅನ್ನು ಉಚಿತವಾಗಿ ಮಾಡಿಕೊಡಲಾಗುತ್ತಿದ್ದು, ರೈತರು ಯೋಜನೆ ಸದುಪಯೋಗಕ್ಕೆ ಮುಂದಾಗಬೇಕು. ಈ ಹಿಂದಿನ ಕಾರ್ಯದರ್ಶಿ ರಾಧಾಕೃಷ್ಣ ಸಂಘದ 12 ಲಕ್ಷ ರೂ. ದುರುಪಯೋಗ ಮಾಡಿಕೊಂಡಿರುವ ಹಿನ್ನೆಲೆಯಲ್ಲಿ ಅವರ ಆಸ್ತಿ ಜಪ್ತಿ ಮಾಡಲು ಕೋರ್ಟ್ ಆದೇಶ ನೀಡಿದೆ ಎಂದು ತಿಳಿಸಿದರು.

ಸಭೆಯಲ್ಲಿ ಉಪಾಧ್ಯಕ್ಷ ವೆಂಕಟೇಶ್, ಟಿ.ವಾಸುದೇವ್, ಎಸ್.ರಮೇಶ್, ರೇಣುಕಾ, ಎಸ್.ವಸಂತ, ಮಂಜುನಾಥ ಹೆಗ್ಡೆ, ಕಲ್ಯಾಣಮ್ಮ, ಎಸ್.ಜೋಗಯ್ಯ, ಸಣ್ಣಮಾದಯ್ಯ, ಹೆಚ್.ಎಸ್.ಮಹದೇವ, ಮುಖಂಡರಾದ ಮಂಜುನಾಥ್, ಮರಿದೇವೇಗೌಡ ಸೇರಿದಂತೆ ಗ್ರಾಮಸ್ಥರು ಹಾಜರಿದ್ದರು.

ಮೈಸೂರು ಲೋಕಾಯುಕ್ತ ಕಚೇರಿಯಲ್ಲಿ 2ನೇ ದಿನವೂ ನಾಟಕೀಯ ಬೆಳವಣಿಗೆ

ಸ್ನೇಹಮಯಿ ಕೃಷ್ಣ ಕೋರ್ಟ್ ಆದೇಶದನ್ವಯ ಸಿಎಂ ವಿರುದ್ಧ ದೂರು ಸಲ್ಲಿಸಲು ಬಂದರೆ ಲೋಕಾಯುಕ್ತ ಎಸ್ಪಿಯೇ ಇಲ್ಲ!



ಸ್ನೇಹಮಯಿ ಕೃಷ್ಣ

ಮೈಸೂರು, ಸೆ.26(ಬಿಎಲ್‌ಯು)– ಮುಡಾ ನಿವೇಶನ ಹಂಚಿಕೆ ಹಗರಣದ ಸಂಬಂಧ ಕೋರ್ಟ್ ಆದೇಶದನ್ವಯ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಇಂದು ಮೈಸೂರು ಲೋಕಾಯುಕ್ತ ಎಸ್ಪಿಗೆ ದೂರು ನೀಡಲು ಆಗಮಿಸಿ ದರು. ಆದರೆ ಎಸ್ಪಿ ಟಿ.ಜೆ.ಉದೇಶ್ ಇಲ್ಲದ ಕಾರಣ ಕಾದು ಕುಳಿತರೂ ಏನೂ ಪ್ರಯೋಜನ ಆಗಲಿಲ್ಲ.

ಮುಡಾ ನಿವೇಶನ ಹಗರಣ ಸಂಬಂಧ ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಆಗ್ರಹಿಸಿ ಪ್ರದೀಪ್ ಕುಮಾರ್ ಎಂಬುವರು ನಿನ್ನೆ ಲೋಕಾಯುಕ್ತ ಕಚೇರಿಗೆ ದೂರು ನೀಡಲು ಬಂದಾಗಲೂ ಎಸ್ಪಿ ಲಭ್ಯವಿರದೆ ಹೈಡ್ರಾಮಾವೇ ನಡೆದಿತ್ತು. ಇಂದು ಕೂಡ ನಗರದ ದಿವಾನ್ಸ್ ರಸ್ತೆಯ ಲೋಕಾಯುಕ್ತ ಕಚೇರಿಯಲ್ಲಿ ಹಲವು ನಾಟಕೀಯ ಬೆಳವಣಿಗೆ ನಡೆದವು.

ಕಚೇರಿಯಿಂದ ಕಚೇರಿಗೆ ಅಲೆದರೂ ದೂರು ಸ್ವೀಕರಿಸಲಿಲ್ಲ

ಸ್ನೇಹಮಯಿ ಕೃಷ್ಣ ಲೋಕಾಯುಕ್ತ ಎಸ್ಪಿ ಉದೇಶ್ ಅವರಿಗಾಗಿ ಪೊಲೀಸ್ ಇಲಾಖೆಯ ಕಚೇರಿಯಿಂದ ಕಚೇರಿಗೆ ಅಲೆದರೂ ಯಾರೂ ಕೂಡ ದೂರು ಸ್ವೀಕರಿಸಲಿಲ್ಲ.

ಉದೇಶ್ ನಾಪತ್ತೆಯಾಗಿದ್ದಾರೆ ಎಂದು ದೂರು ನೀಡಲು ದೇವರಾಜ ಪೊಲೀಸ್ ಠಾಣೆಗೆ ಹೋದರೆ ಅಲ್ಲಿ ಇನ್ಸ್‌ಪೆಕ್ಟರ್ ಇರಲಿಲ್ಲ. ಹಾಗಾಗಿ ಅಲ್ಲಿನ ಸಿಬ್ಬಂದಿ ದೂರು ಸ್ವೀಕರಿಸಲು ನಿರಾಕರಿಸಿದರು. ಇನ್ಸ್‌ಪೆಕ್ಟರ್ ಅನುಪಸ್ಥಿತಿಯಲ್ಲಿ ಠಾಣಾಧಿಕಾರಿಯೇ ದೂರು ಸ್ವೀಕರಿಸಬೇಕೆಂದು ಸ್ನೇಹಮಯಿ ಕೃಷ್ಣ ಮನವಿ ಮಾಡಿದರು. ಆದರೆ ನೀವು ಉದೇಶ್ ಅವರಿಗೆ ರಕ್ತ ಸಂಬಂಧಿ ಅಲ್ಲದ ಕಾರಣ ನಿಮ್ಮ ದೂರು ಸ್ವೀಕರಿಸಲು ಸಾಧ್ಯವಿಲ್ಲ ಎಂದು ಠಾಣಾಧಿಕಾರಿ ಸ್ಪಷ್ಟನೆ ನೀಡಿದರು. ದೇವರಾಜ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಹಾಗೂ ಸಿಬ್ಬಂದಿ, ದೂರು ಸ್ವೀಕರಿಸದಿದ್ದಾಗ ಎಸಿಪಿ ಕಚೇರಿಗೆ ತೆರಳಿದರು. ಆದರೆ ಅಲ್ಲಿಯೂ ಎಸಿಪಿ ಇರಲಿಲ್ಲ. ಅಂತಿಮವಾಗಿ ಎಸಿಪಿ ಬರುವ ವರೆಗೂ ಕಾಯುತ್ತೇನೆ ಎಂದು ಅವರ ಕಚೇರಿಯಲ್ಲೇ ಕಾದು ಕುಳಿತರು. ಆದರೆ ಗಂಟೆಗಟ್ಟಲೆ ಕಾದರೂ ಎಸಿಪಿ ಬರಲಿಲ್ಲ. ನಂತರ ನಗರ ಪೊಲೀಸ್ ಆಯುಕ್ತರಿಗೆ ನೇರವಾಗಿ ದೂರು ನೀಡುತ್ತೇನೆ ಎಂದು ಅಲ್ಲಿಗೆ ತೆರಳಿದರು. ಕೊನೆಗೂ ಪೊಲೀಸ್ ಆಯುಕ್ತರ ಕಚೇರಿಗೆ ದೂರು ಸಲ್ಲಿಸಿ, ಸ್ವೀಕೃತಿ ಪತ್ರ ಪಡೆದು ಮರಳಿದರು.

ಇಂದು ಬೆಳಿಗ್ಗೆ 10.15 ಗಂಟೆಗೆ ಸ್ನೇಹಮಯಿ ಕೃಷ್ಣ, ಆಗಮಿಸಿದರು. ಅದಕ್ಕೂ 15 ನಿಮಿಷಗಳ ಮುನ್ನ ಕಚೇರಿಗೆ ಬಂದ ಎಸ್ಪಿ ಉದೇಶ್ ಸ್ವಲ್ಪ ಹೊತ್ತು ಕಚೇರಿಯಲ್ಲಿದ್ದು, ನಿರ್ಗಮಿಸಿದ್ದರು. ಮುಡಾ ಹಗರಣದ ಬಗ್ಗೆ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನಿನ್ನೆ ನೀಡಿದ ಆದೇಶ ಪ್ರತಿಯೊಂದಿಗೆ ಸ್ನೇಹಮಯಿ ಕೃಷ್ಣ ದೂರು ನೀಡಲು ಇಂದು ಮಧ್ಯಾಹ್ನ 12.30 ಗಂಟೆಗೆ ಲೋಕಾಯುಕ್ತ ಕಚೇರಿಗೆ ಆಗಮಿಸಿದರು. ಆದರೆ ದೂರು ಸ್ವೀಕರಿಸಬೇಕಾದ ಎಸ್ಪಿ ಉದೇಶ್ ಕಚೇರಿಯಲ್ಲಿ ಇರಲಿಲ್ಲ. ಎಸ್ಪಿ ಅವರಿಗೇ ದೂರು ನೀಡಬೇಕೆಂದು ಜನಪ್ರತಿನಿಧಿಗಳ ನ್ಯಾಯಾಲಯ ಸೂಚನೆ ನೀಡಿರುವ ಹಿನ್ನೆಲೆಯಲ್ಲಿ ಸ್ನೇಹಮಯಿ ಕೃಷ್ಣ, ಕಾದು ಕುಳಿತರು. ಲೋಕಾಯುಕ್ತ ಕಚೇರಿಯಿಂದಲೇ ಉದೇಶ್ ಅವರಿಗೆ ಸ್ನೇಹಮಯಿ ಕೃಷ್ಣ ಹಲವು ಬಾರಿ ಫೋನ್ ಮಾಡಿದರು. ಎಸ್‌ಎಂಎಸ್ ಹಾಗೂ ವಾಟ್ಸಾಪ್ ಸಂದೇಶ ಕಳುಹಿಸಿದರು. ಆದರೆ ಲೋಕಾಯುಕ್ತ ಎಸ್ಪಿಯಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ.

ಎಸ್ಪಿ ಎಲ್ಲಿಗೆ ಹೋಗಿದ್ದಾರೆ, ಎಷ್ಟೊತ್ತಿಗೆ ಬರುತ್ತಾರೆ ಎಂಬ ಬಗ್ಗೆ ಕಚೇರಿಯಲ್ಲಿ ಮಾಹಿತಿ ಕೇಳಿದರೆ ನಮಗೆ ಗೊತ್ತಿಲ್ಲ ಎಂದು ಸಿಬ್ಬಂದಿ ಸ್ಪಷ್ಟನೆ ನೀಡಿದರು. ತರುವಾಯ ಬೆಂಗಳೂರಿನ ಲೋಕಾಯುಕ್ತ ಕಚೇರಿಗೇನಾದರೂ ಹೋಗಿದ್ದಾರೆಯೇ ಎಂದು ಖಚಿತ ಪಡಿಸಿಕೊಳ್ಳಲು ಅಲ್ಲಿಗೆ ದೂರವಾಣಿ ಕರೆ ಮಾಡಿದಾಗ ಅಲ್ಲೂ ಇಲ್ಲ ಎಂಬ ಮಾಹಿತಿ ಲಭ್ಯವಾಯಿತು. ಗಂಟೆಗಟ್ಟಲೆ ಕಾದಿದ್ದ ಸ್ನೇಹಮಯಿ ಕೃಷ್ಣ ಆಕ್ರೋಶ ವ್ಯಕ್ತಪಡಿಸಿ ಅಲ್ಲಿಂದ ತೆರಳಿದರು.

ಲೋಕಾಯುಕ್ತ ಎಸ್ಪಿ ಉದೇಶ್‌ರನ್ನು ಅಪಹರಣ ಮಾಡಿದ್ದಾರೆ!

ಲೋಕಾಯುಕ್ತ ಎಸ್ಪಿ ಟಿ.ಜೆ.ಉದೇಶ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಂಬಲಿಗರು ಅಪಹರಣ ಮಾಡಿ, ಅಕ್ರಮ ಬಂಧನದಲ್ಲಿಟ್ಟಿರುವ ಸಾಧ್ಯತೆ ಇದೆ ಎಂದು ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ಮುಡಾ ಹಗರಣದ ಬಗ್ಗೆ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶ ಪ್ರತಿ ಹಿಡಿದು ದೂರು ನೀಡಲು ಲೋಕಾಯುಕ್ತ ಕಚೇರಿಗೆ ಆಗಮಿಸಿ ಮಧ್ಯಾಹ್ನ 3 ಗಂಟೆ ತನಕ ಕಾದರೂ ಉದೇಶ್ ಲಭ್ಯವಾಗದ ಕಾರಣ ಆಕ್ರೋಶ ವ್ಯಕ್ತಪಡಿಸಿದರು. ಸರ್ಕಾರ ಕೊಟ್ಟ ದೂರವಾಣಿ ಕರೆ ಸ್ವೀಕರಿಸುತ್ತಿಲ್ಲ, ಎಸ್‌ಎಂಎಸ್, ವಾಟ್ಸಾಪ್ ಸಂದೇಶಕ್ಕೂ ಪ್ರತಿಕ್ರಿಯೆ ನೀಡುತ್ತಿಲ್ಲ. ವಿಶೇಷ ನ್ಯಾಯಾಲಯದ ಆದೇಶಕ್ಕೆ ಸಿದ್ದರಾಮಯ್ಯ ತಡೆಯಾಜ್ಞೆ ತರಲು ಅವಕಾಶ ಮಾಡಿಕೊಡುವ ದುರುದ್ದೇಶದಿಂದ ಉದೇಶ್ ಕಚೇರಿಗೆ ಬಂದಿಲ್ಲ ಎಂದು ದೂರಿದರಲ್ಲದೆ, ಇಲ್ಲವೇ ಸಿದ್ದರಾಮಯ್ಯ ಬೆಂಬಲಿಗರು ಉದೇಶ್ ಅವರನ್ನು ಅಪಹರಿಸಿ ಅಕ್ರಮ ಬಂಧನದಲ್ಲಿಟ್ಟಿದ್ದಾರೆ ಎಂಬ ಅನುಮಾನ ವಿದೆ ಎಂದು ಆಪಾದಿಸಿದರು. ಪ್ರಕರಣ ದಾಖಲಿಸಿಕೊಂಡು ತನಿಖೆ ಮಾಡುವಂತೆ ನ್ಯಾಯಾಲಯ ಆದೇಶ ನೀಡಿದ್ದರೂ ಲೋಕಾಯುಕ್ತ ಎಸ್ಪಿ ಎಫ್‌ಐಆರ್ ದಾಖಲಿಸಿಕೊಳ್ಳಲು ಮೀನಾಮೇಷ ಎಣಿಸುತ್ತಿದ್ದಾರೆ. ಇದರಿಂದ ಲೋಕಾಯುಕ್ತದಲ್ಲಿ ನಿಷ್ಪಕ್ಷಪಾತ ತನಿಖೆ ನಡೆಯಲಿದೆ ಎಂಬ ವಿಶ್ವಾಸವಿಲ್ಲ. ಈ ಹಿನ್ನೆಲೆಯಲ್ಲಿ ಪ್ರಕರಣವನ್ನು ಸಿಬಿಐಗೆ ವಹಿಸ ಬೇಕು. ಇಲ್ಲವೆ ಸಿದ್ದರಾಮಯ್ಯ ರಾಜೀನಾಮೆ ಕೊಟ್ಟು ತನಿಖೆ ಎದುರಿಸಬೇಕು ಎಂದು ಆಗ್ರಹಿಸಿದರು. ಲೋಕಾಯುಕ್ತ ಎಸ್ಪಿ 3 ಗಂಟೆಯಾದರೂ ಕಚೇರಿಗೆ ಆಗಮಿಸದ ಹಿನ್ನೆಲೆಯಲ್ಲಿ ಸ್ನೇಹಮಯಿ ಕೃಷ್ಣ ನಗರದ ದೇವರಾಜ ಪೊಲೀಸ್ ಠಾಣೆಗೆ ದೂರು ನೀಡಲು ಮುಂದಾದರು. ಉದೇಶ್ ಅವರು ನಾಪತ್ತೆಯಾಗಿದ್ದು, ಸಿದ್ದರಾಮಯ್ಯ ಬೆಂಬಲಿಗರು ಅಪಹರಿಸಿ ಅಕ್ರಮ ಬಂಧನದಲ್ಲಿಟ್ಟಿರಬಹುದು ಎಂದು ದೂರಿನಲ್ಲಿ ಉಲ್ಲೇಖಿಸಿದ್ದರು.

ಲೋಕಾಯುಕ್ತ ಎಸ್ಪಿ ಉದೇಶ್ ಅವರ ಮೊಬೈಲ್ ಟವರ್ ಲೊಕೇಷನ್ ದಾಖಲೆಗಳನ್ನು ಪಡೆದುಕೊಳ್ಳಬೇಕು. ಈ ಮೂಲಕ ಉದೇಶ್ ಅವರಿಗೆ ಯಾರು, ಯಾವ ಕಾರಣಕ್ಕೆ ಕರೆ ಮಾಡಿದ್ದಾರೆ, ನೇರವಾಗಿ ಯಾರನ್ನು ಸಂಪರ್ಕ ಮಾಡಿದ್ದಾರೆ ಎಂಬ ಬಗ್ಗೆ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಸ್ನೇಹಮಯಿ ಕೃಷ್ಣ ಮನವಿ ಮಾಡಿದ್ದಾರೆ.

ಜೆಡಿಎಸ್ ನಾಯಕರ ವಿರುದ್ಧ ಲೋಕಾಯುಕ್ತ ಎಸ್ಪಿ ದೂರು ನೀಡಬೇಕು



ಮೈಸೂರು, ಸೆ.26(ಬಿಎಲ್‌ಯು)– ಲೋಕಾಯುಕ್ತ ಎಸ್ಪಿ ಉದೇಶ್ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಜೆಡಿಎಸ್ ಮುಖಂಡರು ಸೇರಿದಂತೆ ಪ್ರದೀಪ್ ಕುಮಾರ್ ವಿರುದ್ಧ ದೂರು ದಾಖಲಿಸಬೇಕು ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ ಆಗ್ರಹಿಸಿದ್ದಾರೆ. ಲೋಕಾಯುಕ್ತರ ಕಚೇರಿಗೆ ನಿನ್ನೆ ಬಂದಿದ್ದ ಜೆಡಿಎಸ್ ಮುಖಂಡರು ಹಾಗೂ ಪ್ರದೀಪ್ ಕುಮಾರ್, ಸರ್ಕಾರಿ ಅಧಿಕಾರಿಗಳ ಕೆಲಸಕ್ಕೆ ಅಡ್ಡಿ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಲೋಕಾಯುಕ್ತ ಎಸ್ಪಿ ಉದೇಶ್ ಅವರೇ ಪೊಲೀಸರಿಗೆ ದೂರು ನೀಡಬೇಕು ಎಂದು ಒತ್ತಾಯಿಸಿದರು. ಈ ಸಂಬಂಧ ಮನವಿ ಮಾಡಲು ಎಸ್ಪಿ ಉದೇಶ್ ಭೇಟಿಗೆ ಆಗಮಿಸಿದ್ದೆವು. ಆದರೆ ಅವರು ನಾಳೆ ಕಚೇರಿಗೆ ಬರುವುದಾಗಿ ತಿಳಿಸಿದ್ದಾರೆ. ನಾಳೆ ಎಸ್ಪಿ ಅವರನ್ನು ಭೇಟಿ ಮಾಡಿ ದೂರು ನೀಡುವಂತೆ ಮನವಿ ಮಾಡುತ್ತೇವೆ ಎಂದು ಲಕ್ಷ್ಮಣ ತಿಳಿಸಿದರು.

ಹೈಕಮಾಂಡ್‌ಗೆ ವರದಿ ನೀಡಿದ ಸಿದ್ದರಾಮಯ್ಯ

ತಮ್ಮ ಬೆನ್ನಿಗೆ ನಿಲ್ಲುವಂತೆ ಮನವಿ

ಬೆಂಗಳೂರು, ಸೆ.26(ಬಿಎಲ್‌ಯು)– ಮುಡಾ ಹಗರಣ ಸಂಬಂಧ ತಮ್ಮ ವಿರುದ್ಧ ಬೆಂಗಳೂರಿನ ಜನಪ್ರತಿನಿಧಿಗಳ ನ್ಯಾಯಾಲಯ ತನಿಖೆಗೆ ಆದೇಶ ನೀಡಿರುವ ಬೆಳವಣಿಗೆ ಕುರಿತಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಹೈಕಮಾಂಡ್‌ಗೆ ವರದಿ ನೀಡಿದ್ದಾರೆ.

ನಿನ್ನೆ ಕೇರಳದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವೇಳೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಅವರಿಗೆ ವಿವರಣೆ ನೀಡಿರುವ ಸಿದ್ದರಾಮಯ್ಯ, ತಮ್ಮ ಸರ್ಕಾರವನ್ನು ಅಸ್ಥಿರಗೊಳಿಸುವ ನಿಟ್ಟಿನಲ್ಲಿ ಬಿಜೆಪಿ ಹಾಗೂ ಜೆಡಿಎಸ್ ನಡೆಸುತ್ತಿರುವ ಷಡ್ಯಂತ್ರದ ಬಗ್ಗೆ ಮಾಹಿತಿ ನೀಡಿದ್ದಾರೆ.

ಹೈಕೋರ್ಟ್ ತೀರ್ಪು ಹಾಗೂ ಜನಪ್ರತಿನಿಧಿಗಳ ನ್ಯಾಯಾಲಯದ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಎಲ್ಲಾ ರೀತಿಯ ಸಿದ್ಧತೆ ಮಾಡಿಕೊಂಡಿದ್ದೇನೆ. ಈ ಸಂಬಂಧ ಕಾನೂನು ತಜ್ಞರ ಅಭಿಪ್ರಾಯ ಪಡೆಯುತ್ತಿದ್ದೇನೆ. ಅಂತಿಮವಾಗಿ ನ್ಯಾಯ ಸಿಗುತ್ತದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಿಪಕ್ಷ ಸರ್ಕಾರ ಕೆಡುವುದು ಕೇಂದ್ರ ಬಿಜೆಪಿ ಸರ್ಕಾರದ ಅಜೆಂಡಾ. ಇದಕ್ಕೆ ಅವಕಾಶ ನೀಡುವುದು ಬೇಡ. ಹೈಕಮಾಂಡ್ ಪ್ರಾರಂಭದಲ್ಲಿ ನನ್ನ ಬೆನ್ನಿಗೆ ನಿಂತಂತೆ ಈಗಲೂ ನನ್ನ ಬೆಂಬಲಕ್ಕೆ ನಿಲ್ಲಬೇಕಿದೆ ಎಂದು ಸಿದ್ದರಾಮಯ್ಯ ವೇಣುಗೋಪಾಲ್ ಬಳಿ ಮನವಿ ಮಾಡಿದ್ದಾರೆ ಎನ್ನಲಾಗಿದೆ.

ಪಕ್ಷದ ಅಧ್ಯಕ್ಷನಾಗಿ ನಾನು ಹೇಳುತ್ತಿದ್ದೇನೆ; ಸಿದ್ದರಾಮಯ್ಯ ರಾಜೀನಾಮೆ ಕೊಡುವ ಅಗತ್ಯವಿಲ್ಲ

ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಪ್ರತಿಪಾದನೆ



ಬೆಂಗಳೂರು, ಸೆ.26– ಮುಖ್ಯಮಂತ್ರಿಗಳು ರಾಜೀನಾಮೆ ನೀಡುವ ಅಗತ್ಯವಿಲ್ಲ. ಹಳ್ಳಿಯಿಂದ ದೆಹಲಿವರೆಗೂ ಕಾಂಗ್ರೆಸ್ ಪಕ್ಷ ನಮ್ಮ ಮುಖ್ಯಮಂತ್ರಿಗಳ ಪರವಾಗಿ ನಿಲ್ಲಲಿದೆ. ಪಕ್ಷದ ಅಧ್ಯಕ್ಷನಾಗಿ ನಾನು ಈ ಮಾತು ಹೇಳುತ್ತಿದ್ದೇನೆ ಎಂದು ಡಿಸಿಎಂ ಡಿಕೆ ಶಿವಕುಮಾರ್ ತಿಳಿಸಿದರು.

ವಿಧಾನಸೌಧದಲ್ಲಿ ಮಾಧ್ಯಮಗಳ ಪ್ರಶ್ನೆಗಳಿಗೆ ಗುರುವಾರ ಪ್ರತಿಕ್ರಿಯಿಸಿದರು. ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಕಾಂಗ್ರೆಸ್ ನಾಯಕ ಹಾಗೂ ಮಾಜಿ ಸ್ಪೀಕರ್ ಕೋಳಿವಾಡ ಅವರ ಹೇಳಿಕೆ ಬಗ್ಗೆ ಕೇಳಿದಾಗ, ಕೆಪಿಸಿಸಿ ಅಧ್ಯಕ್ಷ ನಾನು, ಕೆಪಿಸಿಸಿ ಶಿಸ್ತು ಸಮಿತಿ ಅಧ್ಯಕ್ಷರು ರೆಹಮಾನ್ ಖಾನ್. ಇಲ್ಲಿ ನಾನೇ ಹೇಳುತ್ತಿದ್ದೇನಲ್ಲ. ಅವರ ರಾಜೀನಾಮೆ ಪ್ರಶ್ನೆಯೇ ಉದ್ಭವ ಆಗುವುದಿಲ್ಲ ಎಂದು ಹೇಳಿದರು.

ನಮ್ಮ ಮುಖ್ಯಮಂತ್ರಿಗಳ ವಿರುದ್ಧ ಬಿಜೆಪಿ ಹಾಗೂ ಜೆಡಿಎಸ್‌ನವರು ರಾಜಕೀಯವಾಗಿ ಷಡ್ಯಂತ್ರ ರೂಪಿಸುತ್ತಿದ್ದು, ನಮ್ಮ ಗ್ಯಾರಂಟಿ ಯೋಜನೆಗಳು ಜನರನ್ನು ತಲುಪುತ್ತಿರುವುದನ್ನು ಸಹಿಸಲು ವಿರೋಧ ಪಕ್ಷಗಳಿಂದ ಸಾಧ್ಯವಾಗುತ್ತಿಲ್ಲ ಎಂದು ತಿಳಿಸಿದರು. ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿರುವ ದೊಡ್ಡ ರಾಜ್ಯ ಕರ್ನಾಟಕ. ಇಲ್ಲಿ ನಮ್ಮ ಸರ್ಕಾರ ಇರುವುದನ್ನು ಸಹಿಸಲು ಅವರಿಂದ ಸಾಧ್ಯವಾಗುತ್ತಿಲ್ಲ ಸಿಎಂ ರಾಜೀನಾಮೆ ನೀಡುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದರು. ಸಿದ್ದರಾಮಯ್ಯ ಅವರ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಅವರ ಟೀಕೆ ಬಗ್ಗೆ ಕೇಳಿದಾಗ, ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರದ ವೇಳೆ ಸಿಎಂ ಸಿದ್ದರಾಮಯ್ಯ ಅವರ ವಿಚಾರ ಪ್ರಸ್ತಾಪ ಮಾಡುತ್ತಿದ್ದು, ಈ ವಿಚಾರದಲ್ಲಿ ಅವರು ರಾಜಕಾರಣ ಮಾಡುತ್ತಿದ್ದಾರೆ. ಅವರ ಸರ್ಕಾರದ ಸಚಿವರುಗಳು ಅನೇಕ ಪ್ರಕರಣಗಳ ತನಿಖೆ ಎದುರಿಸುತ್ತಿದ್ದು, ಮೊದಲು ಅವರನ್ನು ಸಚಿವ ಸಂಪುಟದಿಂದ ಕೈಬಿಡಲಿ. ನಂತರ ಈ ಬಗ್ಗೆ ಚರ್ಚೆ ಮಾಡಲಿ ಎಂದು ತಿಳಿಸಿದರು.

ಸಿಎಂ ಸಿದ್ದರಾಮಯ್ಯ ವಿರುದ್ಧ ನ್ಯಾಯಾಲಯ ಆದೇಶ: ಮೇಲ್ಮನವಿ ಸಲ್ಲಿಸಲು ಕಾನೂನು ತಜ್ಞರೊಂದಿಗೆ ಸಮಾಲೋಚನೆ

ಬೆಂಗಳೂರು, ಸೆ.26– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (MUDA) ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ತನಿಖೆಗೆ ರಾಜ್ಯಪಾಲರ ಅನುಮತಿಯನ್ನು ಎತ್ತಿಹಿಡಿದಿರುವ ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಮೇಲ್ಮನವಿ ಸಲ್ಲಿಸುವ ಕುರಿತು ಹಿರಿಯ ವಕೀಲರು ಮತ್ತು ತಜ್ಞರೊಂದಿಗೆ ಸಮಾಲೋಚನೆ ನಡೆಸಲಾಗುತ್ತಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪ್ರಮುಖ ಕಾನೂನು ಸಲಹೆಗಾರರು ತಿಳಿಸಿದ್ದಾರೆ.

ಮುಡಾ ಪ್ರಕರಣದಲ್ಲಿ ಸಿದ್ದರಾಮಯ್ಯ ವಿರುದ್ಧ ಲೋಕಾಯುಕ್ತ ಪೊಲೀಸರ ತನಿಖೆಗೆ ವಿಶೇಷ ನ್ಯಾಯಾಲಯ ಬುಧವಾರ ಆದೇಶಿಸಿದ್ದು, ಅವರ ವಿರುದ್ಧ ಎಫ್‌ಐಆರ್ ದಾಖಲಾಗುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

ಮುಡಾದಿಂದ ಸಿಎಂ ಸಿದ್ದರಾಮಯ್ಯನವರ ಪತ್ನಿ ಪಾರ್ವತಿ ಅವರ ಹೆಸರಿಗೆ 14 ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಮೇಲೆ ಸಿಎಂ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸಲು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ನೀಡಿದ್ದ ಅನುಮತಿಯನ್ನು ಹೈಕೋರ್ಟ್ ಏಕಸದಸ್ಯ ಪೀಠ ಎತ್ತಿ ಹಿಡಿದ ಮರುದಿನವೇ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಆದೇಶ ಹೊರಬಿದ್ದಿದೆ.

ನಾವು ಮೊದಲಿನಿಂದಲೂ ಹೇಳುತ್ತಾ ಬಂದಿದ್ದೇವೆ, ಯಾವುದೇ ತನಿಖೆಯಾಗಲಿ, ಅದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ಕಾನೂನುಬದ್ಧವಾಗಿ ನಡೆದಿರುವ ಕೆಲವು ಲೋಪದೋಷಗಳನ್ನು ಸರಿಪಡಿಸಬೇಕು, ಇದು ನಮ್ಮ ಕರ್ತವ್ಯ ಎಂದು ಕಾಂಗ್ರೆಸ್ ಶಾಸಕ, ಹಿರಿಯ ವಕೀಲರು ಮತ್ತು ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಎಎಸ್ ಪೊನ್ನಣ್ಣ ಇಂದು ಸುದ್ದಿಗಾರರಿಗೆ ತಿಳಿಸಿದರು.

ವಕೀಲರು ಮತ್ತು ಹಿರಿಯ ವಕೀಲರೊಂದಿಗೆ ಚರ್ಚೆ ನಡೆಯುತ್ತಿದೆ. ಪ್ರಕರಣದಲ್ಲಿ ವಾದ ಮಂಡಿಸಿದ ದೆಹಲಿಯಲ್ಲಿರುವ ನಮ್ಮ ಹಿರಿಯ ವಕೀಲರಾದ ಅಭಿಷೇಕ್ ಮನು ಸಿಂಘ್ವಿ ಅವರ ಸಲಹೆಯನ್ನು ಪಡೆಯಲು ಪ್ರಯತ್ನಿಸುತ್ತಿದ್ದು, ಒಂದೆರಡು ದಿನಗಳಲ್ಲಿ ನಾವು ನಮ್ಮ ನಿಲುವನ್ನು ಸ್ಪಷ್ಟಪಡಿಸುತ್ತೇವೆ ಎಂದರು.

ಹೈಕೋರ್ಟ್ ತೀರ್ಪನ್ನು ಉಲ್ಲೇಖಿಸಿ ಮಾತನಾಡಿದ ಪೊನ್ನಣ್ಣ, ರಾಜ್ಯಪಾಲರ ಮನವೊಲಿಕೆ ಇಲ್ಲ ಎಂಬುದು ನಮ್ಮ ವಾದವಾಗಿತ್ತು. ಮನಸ್ಸಿನ ಅನ್ವಯ ಎಂಬ ಈ ಕಾನೂನು ತತ್ವ ರಾಜ್ಯಪಾಲರಿಗೆ ಮಾತ್ರ ಸೀಮಿತವಲ್ಲ ನ್ಯಾಯಾಲಯಕ್ಕೂ ಅನ್ವಯಿಸುತ್ತದೆ ಎಂದು.

ಆರ್‌ಟಿಐ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಅವರು ಸಲ್ಲಿಸಿದ್ದ ದೂರಿನ ಅನ್ವಯ ಸಿದ್ದರಾಮಯ್ಯ ವಿರುದ್ಧ ತನಿಖೆ ನಡೆಸುವಂತೆ ಮೈಸೂರಿನ ಲೋಕಾಯುಕ್ತ ಪೊಲೀಸರಿಗೆ ನ್ಯಾಯಾಲಯ ಸೂಚಿಸಿದೆ. ಸಿಎಂ ವಿರುದ್ಧದ ಪ್ರಕರಣ ಸಂಪೂರ್ಣ ರಾಜಕೀಯಪ್ರೇರಿತ. ಯಾವುದೇ ತನಿಖೆ ಅಥವಾ ವಿಚಾರಣೆ ನಡೆಯಲಿ, ಸತ್ಯವನ್ನು ಮರೆಮಾಡಲು ಸಾಧ್ಯವಿಲ್ಲ ಎಂದು ಪೊನ್ನಣ್ಣ ಹೇಳಿದ್ದಾರೆ.

ಛಾಯಾಚಿತ್ರ, ವಿಡಿಯೋ ಚಿತ್ರೀಕರಣ ನಿಷೇಧ

ಮೈಸೂರು, ಸೆ26– ಚಾಮುಂಡಿ ಬೆಟ್ಟದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಾಲಯಕ್ಕೆ ದರ್ಶನಾರ್ಥವಾಗಿ ಬರುವ ಸರ್ವರಿಗೂ ಅ.1 ರಿಂದ ಶ್ರೀಯವರ ದೇವಾಲಯದ ಒಳಾಂಗಣದಲ್ಲಿ (ಗರ್ಭಗುಡಿ, ಭಕ್ತರ ಅಂಕಣ ಒಳಗೊಂಡಂತೆ) ಛಾಯಾಚಿತ್ರ ತೆಗೆಯುವುದು ಹಾಗೂ ವಿಡಿಯೋ ಚಿತ್ರೀಕರಣ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಿದ್ದು, ದೇವಾಲಯದ ಒಳಗೆ ಬರುವ ಪ್ರತಿಯೊಬ್ಬರು ತಮ್ಮ ಮೊಬೈಲ್ ಫೋನ್‌ಗಳನ್ನು ಕಡ್ಡಾಯವಾಗಿ ಆಫ್ ಮಾಡಿ ಪ್ರವೇಶಿಸತಕ್ಕದ್ದು ಎಂದು ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೂಲ ಸೌಕರ್ಯಕ್ಕಾಗಿ ಗ್ರಾಮಾಡಳಿತಾಧಿಕಾರಿಗಳ ಪ್ರತಿಭಟನೆ

ಹಳ್ಳಿಯ ಅರಳಿಕಟ್ಟೆ, ಸೇತುವೆ ತಡೆಗೋಡೆ ಮೇಲೆ ಕುಳಿತು ಕಾರ್ಯ ನಿರ್ವಹಿಸುವ ದುರ್ಗತಿಗೆ ವಿಷಾದ



ಕಾರ್ಯ ನಿರ್ವಹಣೆಗೆ ಮೂಲ ಸೌಲಭ್ಯಕ್ಕೆ ಆಗ್ರಹಿಸಿ ಗ್ರಾಮ ಆಡಳಿತಾಧಿಕಾರಿಗಳು ಪ್ರತಿಭಟನೆ ನಡೆಸಿದರು.

ಮೈಸೂರು, ಸೆ26(ಎಸ್‌ಬಿಡಿ)– ಕಚೇರಿ ಸೇರಿದಂತೆ ಕಾರ್ಯ ನಿರ್ವಹಣೆಗೆ ಅಗತ್ಯವಾದ ಮೂಲ ಸೌಕರ್ಯ ಕಲ್ಪಿಸುವಂತೆ ಆಗ್ರಹಿಸಿ, ಕರ್ನಾಟಕ ರಾಜ್ಯ ಗ್ರಾಮ ಆಡಳಿತಾಧಿಕಾರಿಗಳ ಕೇಂದ್ರ ಸಂಘ ಜಿಲ್ಲಾ ಘಟಕದ ವತಿಯಿಂದ ತಾಲೂಕು ಕಚೇರಿ ಬಳಿ ಪ್ರತಿಭಟನೆ ನಡೆಸಲಾಯಿತು.

ರಾಜ್ಯಾದ್ಯಂತ ತಾಲೂಕು ಮಟ್ಟದಲ್ಲಿ ಪ್ರತಿಭಟನೆಗೆ ಕರೆ ನೀಡಿದ್ದರ ಹಿನ್ನೆಲೆಯಲ್ಲಿ ಮೈಸೂರು ತಾಲೂಕಿನ ನೂರಾರು ಗ್ರಾಮ ಆಡಳಿತಾಧಿಕಾರಿಗಳು ಕರ್ತವ್ಯ ಬಹಿಷ್ಕರಿಸಿ, ಕೈಗೆ ಕಪ್ಪು ಪಟ್ಟಿ ಧರಿಸಿ ಪ್ರತಿಭಟನೆ ನಡೆಸಿದರು. ಗ್ರಾಮ ಆಡಳಿತಾಧಿಕಾರಿಗಳ ಮುಷ್ಕರಕ್ಕೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬಾಹ್ಯ ಬೆಂಬಲ ನೀಡಿದ್ದು, ಜಿಲ್ಲಾಧ್ಯಕ್ಷರೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಗ್ರಾಮ ಆಡಳಿತಾಧಿಕಾರಿಗಳ ಸಂಘದ ಜಿಲ್ಲಾಧ್ಯಕ್ಷ ನಾಗೇಶ್ ಕುವಾರ್ ಮಾತನಾಡಿ, ಸರ್ಕಾರಗಳ ಯಾವುದೇ ಯೋಜನೆಗಳ ಅನುಷ್ಠಾನ ಹಾಗೂ ಯಶಸ್ಸಿನಲ್ಲಿ ಗ್ರಾಮ ಆಡಳಿತಾಧಿಕಾರಿಗಳ ಪಾತ್ರ ಮಹತ್ವದ್ದಾಗಿದೆ. ನಾವು ಬೇರು ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತೇವೆ. ಆದರೆ ನಮಗೊಂದು ಕಚೇರಿ ಇಲ್ಲದೆ ನಾವು ಹಳ್ಳಿಗಳ ಅರಳಿ ಕಟ್ಟೆ ಅಥವಾ ಯಾವುದೋ ಸೇತುವೆ ತಡೆಗೋಡೆ ಮೇಲೆ ಕುಳಿತುಕೊಂಡು ಕೆಲಸ ಮಾಡಬೇಕಾದ ದುಃಸ್ಥಿತಿ ಇದೆ ಎಂದು ಬೇಸರ ವ್ಯಕ್ತಪಡಿಸಿದರು.

ವಿವಿಧ ಯೋಜನೆಗಳು ಹಾಗೂ ಕಾರ್ಯಕ್ರಮಗಳಿಗೆ ಸಂಬಂಧಿಸಿದ 21 ಆಪ್‌ಗಳ ಮೂಲಕ ನಾವು ಕಾರ್ಯ ನಿರ್ವಹಿಸಬೇಕು. ಆದರೆ ನಮಗೊಂದು ಲ್ಯಾಪ್‌ಟಾಪ್ ನೀಡಿಲ್ಲ. ನಮ್ಮ ಮೊಬೈಲ್‌ನಲ್ಲೇ ಅಷ್ಟೊಂದು ಆಪ್‌ಗಳನ್ನು ಡೌನ್‌ಲೋಡ್ ಮಾಡಿಕೊಂಡು ಕೆಲಸ ಮಾಡಬೇಕು. ಪದೇ ಪದೆ ಹ್ಯಾಂಗ್ ಆಗುತ್ತದೆ. ಮೊಬೈಲ್ ಕೆಟ್ಟರೆ ಕೆಲಸಕ್ಕೆ ತೊಂದರೆಯಾಗುತ್ತದೆ. ಇಂಟರ್‌ನೆಟ್ ಸೌಲಭ್ಯವನ್ನೂ ನೀಡಿಲ್ಲ. ನಮ್ಮ ಸಮಸ್ಯೆಗಳ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಸರ್ಕಾರ ಕ್ರಮ ಕೈಗೊಂಡಿಲ್ಲ. ಕನಿಷ್ಠ ಒಂದು ಸಭೆ ಕರೆದು ಸಮಸ್ಯೆ ಆಲಿಸಿಲ್ಲ. ಆದ್ದರಿಂದ ಇಂದು ತಾಲೂಕು ಮಟ್ಟದಲ್ಲಿ ಪ್ರತಿಭಟನೆ ನಡೆಸಿದ್ದು, ಈಗಲೂ ನಿರ್ಲಕ್ಷ್ಯ ವಹಿಸಿದರೆ ಕರ್ತವ್ಯ ಬಹಿಷ್ಕರಿಸಿ, ಜಿಲ್ಲಾಧಿಕಾರಿಗಳ ಕಚೇರಿ ಬಳಿ, ನಂತರ ಫ್ರೀಡಂ ಪಾರ್ಕ್‌ನಲ್ಲೂ ಮುಷ್ಕರ ನಡೆಸುವುದು ಅನಿವಾರ್ಯವಾಗಿದೆ ಎಂದು ಎಚ್ಚರಿಕೆ ನೀಡಿದರು.

ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಗೋವಿಂದರಾಜು ಮಾತನಾಡಿ, ಸರ್ಕಾರಿ ನೌಕರರ ಸಂಘವು ಗ್ರಾಮ ಆಡಳಿತಾಧಿಕಾರಿಗಳ ಹೋರಾಟಕ್ಕೆ ಬಾಹ್ಯ ಬೆಂಬಲ ನೀಡಿದೆ. ಇವರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸರ್ಕಾರ ಕೂಡಲೇ ಕ್ರಮ ವಹಿಸಬೇಕು. ಹೆಚ್ಚು ಜವಾಬ್ದಾರಿ ನೀಡಿ, ಮೂಲ ಸೌಕರ್ಯಗಳನ್ನೇ ಕಲ್ಪಿಸದಿದ್ದರೆ ಕಾರ್ಯ ನಿರ್ವಹಿಸಲು ಹೇಗೆ ಸಾಧ್ಯ?. ಸಮರ್ಪಕ ಸೌಲಭ್ಯಗಳ ಜೊತೆಗೆ ವೇತನ ಪರಿಷ್ಕರಣೆಗೂ ಕ್ರಮವಹಿಸಬೇಕಿದೆ ಎಂದು ಒತ್ತಾಯಿಸಿದರು.

ಕಂದಾಯ ನೌಕರರ ಸಂಘದ ಜಿಲ್ಲಾಧ್ಯಕ್ಷ ಸುರೇಶ್, ಮೈಸೂರು ತಾಲೂಕು ಅಧ್ಯಕ್ಷ ಭಾಸ್ಕರ್, ಶಿರಸ್ತೇದಾರ್‌ಗಳಾದ ಭರತ್ ಕುಮಾರ್, ಮಂಜುನಾಥ್ ಆನಂದ್, ಆರ್‌ಐಗಳಾದ ಹೇಮಂತ್ ಶಂಕರ್, ಲೋಹಿತ್, ಶಿವಕುಮಾರ್, ನಾಗರಾಜು, ಗ್ರಾಮ ಆಡಳಿತ ಅಧಿಕಾರಿಗಳಾದ ಭಾರತೀಶ, ಲೋಕೇಶ್, ಮಹೇಶ್, ಅಬ್ದುಲ್ ರಶೀದ್, ಜಗದೀಶ್, ಯೋಗಾನಂದ, ಮಹೇಶ್, ಸರ್ವೆ ಇಲಾಖೆಯ ರಮೇಶ್ ಕುವಾರ್, ಜಯಪ್ಪ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಮೈಸೂರು ರೇಸ್

8ನೇ ದಿನ, ಶುಕ್ರವಾರ, 27–9–2024

ಇಂದಿನ ರೇಸ್‌ಗೆ ನಮ್ಮ ಆಯ್ಕೆ

ಮೊದಲನೇ ರೇಸ್ ಮಧ್ಯಾಹ್ನ 1.30 ಗಂಟೆಗೆ

I. ಪೆನಂಬೂರ್ ಪ್ಲೇಟ್–1600 ಮೀ. ರೇಟೆಡ್ 00 ರಿಂದ 25. ಮಧ್ಯಾಹ್ನ 1.30ಕ್ಕೆ
1. ಡಬ್ಬಲ್ ವಿಷನ್ 2. ಕ್ವಿಕ್ ವಿಟೇಡ್ 3. ಸ್ಟೋನ್ ಹೌಸ್

II. ಶಿಂಷ ಪ್ಲೇಟ್ –1100 ಮೀ. ರೇಟೆಡ್ 20 ರಿಂದ 45. (ಮೈಸೂರು ಬೇಸ್ಡ್ ಹಾರ್ಸ್). ಮ.2.00ಕ್ಕೆ
1. ಫ್ಲೈಯಿಂಗ್ ಫಾಲ್ಕನ್ 2. ಐಲ್ಯಾಂಡ್ ಲಾಸ್ 3. ಸ್ಕೈಸ್ಟ್ರಾಮ್

III. ಆಂಟಿ ಪಿಫ್ ಪ್ಲೇಟ್–1400 ಮೀ. ರೇಟೆಡ್ 00 ರಿಂದ 25. (ಮೈಸೂರು ಬೇಸ್ಡ್ ಹಾರ್ಸ್). ಮಧ್ಯಾಹ್ನ 2.30ಕ್ಕೆ
1. ವೈಟ್‌ಲೈಸ್ 2 ಸಿಟಿ ಆಫ್ ಹಸ್ಬಲ್ 3. ಫೆಲಿಸಿಟಾ

IV. ರಂಗ ಫ್ಯಾಮಿಲಿ ಟ್ರೋಫಿ ಡಿ1–1400 ಮೀ. ರೇಟೆಡ್ 20 ರಿಂದ 45. (ನೋ ವ್ಹಿಪ್) ಮ.3.00ಕ್ಕೆ
1. ಡಿಸಿಪ್ಲಿ 2. ರಿವರ್ ಆಫ್ ಗೋಲ್ಡ್ 3. ಆಲೀಸ್ ಬ್ಲೂ

V. ಎಂ.ಬಿ.ಅಪ್ಪಯ್ಯ ಮೆಮೋರಿಯಲ್ ಟ್ರೋಫಿ –1400 ಮೀ. ರೇಟೆಡ್ 60 ಮತ್ತು ಮೇಲ್ವರ್ಗ. ಮ.3.30ಕ್ಕೆ
1. ಸ್ಟೆಲ್ಲಾಂಟೀಸ್ 2. ಅರಲೀನಾ 3.ಗ್ರಿಜ್ಲಲೀ

VI. ಮಹಾರಾಜಸ್ ಕಪ್ –1600 ಮೀ. 4 ವರ್ಷ (ಟರ್ಮ್ಸ್) ಸಂ.4.00ಕ್ಕೆ
1. ಶಾಮ್‌ರಾಕ್ 2. ಒನ್ಸ್ ಯೂ ಗೋ ಬ್ಯಾಕ್ 3. ಐರನ್ ಕ್ಲಾಡ್

VII. ರಂಗ ಫ್ಯಾಮಿಲಿ ಟ್ರೋಫಿ ಡಿ2–1400 ಮೀ. ರೇಟೆಡ್ 20 ರಿಂದ 45. (ನೋ ವ್ಹಿಪ್). ಸಂ.4.30ಕ್ಕೆ
1. ಟ್ರೂ ಪಂಚ್ 2. ರೆಡ್ ಫಾಲ್ಕನ್ 3. ಇನ್‌ಫಿನಿಟಿ ಪಾಸಿಬಿಲಿಟಿ

VIII. ದಿ ಸನ್ ಆಫ್ ದ ಲೈಟ್ ಪ್ಲೇಟ್–1200 ಮೀ. ರೇಟೆಡ್ 20 ರಿಂದ 45. (ಮೈಸೂರ್ ಬೇಸ್ಡ್ ಹಾರ್ಸ್). ಸಂ.5.30ಕ್ಕೆ
1. ಸಾರ್ಜೆಂಟ್ ರಕ್‌ಲೆಸ್ 2. ಡಿ ಡಾನ್ ಕಿಂಗ್ 3. ಸೂಪರ್ ಸೆಕ್ಸಿ

ದಿನದ ಅತ್ಯುತ್ತಮ	ಡಿಸಿಪ್ಲಿ
ಡಬ್ಬಲ್	ಸ್ಟೆಲ್ಲಾಂಟೀಸ್, ಶಾಮ್‌ರಾಕ್
ಜಾಕ್‌ಪಾಟ್	3, 4, 5, 6 ಮತ್ತು 7
ಮಿನಿ ಜಾಕ್‌ಪಾಟ್	4, 5, 6 ಮತ್ತು 7
I ಟ್ರಿಬಲ್	1, 2 ಮತ್ತು 3
II ಟ್ರಿಬಲ್	3, 4 ಮತ್ತು 5
III ಟ್ರಿಬಲ್	6, 7 ಮತ್ತು 8
ಎಕ್ಸ್‌ಆಕ್ಟ್	1 ರಿಂದ 9

ಟಿಪ್‌ಸ್ಟರ್ ಪಿಜೆಸಿ

ಯುವ ಸಂಭ್ರಮದಲ್ಲಿ ಶ್ರೀರಾಮನ ಯಶೋಗಾಥೆ, ದುರ್ಗೆಯ ಆರಾಧನೆ, ನಾಡು–ನುಡಿಗೆ ನಮನ

ನೃತ್ಯ-ಸಂಗೀತ ವೈಭವಕ್ಕೆ ಮನಸೋತ ಭಾರಿ ಪ್ರೇಕ್ಷಕ ಸಮೂಹ

ಮೈಸೂರು, ಸೆ.26(ಎಂಕೆ)– ನೃತ್ಯ–ಸಂಗೀತ ವೈಭವದೊಂದಿಗೆ ಶ್ರೀರಾಮನ ಯಶೋಗಾಥೆ, ದುರ್ಗೆಯ ಆರಾಧನೆ, ನಾಡು–ನುಡಿಗೆ ಮಹಾನ್ ಕೊಡುಗೆ ನೀಡಿದ ಸಾಧಕರ ಸ್ಮರಣೆ...!

ಜಗತ್ಪ್ರಸಿದ್ಧ ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಮೈಸೂರು ವಿವಿ ಮಾನಸ ಗಂಗೋತ್ರಿ ಬಯಲು ರಂಗಮಂದಿರ ಸಾಂಸ್ಕೃತಿಕ ವೇದಿಕೆಯಲ್ಲಿ ನಡೆಯುತ್ತಿರುವ ದಸರಾ ಯುವ ಸಂಭ್ರಮದಲ್ಲಿ ಗುರುವಾರ ನೃತ್ಯ–ಸಂಗೀತ ವೈಭವ ಮನೆ ಮಾಡಿತ್ತು. ವಿಶೇಷಚೇತನ ಮಕ್ಕಳಿಂದ ಮರ್ಯಾದಾ ಪುರುಷೋತ್ತಮ ಶ್ರೀರಾಮನ ಯಶೋಗಾಥೆ ಪರಿಚಯವಾದರೆ, ದೇಶದ ಏಕತೆ–ಸಮಗ್ರತೆಗೆ ಕೊಡುಗೆ ನೀಡಿದ ಮಹಾತ್ಮರನ್ನು ಸ್ಮರಿಸಲಾಯಿತು.

ಮಂಡ್ಯದ ಹಲ್ಲೆಗೆರೆಯ ಶ್ರೀ ಚನ್ನಕೇಶವಸ್ವಾಮಿ ಸಂಯುಕ್ತ ಪದವಿ ಪೂರ್ವ ಕಾಲೇಜು ತಂಡದ ವಿದ್ಯಾರ್ಥಿಗಳು 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು', ಬಾರಿಸು ಕನ್ನಡ ಡಿಂಡಿಮ' ನೃತ್ಯದ ಮೂಲಕ ಕನ್ನಡಾಭಿಮಾನ ಮೆರೆದರೆ, ಮೈಸೂರು ಕುವೆಂಪುನಗರದ ರತ್ನ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್‌ನ ತಂಡ ಭಾರತೀಯ ಸೈನಿಕರ ಶೌರ್ಯ–ಸಾಹಸದ ಕುರಿತು ಬೆಳಕು ಚೆಲ್ಲಿದರು.

ಮೈಸೂರಿನ ಆರ್‌ಕೆ ಪದವಿ ಪೂರ್ವ ಕಾಲೇಜಿನ ಮಕ್ಕಳು ಇಸ್ರೋ ಸಾಧನೆ, ಚಂದ್ರಯಾನ ಕುರಿತು ಮನೋಜ್ಞ ನೃತ್ಯದ ಮೂಲಕ ತಿಳಿಸಿದರೆ, ಮಾತೃ ಮಂಡಳಿ ಕಾಲೇಜು ತಂಡದ ವಿದ್ಯಾರ್ಥಿಗಳು ನವ ದುರ್ಗೆಯರ ಅವತಾರ ದೊಂದಿಗೆ ಮಹಿಷ ಸಂಹಾರ ನೃತ್ಯ ಪ್ರದರ್ಶನ ನೀಡಿದರು.

ಸಾಧಕರ ಸ್ಮರಣೆ: ಶ್ರೀರಂಗಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ತಂಡ ವಿದ್ಯಾರ್ಥಿಗಳು ಮಾದರಿ ಮೈಸೂರು ನಿರ್ಮಾಣಕ್ಕೆ ಅಪಾರ ಕೊಡುಗೆ ನೀಡಿದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ಸ್ಮರಿಸಿದರು. 'ಮರೆಯೋದುಂಟೆ ಮೈಸೂರು ದೊರೆಯ' ಎಂಬ ಹಿನ್ನೆಲೆ ಸಂಗೀತಕ್ಕೆ ಮೈಸೂರು ಸಂಸ್ಥಾನಕ್ಕೆ ಒಡೆಯರ್ ನೀಡಿದ ಕೊಡುಗೆಯನ್ನು ಎಳೆಎಳೆಯಾಗಿ ತಿಳಿಸಿಕೊಟ್ಟರು.



ಮಾತೃ ಮಂಡಳಿ ಕಾಲೇಜು ವಿದ್ಯಾರ್ಥಿಗಳಿಂದ ದುರ್ಗೆಯ ಆರಾಧನೆ

ಶ್ರೀರಾಮನ ಯಶೋಗಾಥೆ...

ಮೈಸೂರಿನ ಮೈತ್ರಿ ವಿಶೇಷ ಶಾಲೆ ಮಕ್ಕಳ ರಾಮಾಯಣ ದೃಶ್ಯ ಕಾವ್ಯವನ್ನು ಪ್ರಸ್ತುತಪಡಿಸುವ ಮೂಲಕ ಮರ್ಯಾದಾ ಪುರುಷೋತ್ತಮ ಶ್ರೀರಾಮನ ಯಶೋಗಾಥೆ ಸ್ಮರಿಸಿದರು. ರಾಮ, ಲಕ್ಷ್ಮಣ, ಸೀತೆ, ಆಂಜನೇಯ, ರಾವಣ ವೇಷಭೂಷಣದಲ್ಲಿ ಗಮನ ಸೆಳೆದ ವಿಶೇಷಚೇತನ ಮಕ್ಕಳು, ಹಾಡಿಗೆ ಅನುಸಾರ ನೃತ್ಯ ಮತ್ತು ಅಭಿನಯದ ಮೂಲಕ ನಾವ್ಯಾರಿಗೂ ಕಮ್ಮಿ ಇಲ್ಲ ಎಂಬುದನ್ನು ಸಾಬೀತುಪಡಿಸಿದರು.

ಹಾಗೆಯೇ ಬಂಗಾರದಂತಹ ಬೆಳೆ ಬೆಳೆದು ದೇಶಕ್ಕೆ ಅನ್ನ ನೀಡುವ ರೈತರ ತ್ಯಾಗ ತಿಳಿಸಿದ ಮೈಸೂರಿನ ವಿಎಸ್‌ಎಸ್ ಪ್ರಥಮ ದರ್ಜೆ ಕಾಲೇಜು ತಂಡ, ರೈತರ ಜೊತೆಗೆ ಯೋಧರು, ಮಹಾತ್ಮ ಗಾಂಧಿ, ಅಂಬೇಡ್ಕರ್ ಹಾಗೂ ವಿವಿಧತೆಯಲ್ಲಿ ಏಕತೆಯ ರಾಷ್ಟ್ರ ನಮ್ಮದಾಗಿದೆ ಎಂಬುದನ್ನು ಸಾರಿದರು.

ವಿನೇಶ್ ಫೋಗಟ್ ಪರಾಕ್ರಮ: ಒಲಂಪಿಯನ್ ಕುಸ್ತಿಪಟು ವಿನೇಶ್ ಫೋಗಟ್ ಸಾಧನೆ ಬಿತ್ತರಿಸಿದ ವಿಜಯನಗರ 2ನೇ ಹಂತದ ದೇವಲ ಮಹರ್ಷಿ ಟ್ರಿನಿಟಿ ಪ್ರಥಮ ದರ್ಜೆ ಕಾಲೇಜು ತಂಡ, ದಂಗಲ್ ಕುಸ್ತಿಪಟು ವಿನೇಶ ಸಾಹಸ, ಪರಾಕ್ರಮ, ಸಾಧನೆ ಹಾಗೂ ಒಲಂಪಿಕ್‌ನಿಂದ ಅನರ್ಹಗೊಂಡಾಗ ಅನುಭವಿಸಿದ ನಿರಾಶೆಯನ್ನು ಮೆಲುಕು ಹಾಕಿದರು.

ಅಜ್ಜಿ ಕಥೆಯೊಂದಿಗೆ ಡಾ.ಪುನೀತ್ ನೆನಪು: ಯುವ ಸಂಭ್ರಮಕ್ಕೆ ವಿಶೇಷ ಮೆರುಗು ನೀಡಿದ ವಿಶೇಷಚೇತನ ಮಕ್ಕಳು ದಿವಂಗತ ಡಾ.ಪುನೀತ್ ರಾಜ್‌ಕುಮಾರ್ ಸ್ಮರಣೆಯೊಂದಿಗೆ ಅಜ್ಜಿ ಮತ್ತು ಹುಂಜದ ಕತೆಯನ್ನು ತಿಳಿಸಿಕೊಟ್ಟರು. ಮೈಸೂರು ಸರಸ್ವತಿಪುರಂನ ನಿರೀಕ್ಷಾ ವಿಶೇಷ ಶಾಲೆ ಮಕ್ಕಳು ಜಂಬದ ಅಜ್ಜಿ ಮತ್ತು ಆಕೆಯ ಹುಂಜ ಕೂಗಿದರೆ ಬೆಳಕಾಗುವುದಿಲ್ಲ, ಹಗಲು ಮತ್ತು ರಾತ್ರಿ ಸೃಷ್ಟಿಯ ನಿಯಮವಾಗಿದ್ದು, ಸಹಬಾಳ್ವೆಯಿಂದ ಎಲ್ಲರು ಬದುಕಬೇಕು ಎಂಬುದನ್ನು ಅಮೋಘ ನೃತ್ಯದ ಮೂಲಕ ತೋರಿಸಿದರು.

ಹಾಗೆಯೇ ಮತ್ತೊಂದು ವಿಶೇಷಚೇತನ ಮಕ್ಕಳ ತಂಡ ಗುರು ಭಕ್ತಿ ಸ್ಮರಣೆಯ ಜೊತೆಗೆ ದಿವಂಗತ ಖ್ಯಾತ ನಟ ಡಾ.ಪುನೀತ್ ರಾಜ್‌ಕುಮಾರ್ ಅವರನ್ನು ಸ್ಮರಿಸಿದರು. ಪುನೀತ್‌ರಾಜ್‌ಕುಮಾರ್ ಧ್ವನಿಯಲ್ಲಿರುವ 'ಬಡವರ ಬಂಧು' ಚಿತ್ರದ 'ನಿನ್ನ ಕಂಗಳ ಬಿಸಿಯ ಹನಿಗಳು ನೂರು ಕಥೆಯ ಹೇಳಿವೆ' ಹಾಡಿಗೆ ಸೊಗಸಾಗಿ ನೃತ್ಯಾಭಿನಯ ಪ್ರದರ್ಶನ ನೀಡುವ ಶಿಳ್ಳೆ-ಚಪ್ಪಾಳೆಯೊಂದಿಗೆ ಅಪಾರ ಮೆಚ್ಚುಗೆ ಪಡೆದರು.



ಮೈತ್ರಿ ವಿಶೇಷ ಶಾಲೆ ಮಕ್ಕಳಿಂದ ಶ್ರೀ ರಾಮನ ಯಶೋಗಾಥೆ ನೃತ್ಯರೂಪಕ.



ಶ್ರೀರಂಗಪಟ್ಟಣ ಸರ್ಕಾರಿ ಪದವಿ ಪೂರ್ವ ಕಾಲೇಜು ತಂಡದಿಂದ ರಾಜರ್ಷಿ ನಾಲ್ವಡಿ ಸ್ಮರಣೆ

ಪೌರಕಾರ್ಮಿಕರ ಶ್ರಮ ಶ್ಲಾಘನೀಯ

ಶಾಸಕ ಜಿ.ಟಿ.ದೇವೇಗೌಡರ ಪ್ರಶಂಸೆ

ಮೈಸೂರು, ಸೆ.26(ಎಸ್‌ಬಿಡಿ)– ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಾರ್ವಜನಿಕರಿಂದ ಒಂದೇ ಒಂದು ದೂರು ಬಾರದಂತೆ ಸ್ವಚ್ಛತೆ ನಿರ್ವಹಣೆ ಮಾಡುತ್ತಿರುವ ಪೌರಕಾರ್ಮಿಕರ ಶ್ರಮ ಶ್ಲಾಘನೀಯ ಎಂದು ಶಾಸಕ ಜಿ.ಟಿ.ದೇವೇಗೌಡರು ಪ್ರಶಂಸಿಸಿದರು.

ಬೋಗಾದಿ ಪಟ್ಟಣ ಪಂಚಾಯ್ತಿಯಲ್ಲಿ ಗುರುವಾರ ಆಯೋಜಿಸಿದ್ದ ಪೌರಕಾರ್ಮಿಕರ ದಿನಾಚರಣೆ ಸಮಾರಂಭದಲ್ಲಿ 10 ಮಂದಿ ಪೌರಕಾರ್ಮಿಕರನ್ನು ಅಭಿನಂದಿಸಿ ಮಾತನಾಡಿದ ಅವರು, ಮುಂಜಾನೆ 5.30ಕ್ಕೆ ಹಾಜರಾಗಿ ಮಳೆ, ಗಾಳಿ, ಚಳಿ ಎನ್ನದೆ ಕೆಲಸ ಮಾಡುವ ಪೌರ ಕಾರ್ಮಿಕರು ದೇವರಿದ್ದಂತೆ. ಸ್ವಚ್ಛತೆ ಬಗ್ಗೆ ಒಂದೇ ಒಂದು ದೂರು ಬಂದಿಲ್ಲ. ಇವರಿಗೆ ಅಗತ್ಯ ನೆರವು ಒದಗಿಸುವುದು ನಮ್ಮ ಕರ್ತವ್ಯ. ಪೌರಕಾರ್ಮಿಕರು ತಮ್ಮ ಮಕ್ಕಳಿಗೆ ಶಿಕ್ಷಣ ಕೊಡಿಸಬೇಕು. ಈ ಮೂಲಕ ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದು ಸಲಹೆ ನೀಡಿದರು.

ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಒಂದು ನಗರಸಭೆ, ನಾಲ್ಕು ಪಟ್ಟಣ ಪಂಚಾಯ್ತಿಗಳಿದ್ದು ಎಲ್ಲಾ ಸ್ಥಳೀಯ ಸಂಸ್ಥೆ ವ್ಯಾಪ್ತಿಯಲ್ಲೂ ಸ್ವಚ್ಛತೆ ನಿರ್ವಹಣೆ ಉತ್ತಮವಾಗಿದೆ. ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಸಚಿವರ ಮೇಲೆ ನಿರಂತರ ಒತ್ತಡ ಹಾಕಿದ್ದರ ಪರಿಣಾಮ ಗ್ರಾಮ ಪಂಚಾಯ್ತಿಯಿಂದ ನಗರಸಭೆ ಹಾಗೂ ಪಟ್ಟಣ ಪಂಚಾಯ್ತಿಗಳಾಗಿ ಮೇಲ್ದರ್ಜೆಗೇರಿಸಬೇಕೆಂಬ ಆಶಯ ಈಡೇರಿತು. ನಂತರ ಅಗತ್ಯ ಸಿಬ್ಬಂದಿಯನ್ನು ಖಾಯಂ ಮಾಡಲು ನಿರ್ಧರಿಸಲಾಯಿತು. ಕಡಿಮೆ ಸಂಬಳದಲ್ಲಿ ಕೆಲಸ ಮಾಡುತ್ತಿದ್ದ ಪೌರಕಾರ್ಮಿಕರು, ವಾಟರ್‌ಮನ್‌ಗಳು ಮತ್ತಿತರ ಸಿಬ್ಬಂದಿ ವೇತನ ಹೆಚ್ಚಳವಾಯಿತು. ಉಳಿದವರ ಉದ್ಯೋಗ ಖಾಯಂಗೂ ಸರ್ಕಾರವನ್ನು ಒತ್ತಾಯಿಸಲಾಗುವುದು ಎಂದು ಭರವಸೆ ನೀಡಿದರು.

ಈ ವೇಳೆ ಪೌರಕಾರ್ಮಿಕರಿಗೆ ಸರ್ಕಾರದ ವಿವಿಧ ಯೋಜನೆಗಳಡಿ ಸೌಲಭ್ಯಗಳನ್ನು ವಿತರಿಸಲಾಯಿತು. ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಬಸವರಾಜು, ಇಂಜಿನಿಯರ್ ಹರ್ಷ, ಆರೋಗ್ಯಾಧಿಕಾರಿ ಪುನೀತ್, ಮುಖಂಡರಾದ ಚಂದ್ರಶೇಖರ್, ಆನಂದ್, ನಗರಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಬೋಗಾದಿ ಪಟ್ಟಣ ಪಂಚಾಯ್ತಿಯಲ್ಲಿ ಗುರುವಾರ ನಡೆದ ಪೌರಕಾರ್ಮಿಕರ ದಿನಾಚರಣೆಯಲ್ಲಿ ಶಾಸಕ ಜಿ.ಟಿ.ದೇವೇಗೌಡರು, ಪೌರಕಾರ್ಮಿಕರನ್ನು ಅಭಿನಂದಿಸಿದರು.

ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಎಲ್ಲರ ಕರ್ತವ್ಯ

ಮೈಸೂರು, ಸೆ.26(ಎಸ್‌ಬಿಡಿ)– ಮಕ್ಕಳ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಎಲ್ಲರ ಕರ್ತವ್ಯವಾಗಿದೆ ಎಂದು ಶಾಸಕ ಜಿ.ಟಿ.ದೇವೇಗೌಡರು ಅಭಿಪ್ರಾಯಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ಬೋಗಾದಿ ಸರ್ಕಾರಿ ಪ್ರೌಢಶಾಲೆಯಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಪಂಚಾಯ್ತಿ ವತಿಯಿಂದ ಆಯೋಜಿಸಿದ್ದ 'ಪಿಎಂ ಪೋಷಣ್' ಮಧ್ಯಾಹ್ನ ಉಪಾಹಾರ ಯೋಜನೆಯಡಿ ಮಕ್ಕಳಿಗೆ ವಾರದಲ್ಲಿ ಆರು ದಿನ ಮೊಟ್ಟೆ ವಿತರಿಸುವ ಮೈಸೂರು ತಾಲೂಕು ಮಟ್ಟದ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು.

ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಅವರ ಆರೋಗ್ಯದ ರಕ್ಷಣೆಯೂ ತುಂಬಾ ಮುಖ್ಯ. ಇದು ಎಲ್ಲರ ಕರ್ತವ್ಯವೂ ಹೌದು. ಹಾಗಾಗಿ ಶಾಲಾ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಲಾಗುತ್ತಿದೆ. ಈ ನಿಟ್ಟಿನಲ್ಲಿ ಮೊಟ್ಟೆ ವಿತರಿಸಲು ಅಜೀಂ ಪ್ರೇಮ್‌ಜೀ ಅವರು 1590 ಕೋಟಿ ರೂ. ನೆರವನ್ನು ರಾಜ್ಯ ಸರ್ಕಾರಕ್ಕೆ ನೀಡಲು ತೀರ್ಮಾನಿಸಿದ್ದು ಶ್ಲಾಘನೀಯ. ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದಾಗ ಶಾಲಾ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಆರಂಭಿಸಿದರು. ಸಿದ್ದರಾಮಯ್ಯ ಅವರು ಸಿಎಂ ಆದ ನಂತರ ಕೆನೆಭರಿತ ಹಾಲು, ಎರಡು ದಿನ ಮೊಟ್ಟೆ ನೀಡಲಾರಂಭಿಸಿದರು. ಈಗ ವಾರದ ಆರು ದಿನ ಮೊಟ್ಟೆ ವಿತರಿಸುವುದಕ್ಕೆ ಅಜೀಂ ಪ್ರೇಮ್‌ಜೀ ಅವರು ಸರ್ಕಾರದ ಜೊತೆಗೆ ಒಪ್ಪಂದ ಮಾಡಿಕೊಂಡಿದ್ದಾರೆ. ಗೋವಿಂದೇಗೌಡರು ಶಿಕ್ಷಣ ಸಚಿವರಾಗಿದ್ದಾಗ ಸಮವಸ್ತ್ರ, ಪಠ್ಯಪುಸ್ತಕ ನೀಡಲು ಶುರು ಮಾಡಿದರು. ಬಿಸಿಯೂಟ ಜಾರಿಯಾಗಿದ್ದರಿಂದ ಮತ್ತಷ್ಟು ಅನುಕೂಲವಾಯಿತು ಎಂದರು.

ಮಕ್ಕಳು ಭವಿಷ್ಯದ ಉತ್ತಮ ಪ್ರಜೆಗಳಾಗಬೇಕು. ಶಿಕ್ಷಣಕ್ಕಷ್ಟೇ ಸೀಮಿತವಾಗಬಾರದು. ವಿದ್ಯಾವಂತರಾಗಿ, ಉದ್ಯೋಗ ಪಡೆಯಬೇಕು. ಒಳ್ಳೆಯ ನಡತೆ, ನಡವಳಿಕೆ ರೂಢಿಸಿಕೊಂಡು ಶಾಲೆ, ತಂದೆ–ತಾಯಿ, ಸಮಾಜಕ್ಕೆ ಕೀರ್ತಿ ತರಬೇಕು. ಯಾವಾಗಲೂ ಸತ್ಯಹೇಳಬೇಕು. ಸತ್ಯ ಹೇಳಲು ಹೆದರಬಾರದು. ತಂದೆ–ತಾಯಿಗೆ ಕೈ ಮುಗಿದು ಶಾಲೆಗೆ ಬರಬೇಕು. ಬಡವರ ಮಕ್ಕಳು ಶಾಲೆಗೆ ಹೋಗುವುದೇ ದುಸ್ತರವಾಗಿತ್ತು. ಈಗ ಸರ್ಕಾರದಿಂದ ಎಲ್ಲಾ ರೀತಿಯ ನೆರವನ್ನು ನೀಡಲಾಗುತ್ತಿದೆ. ಭವಿಷ್ಯದ ಸಂಪತ್ತಾದ ಇಂದಿನ ಮಕ್ಕಳು ಆರೋಗ್ಯದಿಂದ ಇರಬೇಕು. ಮೊಟ್ಟೆ ಶಾಖಾಹಾರವಾದ ಕಾರಣ ಎಲ್ಲರೂ ಸೇವಿಸಬಹುದು. ಮಕ್ಕಳು ಕಡ್ಡಾಯವಾಗಿ ಯೋಗಾಭ್ಯಾಸ ಮಾಡಬೇಕು. ಕ್ರೀಡಾಚಟುವಟಿಕೆಗಳಲ್ಲಿ ಭಾಗಿಯಾಗಬೇಕು. ಇದಕ್ಕೆ ಅಗತ್ಯ ನೆರವು ಒದಗಿಸಲು ಸಿದ್ಧನಿದ್ದೇನೆ. ಶಾಸಕನಾದ ಮೇಲೆ ಕ್ಷೇತ್ರದ ಎಲ್ಲಾ ಶಾಲೆಗಳ ಅಭಿವೃದ್ಧಿಗೆ ಶಕ್ತಿ ಮೀರಿ ನೆರವಾಗುತ್ತಿದ್ದೇನೆ ಎಂದು ತಿಳಿಸಿದರು.

ಬಳಿಕ ಮಕ್ಕಳೊಂದಿಗೆ ಸಂವಾದ ನಡೆಸಿ, ಸರಳ ಪ್ರಶ್ನೆಗಳಿಗೆ ಉತ್ತರ ಪಡೆದರು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಪ್ರಕಾಶ್, ಬಿಸಿಯೂಟ ಯೋಜನೆ ಸಹಾಯಕ ನಿರ್ದೇಶಕ ಮಹದೇವಸ್ವಾಮಿ, ಶಿಕ್ಷಕರ ಸಂಘದ ಅಧ್ಯಕ್ಷ ವಿ.ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಡಿ.ಮಾಲೇಗೌಡ, ಕೇರ್ಗಳ್ಳಿ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಮಹದೇವ, ಬೋಗಾದಿ ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕ ಲಿಂಗರಾಜು, ಬೋಗಾದಿ ಸಿಆರ್‌ಪಿ ವಿದ್ಯಾ, ಗ್ರಾಮ ಮಾಜಿ ಸದಸ್ಯರಾದ ಚಂದ್ರಶೇಖರ್, ನಾಗೇಶ್, ಆನಂದ್, ಆರೋಗ್ಯಮೇರಿ, ಬಾಬು, ನಿರ್ಮಲ ಶಿವಲಿಂಗ ಸ್ವಾಮಿ, ಪ್ರಶಾಂತ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಬೋಗಾದಿ ಸರ್ಕಾರಿ ಪ್ರೌಢಶಾಲೆಯಲ್ಲಿ ಪಿಎಂ ಪೋಷಣ್–ಮಧ್ಯಾಹ್ನ ಉಪಾಹಾರ ಯೋಜನೆಯಡಿ ಮಕ್ಕಳಿಗೆ ವಾರದಲ್ಲಿ ಆರು ದಿನ ಮೊಟ್ಟೆ ವಿತರಿಸುವ ಕಾರ್ಯಕ್ರಮಕ್ಕೆ ಶಾಸಕ ಜಿ.ಟಿ.ದೇವೇಗೌಡರು ಚಾಲನೆ ನೀಡಿದರು.